Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ದುಡಿಯುವ ಜನರ ಪ್ರಾಣಮಿತ್ರ


ಸಂಪುಟ : 16 | ಸಂಚಿಕೆ : 49 | ನವೆಂಬರ್ 28–ಡಿಸೆಂಬರ್ 4, 2022 | ಪುಟ : 16 | ಬೆಲೆ ರೂ. 10/–.
Volume: 16 | Issue: 49 | November 28 - December 4, 2022 | Pages: 16 | Price Rs 10/-



ಮಹಿಳೆಯರ ವಿರುದ್ಧ ದೌರ್ಜನ್ಯ ಭಾರತದಲ್ಲೀಗ ಗಂಭೀರ ಪರಿಸ್ಥಿತಿ




ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ
8ನೇ ರಾಜ್ಯ ಸಮ್ಮೇಳನ
AIAWU



ಕೃಷಿ ಕೂಲಿಕಾರರು: ಬೆಟ್ಟದಷ್ಟು ಬವಣೆಗಳು

ಮೀಸಲಾತಿ ಅಸ್ತಿತ್ವಕ್ಕೆ ಒದಗಿರುವ ಅಪಾಯ ಒಗ್ಗಟ್ಟಿನಿಂದ ಎದುರಿಸಬೇಕು

ಸಂದರ್ಶನ: ಬಿ.ವಿ.ರಾಘವಲು ಅವರೊಂದಿಗೆ



ವನ್ಯಮೃಗಗಳ ಹಾವಳಿ ಸರ್ಕಾರದ ನಿರ್ಲಕ್ಷ್ಯ

ಸಾರಿಗೆ ವಲಯದ ಕೆಲಸಗಾರರ ಸಂಕಷ್ಟಗಳು

ಮಿಥ್ಯೆ1 –'ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ'!

ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ. ಸಾವರ್ಕರ್ ಅಸಾಧಾರಣ ಧೈರ್ಯ ಪ್ರದರ್ಶಿಸಿದರು. ಬ್ರಿಟಿಷ್ ಆಳರಸ'ರೊಂದಿಗೆ ಅವರು ಎಂದೂ ಶಾಮೀಲಾಗಲಿಲ್ಲ ಎಂದು ಹಿಂದುತ್ವ ಪ್ರಚಾರಕರ ಮಿಥ್ಯೆಯನ್ನು ಪರಿಶೀಲಿಸುತ್ತ ಕಾಲಾಪಾನಿ ಅಥವಾ ಕರಿನೀರು ಎಂದು ಕರೆಯಲ್ಪಡುವ ಅಂಡಮಾನಿನ ಭಯಂಕರ ಸೆಲ್ಯುಲರ್ ಜೈಲಿನಲ್ಲಿ. ಗೂಡಿನಂತಿರುವ ಸಣ್ಣಕೋಣೆಯಲ್ಲಿ ಭೀಕರ ಕ್ರೌರ್ಯಗಳಿಗೆ ಒಳಗಾದವರು ಸಾವರ್ಕರ್ ಒಬ್ಬರೇ ಎಂದು ಬಿಂಬಿಸಲು ಬಿಜೆಪಿ ನೇತೃತ್ವದ ಸರ್ಕಾರವು ಶತಪ್ರಯತ್ನ ಮಾಡುತ್ತಿರುವಂತೆ ಕಾಣುತ್ತಿದೆ ಎನ್ನುವ ಲೇಖಕರು, ಸೆಲ್ಯುಲರ್ ಜೈಲು ಅಂದರೆ ಕೇವಲ ಸಾವರ್ಕರ್ ಕತೆ ಅಲ್ಲ ಎನ್ನುತ್ತಾರೆ. ಸ್ವತಃ ಸಾವರ್ಕರ್ ತಮ್ಮ ರಾಜಕೀಯ ಜೀವನದ ಮೊದಲ ಘಟ್ಟದಲ್ಲಿ, ಭಾರತವು ಹಿಂದೂ ಮತ್ತು ಮುಸ್ಲಿಮರ ನಡುವಿನ ಘರ್ಷಣೆಯ ಕಣವಾಗಿತ್ತು ಎಂಬ ವಾದವನ್ನಾಗಲೀ ಅಥವಾ ಹಿಂದೂಗಳು ಮಾತ್ರ ಭಾರತದ ಸಹಜ ದೇಶಪ್ರೇಮಿಗಳು ಎಂಬ ನಂಬಿಕೆಯನ್ನಾಗಲೀ ಹೊಂದಿರಲಿಲ್ಲ. ಅವರು ಹೇಗೆ ಹಿಂದೂ ಮತ್ತು ಮುಸ್ಲಿಂ ಸ್ವಾತಂತ್ರ್ಯ ಪ್ರೇಮಿ ಕ್ರಾಂತಿಕಾರಿಗಳ ಐಕ್ಯತೆಯನ್ನು ಅಭಿನಂದಿಸಿದರು, ಮೌಲ್ವಿ ಅಹಮದ್ ಶಾಹ್ ಅವರ ಜೆಹಾದಿ ಆದರ್ಶವನ್ನು ಹೊಗಳುವಷ್ಟರ ಮಟ್ಟಿಗೆ ಮುಂದಾದರು ಎಂಬುದರ ಕುರಿತು ಕಳೆದ ಸಂಚಿಕೆಯಲ್ಲಿ ಓದಿದ್ದೀರಿ.

ಕ್ರಾಂತಿಕಾರಿಘಟ್ಟದಿಂದ ಪ್ರತ್ಯೇಕತಾವಾದದ ಪ್ರವಾದಿಯಘಟ್ಟದತ್ತ

ಸಾವರ್ಕರ್ ಪ್ರಕಾರ:

ಮಹಾನ್ ಹಾಗೂ ಋಷಿಸದೃಶ ಅಹ್ಮದ್ ಶಾಹ್ ಲಖ್ನೌ ಮತ್ತು ಆಗ್ರಾದ ಮೂಲೆ ಮೂಲೆಗಳಿಂದ ಜೆಹಾದ್‌ನ–ಸ್ವಾತಂತ್ರ್ಯ ಸಮರದ, ನವಿರಾದ ಹಾಗೂ ಜಾಣತನದ ಜಾಲವನ್ನು ಹೆಣೆದಿದ್ದರು. ಜಗದೀಶ್ ಪುರದ ಮುಖಂಡ ಕುಮಾರ್ ಸಿಂಗ್ ತನ್ನ ಪ್ರಾಂತ್ಯದ ನೇತೃತ್ವವನ್ನು ವಹಿಸಿಕೊಂಡಿದ್ದರು, ಮತ್ತು ನಾನಾ ಅವರೊಂದಿಗೆ ಸಮಾಲೋಚನೆ ಮಾಡಿ, ಸಮರಕ್ಕೆ ಅಗತ್ಯವಿದ್ದ ಸಲಕರಣೆಗಳನ್ನು ಒಟ್ಟುಹಾಕುತ್ತಿದ್ದರು. ಪಾಟ್ನಾದಲ್ಲಿ ಜೆಹಾದ್(ಪವಿತ್ರ ಸಮರ)ನ ಬೀಜಗಳು ಎಂತಹ ಆಳಕ್ಕೆ ಹೋಗಿದ್ದವೆಂದರೆ ಇಡೀ ನಗರವು ಕ್ರಾಂತಿಕಾರಿ ಪಕ್ಷದ ನಿಯಮಿತ ಭೇಟಿತಾಣವಾಗಿತ್ತು. ಮೌಲ್ವಿಗಳು, ಎಲ್ಲಾ ಜಾತಿ ಮತ್ತು ಪಂಗಡಗಳ ಪಂಡಿತರು, ಜಮೀಂದಾರರು, ರೈತರು, ವರ್ತಕರು, ವಕೀಲರು, ವಿದ್ಯಾರ್ಥಿಗಳು ಎಲ್ಲರೂ ಸ್ವದೇಶ ಮತ್ತು ಸ್ವಧರ್ಮಕ್ಕಾಗಿ ತಮ್ಮ ಪ್ರಾಣವನ್ನೇ ಅರ್ಪಿಸಲು ಸಿದ್ಧವಾಗಿದ್ದರು.

1857ರ ಮೇ 11 ರಂದು ದೆಹಲಿಯು ಬ್ರಿಟಿಷರಿಂದ ವಿಮೋಚನೆಗೊಂಡಿತ್ತು ಮತ್ತು ಮೇ 16 ರ ಹೊತ್ತಿಗೆ ಬಹಾದುರ್ ಶಾಹಜಫರ್ ಭಾರತದ ದೊರೆ ಎಂದು ಘೋಷಣೆಯಾದ ನಂತರ ವಿದೇಶಿ ಆಳ್ವಿಕೆಯ ಎಲ್ಲಾ ಅವಶೇಷಗಳೂ ಅಳಿಸಿಹಾಕಲ್ಪಟ್ಟಿದ್ದವು. ಆ ಕಾಲದ ಸಂದರ್ಭವನ್ನು ಸಂಭ್ರಮಿಸಿದ ಸಾವರ್ಕರ್ ಹೇಳಿದರು:

ಹಿಂದೂಗಳು ಮತ್ತು ಮಹಮ್ಮದೀಯರು ಸರ್ವಾನುಮತದಿಂದ ದೆಹಲಿಯಲ್ಲಿ ರಾಷ್ಟ್ರೀಯ ಸ್ವಾತಂತ್ರ್ಯದ ಬಾವುಟವನ್ನು ಎತ್ತಿಹಿಡಿದಾಗ ಆ ಐದು ದಿನಗಳಲ್ಲಿ ಹಿಂದೂಗಳು ಮತ್ತು ಮಹಮ್ಮದೀಯರು ಭಾರತವು ತಮ್ಮ ದೇಶ ಮತ್ತು ತಾವೆಲ್ಲರೂ ಸೋದರರು ಎಂದು ಘೋಷಿಸಿದರು. ವೈಭವದಿಂದ ಕೂಡಿದ ಆ ದಿನಗಳು ಹಿಂದೂಸ್ತಾನದ ಚರಿತ್ರೆಯಲ್ಲಿ ಎಂದೆಂದಿಗೂ ಮರೆಯಲಾಗದ್ದು.

ಮುಸ್ಲಿಂ ಧೀರರ ಬಗ್ಗೆ ಸಾವರ್ಕರ್ ಅವರ ಪ್ರೀತ್ಯಾದರ

ಸಾವರ್ಕರ್ ಅವರ ಪ್ರಕಾರ, ವಿದೇಶಿ ಆಳ್ವಿಕೆಗೆ ಪ್ರತಿರೋಧ ಒಡ್ಡಿದ ಮಹಾನ್ ಚೇತನದ ಪ್ರತಿರೂಪವೆಂದರೆ ಅದು ಮುಘಲ್ ವಂಶದ ಕೊನೆಯ ಬಾದಶಾಹ ಬಹಾದುರ್ ಶಾಹಜಫರ್





ಮೌಲ್ವಿ ಅಹ್ಮದ್ ಶಾಹ್ಬಹಾದುರ್ ಶಾಹ ಜಫರ್

ಅಲ್ಲದೇ ಬೇರಾರಿರಲು ಸಾಧ್ಯವಿಲ್ಲ. "ಬೇರಾವುದೇ ದರ್ಬಾರಿಗಿಂತ ದೆಹಲಿಯ ದಿವಾನ್–ಇ–ಖಾಸ್‌ನಲ್ಲಿ ಕ್ರಾಂತಿಯ ಬೀಜಗಳು ಬೇರು ಬಿಡಲು ಆರಂಭವಾಗಿತ್ತು." ಎಂದು 1857 ರ ಬಂಡಾಯ ಸಂಘಟಿಸಿದ್ದನ್ನು ಕುರಿತು ಬರೆಯುವಾಗ ಸಾವರ್ಕರ್ ಅವರು ಬಹಾದುರ್ ಶಾಹ್‌ಜಫರ್ ಅವರಿಗೆ ಸಂಪೂರ್ಣ ಗೌರವ ಸಲ್ಲಿಸಿದ್ದರು. ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಮುಘಲರಿಗೆ ಸಾವರ್ಕರ್ ಸಂಪೂರ್ಣ ಸಹಮತ ಹಾಗೂ ಸಹಾನುಭೂತಿ ವ್ಯಕ್ತಪಡಿಸಿ ಹೀಗೆ ಬರೆದಿದ್ದರು:

ಬ್ರಿಟಿಷರು ದೆಹಲಿಯ ಬಾದಶಾಹರಿಂದ ಅವರ ಬಾದಶಾಹಿಯ ಪದವಿಯನ್ನು ಕಿತ್ತುಕೊಳ್ಳುವುದಕ್ಕೆ ಮಾತ್ರ ಸೀಮಿತವಾಗದೆ ಬಾಬರ ನ ಎಲ್ಲಾ ವಂಶಸ್ಥರಿಂದ ಆ ಬಾದಶಾಹಿ ಪದವಿಯನ್ನು ಕಿತ್ತುಹಾಕಲು ತೀರ್ಮಾನ ಮಾಡಿದ್ದರು. ಬಾದಶಾಹನು ಅಂತಹ ಕೊನೆಯ ಘಟ್ಟದಲ್ಲೂ ಮತ್ತು ಬಾದಶಾಹನ ಪ್ರೀತಿಯ, ಬುದ್ಧಿವಂತೆ ಮತ್ತು ದಿಟ್ಟ ಬೇಗಂ ಜೀನತ್ ಮಹಲ್ ಅವರು "ಗತವೈಭವವನ್ನು ಮತ್ತೆ ಪಡೆದುಕೊಳ್ಳಲು ಇರುವ ಈ ಕೊನೆಯ ಅವಕಾಶವನ್ನು ಹಾಗೆಯೇ ಬಿಡಬಾರದು, ಪ್ರಾಣತ್ಯಾಗವೊಂದೇ ದಾರಿಯೆಂದಾದರೆ ಅದಕ್ಕೂ ಸಿದ್ಧವಾಗಿ ಬಾದಶಾಹ ಮತ್ತು ಬಾದಶಾಹಿನಿಯ ಘನತೆಗೆ ತಕ್ಕಂತೆ ಸಾಯುವುದೇ ಒಳ್ಳೆಯದು" ಎಂದು ಅದಾಗಲೇ ನಿರ್ಧರಿಸಿದ್ದರು.

ಸಾವರ್ಕರ್ ಅವರು ತಮ್ಮ ಪ್ರಧಾನಕೃತಿಯನ್ನು ಬಹಾದುರ್ ಶಾಹ ಜಫರ್ ಅವರ ಎರಡು ದ್ವಿಪದಿಗಳನ್ನು ಉಲ್ಲೇಖಿಸಿ ಈ ಕೆಳಗಿನಂತೆ ಮುಕ್ತಾಯಗೊಳಿಸಿದ್ದರು:

ಬಾದಶಾಹ ಬಹಾದುರ್‌ಶಾಹ ಒಬ್ಬ ಮಹಾನ್ ಕವಿಯಾಗಿದ್ದರು. ಕ್ರಾಂತಿಯ ಆ ಆವೇಶದ ಅವಧಿಯಲ್ಲಿ ಒಂದು ಗಝಲ್‌ನ್ನು ಕಲಾತ್ಮಕವಾಗಿ ಬರೆದಿದ್ದರು. ಯಾರೋ ಅವರನ್ನು ಕೇಳಿದರು:

ದಮ್‌ದಮೇಮೇಂದಂ ನಹೀ ಖೈರ್ ಮಾಂಗೋಜಾನ್‌ಕೀ/
ಐ ಜಫರ್‌ಥಂಡೀ ಹುಯೀ ಶಂಶೇರ್ ಹಿಂದೂಸ್ತಾನ್‌ಕೀ

(ಈಗ, ಆ ಪ್ರತಿಯೊಂದು ಕ್ಷಣವೂ, ನೀನು ದುರ್ಬಲನಾಗುತ್ತಿದ್ದೀಯ, ಪ್ರಾರ್ಥಿಸು ನಿನ್ನ ಜೀವಕ್ಕಾಗಿ ಏಕೆಂದರೆ, ಓ ಜಫರ್, ಹಿಂದೂಸ್ತಾನದ ಖಡ್ಗವೀಗ ಮುರಿದುಹೋಗಿದೆ)

ಅದಕ್ಕೆ ಅವರು ಈ ದ್ವಿಪದಿಯ ಮೂಲಕ ಉತ್ತರ ನೀಡಿದರು,

ಘಾಜಿಯೋಂಮೇಂ ಬೂ ರಹೇಗಿ ಜಬ್‌ತಲಕ್ ಇಮಾನ್‌ಕೀ
ತಖ್ತೇ ಲಂದನ್‌ತಕ್ ಚಲೇಗಿ ತೇಗ್ ಹಿಂದೂಸ್ತಾನ್‌ಕೀ

(ಎಲ್ಲಿಯತನಕ ಇರುವುದೋ ಇನಿತು ನಂಬಿಕೆಯ ಒಲವು ನಮ್ಮ ಧೀರರೆದೆಯಲ್ಲಿ, ತಲುಪುವುದು ಲಂಡನ್ನಿನ ಸಿಂಹಾಸನದವರೆಗೆ ಹಿಂದೂಸ್ತಾನದ ಖಡ್ಗವು)


ಮೊದಲ ದ್ವಿಪದಿಯಲ್ಲಿನ ಪ್ರಶ್ನೆಯು, ನಿಜವಾಗಿಯೂ, ಕ್ರಾಂತಿಕಾರಿಗಳ (1857) ಸೋಲಿನ ನಂತರ ಜಫರ್ ಅವರ ಪರಿಚಿತನ ಭಾವನೆಗಳನ್ನು ತಿಳಿಸುವ ಮೂಲಕ ವ್ಯಕ್ತಪಡಿಸಿದ್ದು. ಎರಡನೆಯ ದ್ವಿಪದಿಯು ಆ ಸೋಲಿನ ನಂತರವೂ ಜಾಫರ್‌ಅವರ ನಿರ್ಧಾರವನ್ನು ವ್ಯಕ್ತಪಡಿಸಿತು.

ಭಗತ್ ಸಿಂಗ್‌ನಂತಹ ಕ್ರಾಂತಿಕಾರಿಗಳು ಸಾವರ್ಕರ್ ಮತ್ತವರ ತತ್ವವನ್ನು ಸಂಪೂರ್ಣವಾಗಿ ಒಪ್ಪಿಕೊಂಡಿದ್ದರು ಮತ್ತು ಸಾವರ್ಕರ್‌ಅವರು ಬ್ರಿಟಿಷ್ ಆಳ್ವಿಕೆಯ ವಿರುದ್ಧದ ರಾಷ್ಟ್ರೀಯ ಹೋರಾಟದ ಸಂಕೇತವಾಗಿದ್ದರು ಎಂದು ಹಿಂದೂ ಕೋಮುವಾದಿ ಶಕ್ತಿಗಳು ಆಗಾಗ ವಾದ ಮಾಡುತ್ತಾರೆ. ಸಾವರ್ಕರ್‌ಅವರ ಮೊದಲ ಹಂತದ ಹೋರಾಟಕ್ಕೆ ಸಂಬಂಧಪಟ್ಟಂತೆ ಅದು ನಿಜವೇ ಆಗಿತ್ತು; ಏಕೆಂದರೆ ಸಾವರ್ಕರ್‌ಅವರು ಆಗ ವಸಾಹತುಶಾಹಿ ಆಳ್ವಿಕೆಯ ವಿರುದ್ಧ ಹಿಂದೂ ಮತ್ತು ಮುಸ್ಲಿಮರು ಇಬ್ಬರೂ ಒಗ್ಗೂಡಿ ಹೋರಾಡಬೇಕು ಎಂಬ ಧೋರಣೆ ಹೊಂದಿದ್ದರು ಹಾಗೂ ಸಂಯುಕ್ತದೇಶದ ಪರವಾಗಿ ನಿಂತಿದ್ದರು. ಕ್ರಾಂತಿಕಾರಿಗಳು ಸಾವರ್ಕರ್‌ಅವರ ಈ ಹಂತದ ಹೋರಾಟವನ್ನು ಮೆಚ್ಚಿದ್ದರು; ಮತ್ತು ಆ ಕಾರಣಕ್ಕಾಗಿಯೇ ಭಗತ್ ಸಿಂಗ್ ಮತ್ತವರ ಸಂಗಾತಿಗಳು ಬಂಧನಕ್ಕೊಳಗಾದಾಗ, ಅವರ ಅಡಗುತಾಣದಿಂದ ಸಾವರ್ಕರ್‌ಅವರ 1857 ಬಂಡಾಯ ಕುರಿತ ನಾಲ್ಕನೇ ಮುದ್ರಣದ ಪ್ರತಿಗಳನ್ನು ಪೋಲಿಸರು ವಶಪಡಿಸಿಕೊಂಡಿದ್ದರು. ಸಾವರ್ಕರ್, ಹಿಂದುತ್ವದತ್ತ ತಿರುಗಿ ಕೇವಲ ಹಿಂದೂಗಳನ್ನು ಮಾತ್ರ ಸಂಘಟಿಸುವುದಕ್ಕೆ ತೊಡಗಿಗೊಂಡಿದ್ದು ತಮ್ಮ ರಾಜಕೀಯ ಜೀವನದ ಎರಡನೇ ಹಂತದಲ್ಲಿಯಷ್ಟೇ, ಮೊದಲ ಹಂತದಲ್ಲಿ ಅವರು ಎಲ್ಲರನ್ನೂ ಒಳಗೊಂಡ ರಾಷ್ಟ್ರೀಯ ಚಟುವಟಿಕೆಗಳಿಗೆ ತೆರೆದುಕೊಂಡಿದ್ದರು. ಸಾವರ್ಕರ್‌ಅವರು 1904 ರಲ್ಲಿ ಸ್ಥಾಪಿಸಿದ 'ಅಭಿನವ್ ಭಾರತ್' ಎಂಬ ಮೊದಲ ಕ್ರಾಂತಿಕಾರಿ ಸಂಘಟನೆಗೆ ಎಲ್ಲಾ ಧರ್ಮಗಳ ಜನರು ಆಕರ್ಷಿತರಾಗಿದ್ದರು ಎಂಬುದನ್ನು ಗಮನಿಸಬೇಕು. ಇಲ್ಲಿ ಒಂದು ಘಟನೆಯನ್ನು ಪ್ರಸ್ತಾಪಿಸಲೇಬೇಕು. 1857 ಕುರಿತ ಅವರ ಪುಸ್ತಕವನ್ನು ಬ್ರಿಟಿಷ್ ಸರ್ಕಾರ ನಿಷೇಧ ಮಾಡಿದಾಗ ಹಾಲೆಂಡಿನಲ್ಲಿ ಅದನ್ನು ಗುಟ್ಟಾಗಿ ಮುದ್ರಿಸಲಾಯಿತು; ಅದನ್ನು ಭಾರತಕ್ಕೆ ರಹಸ್ಯವಾಗಿ ಕೊಂಡುತರಲು ಧೈರ್ಯಮಾಡಿದ್ದು ಹದಿಹರೆಯದ ಯುವಕ 'ಅಭಿನವ್ ಭಾರತ್'ದ ಸದಸ್ಯರಾಗಿದ್ದ ಸಿಕಂದರ್ ಹಯಾತ್‌ಖಾನ್. ಅವರು ನಂತರದಲ್ಲಿ ಅವಿಭಜಿತ ಭಾರತದಲ್ಲಿ ಪಂಜಾಬಿನ ಮುಖ್ಯಮಂತ್ರಿಯಾದರು ಕೂಡ. ಅವರು ವಿದೇಶದಿಂದ ಬರುವಾಗ ತಮ್ಮ ಚೀಲದ ಹುಸಿತಳದಲ್ಲಿ ಆ ಪುಸ್ತಕದ ಕೆಲವು ಪ್ರತಿಗಳನ್ನು ತಂದಿದ್ದರು.

ಎರಡನೇ ಘಟ್ಟ: ಹಿಂದೂ ಪ್ರತ್ಯೇಕತಾವಾದದ ಪ್ರವಾದಿಯಾಗಿ ಬ್ರಿಟಿಷರ ಎದುರು ಶರಣಾಗತಿ


ಆದರೆ ಸೆಲ್ಯುಲರ್ ಜೈಲಿನಲ್ಲಿನ ಕಾರಾಗೃಹವಾಸ ಮತ್ತು ಅವರು ಅಲ್ಲಿ ಪಡಬೇಕಾದ ಘೋರಯಾತನೆಯು ಅವರನ್ನು ಸಂಪೂರ್ಣವಾಗಿ ಕುಗ್ಗಿಸಿತು. ಅದು ಅವರನ್ನು ರಾಜಕೀಯ ಬದುಕಿನ ಎರಡನೇ ಘಟ್ಟಕ್ಕೆ ಎಳೆದೊಯ್ಯಿತು. 1913 ರ ಹೊತ್ತಿಗೆ, ತನ್ನ ಬ್ರಿಟಿಷ್ ಯಜಮಾನರ 'ಒಡೆದು ಆಳು'ವ ಸಂಚಿಗೆ ಸಹಾಯ ಮಾಡಲು ಅವರು ಸಿದ್ಧರಾದರು. ಭಾರತ ಸರ್ಕಾರದ ಗೃಹ ಸಚಿವಾಲಯದ ಸದಸ್ಯ ಸರ್ ರೆಜಿನಾಲ್ಡ್ ಕ್ರಾಡ್ಡೊಕ್ 1913 ರಲ್ಲಿ ಸೆಲ್ಯುಲರ್ ಜೈಲಿಗೆ ಭೇಟಿ ನೀಡಿದ್ದ

ಪುಟ 7 ಕ್ಕೆ



ಬಹಾದುರ್ ಶಾಹ ಕೊನೆಯ ದಿನಗಳು–ಬ್ರಿಟಿಶರ ಕೈದಿಯಾಗಿ

ಭಾಗ–5



'ವೀರ' ಸಾವರ್ಕರ್ –ಏಳು ಮಿಥ್ಯೆಗಳು

ಮಿಥ್ಯೆಗಳನ್ನು ಸತ್ಯಸಂಗತಿಗಳಿಂದ ಬೇರ್ಪಡಿಸುವ ಒಂದು ಪ್ರಾಮಾಣಿಕ ಆಕಾಂಕ್ಷೆಯಿಂದ ರಚಿಸಿರುವ ಡಾ.ಶಮ್ಸುಲ್ ಇಸ್ಲಾಮ್‌ರವರ 'ಸಾವರ್ಕರ್ ಅನ್ ಮಾಸ್ಕ್ಡ್' ಪ್ರಸ್ತಾವನೆಯಲ್ಲಿ ಸಾವರ್ಕರ್ ಅವರನ್ನು ರಾಷ್ಟ್ರೀಯ ನೇತಾರನನ್ನಾಗಿ ಬಿಂಬಿಸುವ ಯಾವುದೇ ಯೋಜನೆ 1998 ಕ್ಕೂ ಮುಂಚೆ ಹಿಂದುತ್ವ ಬ್ರಿಗೇಡಿಗೆ ಇರಲಿಲ್ಲ, ನಂತರ ಅದು ಮುನ್ನೆಲೆಗೆ ಬರುವಲ್ಲಿ ಕಾಂಗ್ರೆಸ್ ಪಕ್ಷದ ಪಾತ್ರವೂ ಇದೆ ಎಂಬುದನ್ನು ಪರಿಶೀಲಿಸುತ್ತ ಸಾವರ್ಕರ್ ಅವರ ಹೊಗಳುಭಟರ ತಂಡದಲ್ಲಿ ಕಾಂಗ್ರೆಸ್ ಕೂಡ ಸೇರಿಕೊಂಡದ್ದು ವಿಷಾದದ ಸಂಗತಿ ಎನ್ನುತ್ತಾರೆ. ಮುಂದೆ ಅವರು ಸಾವರ್ಕರ್‌ರವರನ್ನು ಕುರಿತ ಏಳು ಮಿಥ್ಯೆಗಳನ್ನು ಒಂದೊಂದಾಗಿ ಈ ದಾಖಲೆಗಳ ಬೆಳಕಿನಲ್ಲಿ ಪರಿಶೀಲಿಸುತ್ತಾರೆ.

ಡಾ.ಶಮ್ಸುಲ್ ಇಸ್ಲಾಂ

ಅನು: ಟಿ.ಸುರೇಂದ್ರರಾವ್

ಸಂಪಾದಕೀಯ

ಹೆಚ್ಚಿದ ಮೀಸಲಾತಿ ಬೇಡಿಕೆಗಳು ಮತ್ತು ಅಡಗಿಕೊಂಡಿರುವ ರಾಜಕಾರಣ

ಕರ್ನಾಟಕದಲ್ಲಿ ಮೀಸಲಾತಿ ವಿಷಯ ರಾಜಕಾರಣದ ಕೇಂದ್ರ ವಸ್ತುವಾಗುತ್ತಿದೆ ಎಂದು ಅನಿಸುವಂತೆ ವಿದ್ಯಾಮಾನಗಳು ಘಟಿಸುತ್ತಿವೆ. ಈಗಾಗಲೇ ಮೀಸಲಾತಿ ಪಟ್ಟಿಯಲ್ಲಿರುವ ವಿವಿಧ ಸಮುದಾಯಗಳು ಸಿಗಬೇಕಾದ ನ್ಯಾಯ ಸಿಕ್ಕದೇ ಪರಿತಪಿಸುತ್ತಿರುವಾಗ ಹೊಸದಾಗಿ ತಮ್ಮನ್ನು ಮೀಸಲಾತಿ ಪಟ್ಟಿಯ ವಿವಿಧ ವರ್ಗಗಳಲ್ಲಿ ಸೇರಿಸಬೇಕೆಂದೂ, ಅಥವಾ ಈಗಿರುವ ವರ್ಗದಿಂದ ಬೇರೊಂದು ವರ್ಗಕ್ಕೆ ಬದಲಾಯಿಸಬೇಕೆಂಬ ಆಗ್ರಹಗಳು ಮೇಲಿಂದ ಮೇಲೆ ಬರುತ್ತಿವೆ. ತಮ್ಮ ಎಲ್ಲಾ ಸಮಸ್ಯೆಗಳಿಗೆ ಮೀಸಲಾತಿ ದಿವ್ಯೌಷಧ ಎಂದು ಭಾವಿಸಿದಂತೆ ಭಾಸವಾಗುತ್ತಿದೆ.

ಪ್ರಸಕ್ತವಾಗಿ ಪಂಚಮಸಾಲಿ ಸಮುದಾಯವನ್ನು 2ಎ ಗೆ ಸೇರಿಸಬೇಕೆಂದು ಕೇಳಲಾಗುತ್ತಿದೆ. ವಿಧಾನಸಭಾ ಅಧಿವೇಶನ ಆರಂಭಗೊಳ್ಳುವ ಡಿಸೆಂಬರ್ 19 ರೊಳಗೆ ಹಿಂದುಳಿದ ವರ್ಗಗಳ ಆಯೋಗದಿಂದ ವರದಿ ಪಡೆಯದಿದ್ದಲ್ಲಿ ತೀವ್ರಗೊಂಡ ಹೋರಾಟವನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಲಾಗಿದೆ. ಒಕ್ಕಲಿಗರು ತಮಗಿರುವ ಮೀಸಲಾತಿಯ ಪ್ರಮಾಣ ಶೇ.4 ರಿಂದ 12ಕ್ಕೆ ಹೆಚ್ಚಿಸಬೇಕೆಂದು ಅದಕ್ಕಾಗಿ ನವೆಂಬರ್ 27 ರಂದು ಸಮಾವೇಶ ನಡೆಸಿ ಭಾರೀ ಹೋರಾಟದ ಸಿದ್ಧತೆಯಲ್ಲಿದ್ದಾರೆ. ಹಿಂದುಳಿದ ವರ್ಗದ ಪಟ್ಟಿಯಲ್ಲಿರುವ ಕುರುಬರು ಪರಿಶಿಷ್ಠ ಪಂಗಡ–ಎಸ್.ಟಿ. ಗೆ ತಮ್ಮನ್ನು ಸೇರಿಸಲೇ ಬೇಕೆಂದು ಮತಪ್ರದರ್ಶನ ನಡೆಸಿ ಅವರೂ ಗಡುವು ನೀಡಿದ್ದಾರೆ. ತಮ್ಮನ್ನು ಎಸ್.ಟಿ. ಪಟ್ಟಿಯಲ್ಲಿರುವ ಜೇನು ಕುರುಬರು, ಬೆಟ್ಟ ಕುರುಬರಂತೆ ಪರಿಗಣಿಸಬೇಕೆಂಬ 'ನಂಟ'ನ ವಾದವನ್ನೂ ಮಂಡಿಸುತ್ತಿದ್ದಾರೆ. ಇತ್ತೀಚೆಗೆ ಅಧ್ಯಯನದ ಹೆಸರಿನಲ್ಲಿ ವಾದಗಳೂ ಹುಟ್ಟಿ ಈ ಕೂಗು ಹೆಚ್ಚಿದೆ. ಈಗಾಗಲೇ ಹಿಂದುಳಿದ ವರ್ಗದ ಪಟ್ಟಿಯಲ್ಲಿರುವ ಕೊಡವರು ಸಹ ತಮ್ಮನ್ನು ಪರಿಶಿಷ್ಠ ಪಂಗಡ–ಎಸ್.ಟಿ. ಗೆ ಸೇರಿಸಬೇಕೆಂದು ವಾದ ಮಂಡಿಸಿ ಆಡಳಿತಾತ್ಮಕ ಸಿದ್ಧತೆಗಳನ್ನೂ ಮಾಡಿಕೊಂಡು ಯಾವುದೋ ನಿರೀಕ್ಷೆಯಲ್ಲಿದ್ದಾರೆ. ಅತ್ತ ಹೈ.ಕ.ದಲ್ಲಿ ಕೋಲಿ ಸಮಾಜ ಸಹ ಎಸ್.ಟಿ. ಗೆ ಸೇರಿಸಲು ಕೇಳುತ್ತಿದೆ. ಮತ್ತು ಆಗಲೇ ಎಸ್.ಟಿ ಪ್ರಮಾಣ ಪತ್ರ ಪಡೆಯಲಾಗುತ್ತಿದೆ ಎಂಬ ದೂರುಗಳು ಬಂದಿದ್ದು, ಅದನ್ನು ತಡೆಯುವಂತೆ ಸಚಿವ ಶ್ರೀರಾಮುಲು ಅವರಿಗೆ ಎಸ್.ಟಿ. ಸಮುದಾಯದಿಂದ ಘೆರಾವೋ ನಡೆದಿದೆ. ಈಗಾಗಲೇ ಆ ಭಾಗದಲ್ಲಿರುವ ಕುರುಬರು ಗೊಂಡರು ಎಂದು ಪ್ರಮಾಣ ಪತ್ರಗಳನ್ನು ಪಡೆದು ಮೀಸಲಾತಿ ಸವಲತ್ತು ಪಡೆಯುತ್ತಿದ್ದಾರೆ. ವಿಚಿತ್ರವೆಂದರೆ ಮೂಲ ನಿವಾಸಿಗಳಾದ, ಹಾಲಕ್ಕಿ, ಕುಣಬಿ, ಕುಂಬ್ರಿ ಮರಾಠಿ, ಗೌಳಿ ಯಂತಹ ಆದಿವಾಸಿ ಸಮುದಾಯಗಳ ಬೇಡಿಕೆ ಇಟ್ಟು ಕೂಗಿ ಬಸವಳಿದು ಕುಳಿತಿವೆ. ಅದನ್ನು ಕೇಳುವವರೇ ಇಲ್ಲವಾಗಿದೆ. ನಾಲ್ಕು ದಶಕಗಳ ವಂಚನೆಯ ಬಳಿಕ ಎಸ್.ಸಿ. ಮತ್ತು ಎಸ್.ಟಿ.ಗಳ ಮೀಸಲಾತಿ ಪ್ರಮಾಣ ಹೆಚ್ಚಳವಾದ ಆದೇಶ ಹೊರ ಬಿದ್ದರೂ ಅದು ದಕ್ಕುವಂತಹ ಕ್ರಮಗಳು ಇನ್ನೂ ಆಗಲಿಲ್ಲ. ಆದರೆ ಓಟು ತನಗೇ ಹಾಕಬೇಕು ಎಂಬ ಚೌಕಾಸಿ ಷರತ್ತನ್ನು ಆಡಳಿತ ಬಿಜೆಪಿ ಪಕ್ಷ ಸಮಾವೇಶ ನಡೆಸಿ ವಿಧಿಸುತ್ತಿದೆ.

ಯಾವುದೇ ಜಾತಿ, ವರ್ಗದ ಜನ, ಸಾಮಾನ್ಯ ಪ್ರಜೆಗಳು ತಮ್ಮ ಕೇಳಿಕೆಗಳನ್ನು ಸರಕಾರದ ಮುಂದೆ ಮಂಡಿಸುವುದು ತಪ್ಪಲ್ಲ. ಅದು ಒಂದು ಪ್ರಜಾಸತ್ತಾತ್ಮಕ ಹಕ್ಕಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ತಾವು ಈಗಿರುವುದಕ್ಕಿಂತಲೂ ಮತ್ತಷ್ಟೂ ಹಿಂದೆ ಉಳಿದವರೆಂದು ಗುರುತಿಸಬೇಕೆಂದು ಕೇಳುತ್ತಿರುವುದು ಒಂದು ವಿಪರ್ಯಾಸದಂತೆ ಕಾಣುತ್ತಿದೆ. ಅಂದರೆ ಈಗ ನೀಡಲಾದ ಮೀಸಲಾತಿ ಅಂದುಕೊಂಡಂತೆ ಸಮುದಾಯಗಳ ಬಾಳಿನಲ್ಲಿ ನಿರೀಕ್ಷಿತ ಬದಲಾವಣೆಯನ್ನು ತರಲಿಲ್ಲ. ಅದು ಸ್ಥಗಿತಗೊಂಡಿದೆ ಎಂಬುದನ್ನು ಇದು ಪರೋಕ್ಷವಾಗಿ ಧ್ವನಿಸುತ್ತದೆ. ಹಾಗೇ ಎಸ್.ಸಿ, ಎಸ್.ಟಿ. ಯಂತಹ ವರ್ಗಗಳಿಗೆ ತಾವು ಬಂದರೆ ಬಂದರೆ ಮಹದಿನ್ನೇನೋ ಸಾಧಿಸಿಕೊಳ್ಳಬಹುದು ಎನ್ನುವ ತಪ್ಪು ಗ್ರಹಿಕೆ, ಭ್ರಮೆಗೆ ಒಳಗಾದಂತೆಯೂ ಕಾಣುತ್ತದೆ. ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ರಾಜಕೀಯವಾಗಿಯೂ ಒಂದು ಮಟ್ಟಿಗೆ ಇತರ ವಿಭಾಗಗಳಿಗಿಂತ ಉತ್ತಮ ಸ್ಥಿತಿಯಲ್ಲಿರುವ ಜಾತಿ, ಸಮುದಾಯಗಳು ತಮ್ಮ ಮೀಸಲಾತಿ ವಿಂಗಡನೆಯ ಪಟ್ಟಿಯ ಪರಿ ವ್ಯಾಪ್ತಿಯೊಳಗೆ ಅತಿಕ್ರಮಿಸುವುದನ್ನು ಕಂಡ ದುರ್ಬಲ, ತಳ ಸಮುದಾಯಗಳು ಕಳವಳಕ್ಕೀಡಾಗುತ್ತಿವೆ. ವಿಚಿತ್ರವೆಂದರೆ ಉದಾರೀಕರಣ, ಖಾಸಗೀಕರಣದಿಂದಾಗಿ ಮೀಸಲಾತಿ ವ್ಯವಸ್ಥೆಯೇ ಸೊರಗಿ ಅರ್ಥಹೀನವಾಗುತ್ತಿರುವಾಗ ಮುಂದುವರೆದ ಜಾತಿಗಳಲ್ಲಿನ 'ಹಿಂದುಳಿಯುವ' 'ಉನ್ಮಾದ ಬಯಕೆ' ವಿಚಿತ್ರವೇ ಸರಿ. ನಿಜ, ಮೀಸಲಾತಿಯ ಹೆಚ್ಚಳ ಅಥವಾ ಬದಲಾವಣೆ ಅಥವಾ ಸೇರ್ಪಡೆಯ ಬೇಡಿಕೆಯನ್ನು ಮಂಡಿಸುತ್ತಿರುವ ಜನ ಜಾತಿಗಳು ಆರ್ಥಿಕ, ಸಾಮಾಜಿಕ– ಸಾಂಸ್ಕೃತಿಕ ಬಿಕ್ಕಟ್ಟನ್ನು ಎದುರಿಸುತ್ತಿವೆ. ಸ್ಥಗಿತತೆ ಅಥವಾ ಹಿನ್ನಡೆಯ ಸಂಕಟವನ್ನು ಅನುಭವಿಸುತ್ತಿವೆ. ದುರಂತವೆಂದರೆ ಈ ಸಂಕಟಗಳ ಸೃಷ್ಟಿಕರ್ತರು ಕಾಣದೇ ಇರುವುದು! ಮತ್ತಿನ್ನೆಲ್ಲೋ ಹುಡುಕುತ್ತಿರುವುದು.

ಈಗಿರುವ ಮೀಸಲಾತಿ ಪಟ್ಟಿಯಿಂದ ತಮ್ಮನ್ನು ಬದಲಾಯಿಸ ಬೇಕೆಂದು ಕೇಳುತ್ತಿರುವ ಪಂಚಮಸಾಲಿ, ಒಕ್ಕಲಿಗರು, ಕುರುಬರು ಬಹುತೇಕರು ಕೃಷಿಕ ಸಮುದಾಯಗಳಾಗಿವೆ. ನಮ್ಮನ್ನಾಳುವ ವರ್ಗಗಳು ಸೃಷ್ಟಿಸಿರುವ ಕೃಷಿಯ ಆಳವಾದ ಬಿಕ್ಕಟ್ಟಿನ ಮೊದಲ ಬಲಿಗಳು ಈ ಸಮುದಾಯಗಳೇ ಆಗಿವೆ. ಮೂಲಭೂತವಾಗಿ ಆ ನೀತಿಗಳ ಎದುರು, ಅವನ್ನು ಬಲಯುತವಾಗಿ ಜಾರಿಗೊಳಿಸುತ್ತಾ ದಿವಾಳಿಯೆಬ್ಬಿಸುತ್ತಿರುವ ಸರಕಾರದ ವಿರುದ್ಧ ಸೆಟೆದು ನಿಲ್ಲಬೇಕಿತ್ತು. ಸ್ವಲ್ಪವಾದರೂ ಪ್ರಜಾಪ್ರಭುತ್ವೀಕರಣಗೊಂಡಿದ್ದ ಕೃಷಿ ವಲಯ ನಾಶಕ್ಕೀಡಾಗುತ್ತಾ ಕಾರ್ಪೋರೇಟ್ ಕಂಪನಿಗಳ ಬಾಯಿಗೆ ದೂಡುತ್ತಿರುವುದು ಗೋಚರವಾಗಬೇಕಿತ್ತು. ಆದರೆ ಹಾಗಾಗುತ್ತಿಲ್ಲ. ಮೈಗೆ ಬಿದ್ದ ಏಟು ಮನಸ್ಸಿಗೆ ತಿಳಿಯದಿರುವಂತೆ ತಡೆಯೊಡ್ಡುತ್ತಿರುವ ಪ್ರಮುಖ ಅಂಶಗಳಲ್ಲಿ ಒಂದು 'ಹಿಂದುತ್ವದ ಕೋಮುವಾದ, ಮತ್ತೊಂದು ಜಾತಿ ರಾಜಕಾರಣದ ಅಸ್ಮಿತೆ. ಇವುಗಳು ಪ್ರತಿ ಜಾತಿ, ಸಮುದಾಯಗಳು ಅನುಭವಿಸುತ್ತಿರುವ ಬಿಕ್ಕಟ್ಟು ಕಾಣದಂತೆ ಹಾದಿ ತಪ್ಪಿಸಿವೆ. ಇದಕ್ಕೆ ಆಳವಾಗಿ ಬೇರೂರಿರುವ ಜಾತಿ ವ್ಯವಸ್ಥೆಯ ಜನ್ಯವಾದ ತಾರತಮ್ಯ, ಅಸಹನೆ, ದ್ವೇಷದ ಮನೋಭಾವವೂ ಉರಿವ ಬೆಂಕಿಗೆ ತುಪ್ಪ ಸುರಿಯುತ್ತಿದೆ. ಈ ಬಗ್ಗೆ ಪ್ರಜಾಸತ್ತಾತ್ಮಕ ಜನ ಚಳುವಳಿಗಳ ಮಿತಿಗಳು ಮತ್ತು ವೈಫಲ್ಯಗಳ ಅವಲೋಕನವೂ ಅಗತ್ಯ.

ಇಂದು ವರ್ತಮಾನದ ಒಟ್ಟು ಸಂಗತಿಗಳನ್ನು ಈ ಸಮುದಾಯಗಳು ಅರ್ಥ ಮಾಡಿಕೊಳ್ಳಬೇಕಿದೆ. ಮೀಸಲಾತಿ ಪಟ್ಟಿಯಲ್ಲಿ ಸ್ಥಾನ ಪಲ್ಲಟಗಳು ಮೂಲಭೂತ ಬದಲಾವಣೆಗಳನ್ನೇನೂ ತರುವುದಿಲ್ಲ ಎಂಬ ಸತ್ಯ ಅರಿಯಬೇಕು. ಹಾಗಾಗಿ ಅತಿಕ್ರಮಣದಂತಹ ಯೋಚನೆಗಳನ್ನು ಬಿಡಬೇಕು. ಎಲ್ಲಾ ಕಡೆಗಳಿಂದ ಬೇಡಿಕೆಗಳನ್ನು ಹುಟ್ಟು ಹಾಕುವಲ್ಲಿ ಸ್ಥಾಪಿತ ಹಿತಾಸಕ್ತಿಗಳ ಕೈವಾಡವನ್ನು ಅಲ್ಲಗಳೆಯಲಾಗದು. ಮೀಸಲಾತಿ ಹಕ್ಕಾಗಿರುವ ಸಮುದಾಯಗಳು ವಂಚಿತವಾಗಬಾರದು. ಈ ಎಲ್ಲಾ ಗೊಂದಲಗಳನ್ನು ಹುಟ್ಟು ಹಾಕುವಲ್ಲಿ ಆಳುವವರ್ಗಗಳ ಹಿತಾಸಕ್ತಿಗಳು, ಸಂಕುಚಿತ ರಾಜಕಾರಣ ದುರುದ್ದೇಶವಿದೆ. ಈಗ ಎದ್ದು ಬರುತ್ತಿರುವ ಮೀಸಲಾತಿ ಬೇಡಿಕೆಗಳು ಮೀಸಲಾತಿಯನ್ನೇ ಅಪ್ರಸ್ತುತಗೊಳಿಸುವ ಅಪಾಯ ಇಲ್ಲದಿಲ್ಲ ಮತ್ತು ಅದನ್ನು ರಾಜಕೀಯ ಉದ್ದೇಶಗಳಿಗೆ ಬಳಸುವ ಸಾಧ್ಯತೆಗಳೂ ಇಲ್ಲದಿಲ್ಲ. ಆದ್ದರಿಂದ ಸಮುದಾಯಗಳು, ವಿವಿಧ ಜನ ವಿಭಾಗಗಳು ತಮ್ಮ ಸಂಕಷ್ಟಗಳಿಗೆ ಬೇರೆಯದೇ ಆದ ದಾರಿಯನ್ನು ಕಂಡುಕೊಳ್ಳಬೇಕು.

ದರ್ಗಾ ಪೀಠ: ವ್ಯವಸ್ಥಾಪನಾ ಸಮಿತಿ ರಚನೆ ಸರಳವಿಲ್ಲದ ಉದ್ದೇಶಗಳು

ಈ ವಾರ

ಎಸ್.ವೈ. ಗುರುಶಾಂತ್

ಬಾಬಾಬುಡನ್ ಸ್ವಾಮಿದರ್ಗಾ ಪೀಠದ ನಿರ್ವಹಣೆಗೆ ರಚಿಸಲಾದ ವ್ಯವಸ್ಥಾಪನ ಸಮಿತಿ ಚಿಕ್ಕಮಗಳೂರು ಜಿಲ್ಲಾಧಿಕಾರಿಗಳ ಉಪಸ್ಥಿತಿಯಲ್ಲಿ ಅಧ್ಯಕ್ಷರನ್ನು ಆಯ್ಕೆ ಮಾಡಿಕೊಂಡಿದೆ. ಎಂಟು ಸದಸ್ಯರಲ್ಲಿ ಒಬ್ಬ ಸದಸ್ಯರು ಗೈರು ಹಾಜರಾಗಿದ್ದರು. ಕಾರಣ ತಿಳಿದಿಲ್ಲ. ಆದರೆ ಅವರು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರು ಎನ್ನುವುದು ಗಮನಿಸ ಬೇಕಾದ ಅಂಶ.

ಕರ್ನಾಟಕದ ಉಚ್ಚ ನ್ಯಾಯಾಲಯದ ತೀರ್ಪನ್ನು ಆಧರಿಸಿ ಈ ಸಮಿತಿಯನ್ನು ರಚಿಸಲಾಗಿದೆ ಎಂದು ಸರಕಾರ ಹೇಳುತ್ತಿದೆ. ಬಾಬಾಬುಡನ್ ಗಿರಿ ದರ್ಗಾ–ಪೀಠ ಬಹುಸಂಸ್ಕೃತಿಯ, ಸೌಹಾರ್ದ ಪರಂಪರೆಯ ಪ್ರಬಲ ನಿದರ್ಶನ. ಇಡೀ ದೇಶಕ್ಕೆ ಇದು ಮಾದರಿ ಎಂದು ಹಿಂದೆ ಸುಪ್ರಿಂ ಕೋರ್ಟ್ ಹಾಡಿ ಹೊಗಳಿದೆ. 1975 ರ ಹಿಂದಿನ ಯಥಾಸ್ಥಿತಿಯನ್ನು ಕಾಪಾಡಿಕೊಳ್ಳ ಬೇಕು ಎಂದೂ ಹೇಳಿತ್ತು. ಸಾವಿರ ವರ್ಷಗಳ ಹಿಂದೆ ಇಲ್ಲಿಗೆ ಬಂದ ಸೂಫಿ ಸಂತ ದಾದಾ ಹಯಾತ್ ಕಲಂದರ್ ರವರ ವಂಶಸ್ಥರಾದ ಮುಂದಿನ ಪೀಳಿಗೆಗಳು ಸಜ್ಜಾದ್ ಎ ನಶೀನ್ ಆಗಿ ಇದರ ನಿರ್ವಹಣೆಯನ್ನು ಮಾಡುತ್ತಾ ಬಂದಿದ್ದಾರೆ. ಹಿಂದೂ ಮುಸ್ಲಿಂ ಅಥವಾ ಯಾವುದೇ ಮತಧರ್ಮ, ಜಾತಿ ಭೇದವಿಲ್ಲದೇ ಎಲ್ಲರಿಗೂ ಮುಕ್ತವಾಗಿರುವ, ಗುಹೆಯಲ್ಲಿ ದರ್ಗಾ ಪೀಠದ ಆರಾಧನೆಯನ್ನು ಸಜ್ಜಾದರು ನೇಮಿಸಿದ ಮುಝಾವರರು ನಡೆಸುತ್ತಿದ್ದರು. ಯಾವುದೇ ಮಠಾಧೀಶರು ಅಥವಾ ಧಾರ್ಮಿಕ ಪ್ರತಿನಿಧಿಗಳು ದರ್ಗಾ ಪೀಠದ ಶ್ರದ್ಧಾ ಕೇಂದ್ರದಲ್ಲಿ ಪ್ರವೇಶಿಸಿ ಆರಾಧಿಸಬಹುದು.

ಹೀಗಿರಲು ಕಳೆದ ವರುಷದ ಅಂತ್ಯದಲ್ಲಿ ಬಂದ ಕರ್ನಾಟಕದ ನ್ಯಾಯಾಲಯದ ತೀರ್ಪು ಹಿಂದಿನ ಪರಂಪರೆ, ನ್ಯಾಯಾಲಯಗಳ ತೀರ್ಪುಗಳಿಗೆ ಹೊಸ ವ್ಯಾಖ್ಯಾನವನ್ನು ಬರೆದಿದೆ. ಬಹುತೇಕವಾಗಿ ಸಂಘಪರಿವಾರ ವಾದಿಸುತ್ತಿದ್ದ ವಾದಗಳಿಗೆ ಪುಷ್ಠಿ ದೊರೆತಿದೆ ಎಂದು ಅಭಿಪ್ರಾಯವಿದೆ. ದರ್ಗಾ ಪೀಠ ದಲ್ಲಿ ಮುಝಾವರರ ಜೊತೆ ಆಗಮನ ಬಲ್ಲ ಅರ್ಚಕರನ್ನು ನೇಮಿಸಲು ಸೂಚಿಸಿದೆ. ಇದಕ್ಕೆ ಒಂದು ವ್ಯವಸ್ಥಾಪನಾ ಸಮಿತಿ ರಚಿಸುವಾಗ ಹಿಂದು ಮುಸ್ಲಿಂ ಮತಧರ್ಮಗಳಿಗೆ ಸೇರಿದವರನ್ನು ಸಮಾನ ಸಂಖ್ಯೆಯಲ್ಲಿ ನೇಮಿಸಬೇಕಿತ್ತು. ಆದರೆ ಹಾಗೆ ಮಾಡದೇ ಏಳು ಜನ ಹಿಂದು ಮತಧರ್ಮಕ್ಕೆ ಸೇರಿದವರನ್ನು ನೇಮಿಸಿರುವ ಬಿಜೆಪಿ ಸರ್ಕಾರದ ಕ್ರಮ ತೀರಾ ಅನ್ಯಾಯ. ಅದರ ಉದ್ದೇಶ ಸರಳವಾಗಿಲ್ಲ ಎನ್ನುವುದು ಸ್ಪಷ್ಟ. ಇದು ದರ್ಗಾಪೀಠದ ಒಟ್ಟು ಪ್ರದೇಶ, ಆಚರಣೆ, ಆಡಳಿತದ ಮೇಲೆ ಅಧಿಕಾರವಿದ್ದ ಜ್ಞಾದ್ ಎ ನಶೀನ್ ರನ್ನು ಪದಚ್ಯುತಗೊಳಿಸಿದಂತೆ ಆಗಿದೆ. ಇದು ಬದಲಾಗಲೇ ಬೇಕು. ನಶೀನ್ ನ್ಯಾಯಾಲಯದ ಮೊರೆ ಹೋಗಿದ್ದಾರೆ. ಸರಕಾರದ ನಡೆ ಸೂಫಿ ಶ್ರದ್ಧಾ ಕೇಂದ್ರವನ್ನು ದತ್ತಪೀಠವಾಗಿಸುವ ಅಜೆಂಡಾದ ಆಡಳಿತಾತ್ಮಕ ಕ್ರಮ ಇದಾಗಿರುವುದರಲ್ಲಿ ಸಂಶಯವಿಲ್ಲ.

ಬಾಬಾಬುಡನ್ ಗಿರಿಯನ್ನು ಇನ್ನೊಂದು ಅಯೋಧ್ಯಾ ಮಾಡುವುದಾಗಿ ಬೊಬ್ಬಿರಿಯುತ್ತಿದ್ದ ಮಾಜಿ ಕೇಂದ್ರ ಸಚಿವ ದಿವಂಗತ ಅನಂತಕುಮಾರ್, ಸಿ.ಟಿ.ರವಿ, ಮುತಾಲಿಕರ ಅಬ್ಬರ ಮಾರ್ದನಿಸುತ್ತಿದೆ! ಸರಕಾರವೇ ಈಗ ಕರ ಸೇವಕ!





ಸಾರಿಗೆ ವಲಯದ ಕಾರ್ಮಿಕರು ಮತ್ತವರ ಸಂಕಷ್ಟಗಳು

ಸಿ.ಸಿದ್ದಯ್ಯ

ರಸ್ತೆ ಸಾರಿಗೆ ವಲಯ ಸೇವಾ ವಲಯದಲ್ಲಿ ಮೊದಲ ಸ್ಥಾನದಲ್ಲಿದೆ. ರಾಜ್ಯದಲ್ಲಿ ಸರ್ಕಾರಿ ಸ್ವಾಮ್ಯದ ಸಾರಿಗೆ ವ್ಯವಸ್ಥೆಯ ಜೊತೆಗೆ ಖಾಸಗಿ ವಾಹನಗಳು ಪ್ರಯಾಣಿಕರ ಸೇವೆಯಲ್ಲಿ ಮತ್ತು ಸರಕು ಸಾಗಣೆಯಲ್ಲಿ ನಿರತರಾಗಿದ್ದಾರೆ. ಇಂತಹ ಖಾಸಗಿ ರಸ್ತೆ ಸಾರಿಗೆ ವಲಯದಲ್ಲಿ ಲಕ್ಷಾಂತರ ಕಾರ್ಮಿಕರು ದುಡಿಯುತ್ತಿದ್ದಾರೆ. ಆಟೋರಿಕ್ಷಾ, ಟ್ಯಾಕ್ಸಿ, ಟೆಂಪೊ ಟ್ರಾವಲರ್, ಮಿನಿ ಬಸ್ಸುಗಳು, ಸರಕು ಸಾಗಣೆಯ ತ್ರಿಚಕ್ರ ವಾಹನಗಳು ಮತ್ತು ಟೆಂಪೋಗಳು, ಲಾರಿ, ಬಸ್ಸು, ಟಿಪ್ಪರ್ ಗಳು ಹೀಗೆ ವಿವಿಧ ರೀತಿಯ ವಾಹನಗಳಲ್ಲಿ ದುಡಿಯುವವವರಿಗೆ ಕಾರ್ಮಿಕರಿಗೆ ಸಿಗಬೇಕಾದ ಯಾವುದೇ ಸೌಲಭ್ಯಗಳೂ ಸಿಗುತ್ತಿಲ್ಲ. ಸಂಘಟಿತ ಕಾರ್ಮಿಕರಿಗೆ ಸಿಗುತ್ತಿರುವ ಕನಿಷ್ಟ ವೇತನವಿಲ್ಲ. ಕೆಲಸದ ಭದ್ರತೆಯಿಲ್ಲ. ಭವಿಷ್ಯ ನಿಧಿ ಇಲ್ಲ. ಇಎಸ್ ಐ ನಂತಹ ವೈದ್ಯಕೀಯ ಸೌಲಭ್ಯಗಳಿಲ್ಲ.

ಖಾಸಗಿ ಮಾಲೀಕರ ವಾಹನಗಳಲ್ಲಿ ದುಡಿಯುವ ಚಾಲಕರು, ನಿರ್ವಾಹಕರು ಮತ್ತು ಕ್ಲೀನರ್ ಗಳ ಪರಿಸ್ಥಿತಿ ಈ ರೀತಿಯದಾದರೆ, ಸಾಲ ಮಾಡಿ ವಾಹನ ಖರೀದಿಸುವ ಮೂಲಕ ಸ್ವಂತ ಉದ್ಯೋಗ ಕಂಡುಕೊಂಡಿರುವ ಚಾಲಕರಿಗೆ ಮತ್ತೊಂದು ರೀತಿಯ ಸಮಸ್ಯೆಗಳು. ಇವರಿಗೆ ನಿಯಮಿತ ಆದಾಯಗಳಿಲ್ಲ. ಕಡಿಮೆ ಬಡ್ಡಿ ದರದಲ್ಲಿ ಸಾಲ ಕೊಡುವ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಇವರಿಗೆ ಸಾಲ ಸಿಗುತ್ತಿಲ್ಲ. ಖಾಸಗಿ ಬ್ಯಾಂಕುಗಳು ಅಥವಾ ಖಾಸಗಿ ಲೇವಾದೇವಿದಾರರ ಬಳಿ ಹೆಚ್ಚಿನ ಬಡ್ಡಿ ದರಕ್ಕೆ ಸಾಲ ಪಡೆಯುವ ಅನಿವಾರ್ಯತೆ ಇವರದು. ಸಾಲದ ಕಂತು ಕಟ್ಟಲಾಗದೆ ಸಾಲದ ಹೊರೆ ಹೆಚ್ಚಾಗಿ ಸಾಲ ಕೊಟ್ಟವರು ವಾಹನಗಳನ್ನು ವಶಪಡಿಕೊಂಡಿರುವ ಬಹಳಷ್ಟು ಉದಾಹರಣೆಗಳಿವೆ. ಇಂತಹ ಚಾಲಕರು ಸಾಲದ ಬಲೆಗೆ ಸಿಲುಕಿ ಹೊರಬರಲಾರದೆ ನರಳುವಂತಾಗಿದೆ.

ಇನ್ನು ಸಾರಿಗೆ ವಯಲಕ್ಕೆ ಪೂರಕವಾಗಿ ದುಡಿಯುತ್ತಿರುವ ವಾಹನಗಳ ದುರಸ್ತಿ ಮಾಡುವವರು, ಮೆಕಾನಿಕ್ ಗಳು, ವೆಲ್ಡರ್ ಗಳು, ಟಿಂಕರಿಂಗ್ ಮಾಡುವವರು, ಪೈಂಟರ್ ಗಳು, ಪಂಕ್ಚೇರ್ ಅಂಗಡಿಯವರು, ಬಿಡಿಭಾಗಗಳನ್ನು ಮಾರಾಟ ಮಾಡುವ ಅಂಗಡಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರು, ಪೆಟ್ರೋಲ್ ಬಂಕುಗಳಲ್ಲಿ ದುಡಿಯುವ ಕಾರ್ಮಿಕರು ಹೀಗೆ ಹಲವು ವಿಭಾಗಗಳಲ್ಲಿ ಲಕ್ಷಾಂತರ ಕಾರ್ಮಿಕರು ದುಡಿಯುತ್ತಿದ್ದಾರೆ.

ಕಾರ್ಮಿಕರಿಗೆ ಸಿಗಬೇಕಾದ ಯಾವುದೇ ಸೌಲಭ್ಯಗಳೂ ಈ ಕಾರ್ಮಿಕರಿಗೆ ಸಿಗುತ್ತಿಲ್ಲ. ವಯಸ್ಸಿನ ಕಾರಣದಿಂದ ದುಡಿಯಲಾಗದ ನಿವೃತ್ತಿ ನಂತರ ಮುಂದೇನು ಎಂಬ ಚಿಂತೆ ಇವರೆಲ್ಲರನ್ನು ಸದಾ ಕಾಡುತ್ತಿರುತ್ತದೆ. ಅಗತ್ಯ ವಸ್ತುಗಳ ಬೆಲೆ ಏರಿಕೆ ದಿನನಿತ್ಯದ ಸಮಸ್ಯೆಯಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಖಾಸಗೀಕರಣ ಪರವಾದ ನೀತಿಗಳಿಂದಾಗಿ ಶೈಕ್ಷಣಿಕ ವೆಚ್ಚ ದುಬಾರಿಯಾಗಿದೆ. ಮಕ್ಕಳಿಗೆ ಶಾಲಾ, ಕಾಲೇಜು ಶಿಕ್ಷಣ ಕೊಡಿಸಲಾಗದ ಆರ್ಥಿಕ ಸಮಸ್ಯೆಗಳನ್ನು ಈ ಕುಟುಂಬಗಳು ಎದುರಿಸುತ್ತಿದ್ದಾರೆ. ಸಾಮಾನ್ಯ ಜನರು ಚಿಕಿತ್ಸೆ ಪಡೆಯಲಾಗದಷ್ಟು ಆರೋಗ್ಯ ಸೇವೆ ದುಬಾರಿಯಾಗಿದೆ. ಪ್ರಧಾನ್ ಮಂತ್ರಿ ಆವಾಸ್ ಯೋಜನೆ ಘೋಷಣೆ ಮೋಲಕ 2022ರೊಳಗೆ ಮನೆ ಇಲ್ಲದ ಎಲ್ಲರಿಗೂ ಮನೆ ಒದಗಿಸಿಕೊಡುತ್ತೇವೆ ಎಂಬ ಮೋದಿ ಸರ್ಕಾರದ ಭರವಸೆ ನಂಬಿದ್ದವರು ಇಂದು ಭ್ರಮನಿರಸನಗೊಂಡಿದ್ದಾರೆ. ನಗರ, ಪಟ್ಟಣಗಳಲ್ಲಿ ವಾಸಿಸುವ ಖಾಸಗಿ ವಲಯದ ಸಾರಿಗೆ ಕಾರ್ಮಿಕರು ದುಬಾರಿ ಬಾಡಿಗೆ ಕಟ್ಟಲಾಗದೆ, ಮೂಲಭೂತ ಸೌಕರ್ಯಗಳಿಲ್ಲದ ಪ್ರದೇಶಗಳಲ್ಲಿನ ಸಣ್ಣ ಸಣ್ಣ ಮನೆಗಳಲ್ಲಿ ವಾಸ ಮಾಡುತ್ತಿದ್ದಾರೆ.

ಜನಸಾಮಾನ್ಯರ ಮೇಲಿನ ತೆರಿಗೆ ಹೆಚ್ಚಳದ ಸರ್ಕಾರದ ನೀತಿಗಳಿಂದಾಗಿ ಪೆಟ್ರೋಲ್, ಡೀಸಲ್, ಎಲ್ ಪಿಜಿ, ಸಿಎನ್ ಜಿ ಮತ್ತು ಆಯಿಲ್ ಇವುಗಳ ಮೇಲಿನ ತೆರಿಗೆ ವಿಪರೀತವಾಗಿದೆ. ವಾಹನಗಳ ವಿಮಾ ಪ್ರೀಮಿಯಂ ಮತ್ತು ಮೂರನೇ ವ್ಯಕ್ತಿಯ ವಿಮೆಯ ಪ್ರೀಮಿಯಂ ದರವನ್ನೂ ವಿಪರೀತವಾಗಿ ಹೆಚ್ಚಿಸಲಾಗಿದೆ. ವಿಮೆಯ ಕಂತುಗಳ ಮೇಲೂ ದುಬಾರಿ ಜಿಎಸ್ ಟಿ ವಿಧಿಸಲಾಗಿದೆ. ಹೊಸ ವಾಹನಗಳನ್ನು ಖರೀದಿಸುವ ಸಂದರ್ಭದಲ್ಲಿ ವಿಧಿಸುವ ಮಾರಾಟ ತೆರಿಗೆಯನ್ನು ಶೇ 28ಕ್ಕೆ ಹೆಚ್ಚಿಸಲಾಗಿದೆ. ಇದೂ ಸಾಲದು ಎಂಬಂತೆ ಮೋಟಾರು ವಾಹನ ತಿದ್ದುಪಡಿ ಕಾಯ್ದೆ 2019 ರ ಮೂಲಕ ಸಂಚಾರಿ ನಿಯಮಗಳ ಉಲ್ಲಂಘನೆಗಾಗಿ ವಿಧಿಸುತ್ತಿದ್ದ ದುಬಾರಿ ದಂಡದ ಪ್ರಮಾಣ ಹೆಚ್ಚಾಗಿದೆ. 100 ರೂ ಇದ್ದ ದಂಡದ ಪ್ರಮಾಣ 500, 1000 ರೂ ಗಳಿಗೆ ಹೆಚ್ಚಳವಾಗಿದೆ. ವಿವಿಧ ಸೇವೆಗಳಿಗಾಗಿ ಸಾರಿಗೆ ಇಲಾಖೆ ಪಡೆಯುವ ಶುಲ್ಕದ ಪ್ರಮಾಣವೂ ಹೆಚ್ಚಾಗಿವೆ.

ಕಾರ್ಪೊರೇಟೀಕರಣದತ್ತ ಸಾರಿಗೆ ವಲಯ:

ಸಾರಿಗೆ ವಲಯವನ್ನು ಸಂಪೂರ್ಣವಾಗಿ ಕಾರ್ಪೊರೇಟೀಕರಣ ಮಾಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮುಂದಾಗಿವೆ. ಸಾರಿಗೆ ಇಲಾಖೆ ಮಾಡುತ್ತಿರುವ ಕೆಲಸವನ್ನು ಖಾಸಗಿ ಕಂಪನಿಗಳಿಗೆ ವಹಿಸಲು ಮುಂದಾಗಿವೆ. ಆರ್‌ಟಿಓ ಗಳ ಅಗತ್ಯವೇ ಇಲ್ಲದಂತೆ ಮಾಡಲು ಹೊರಟಿವೆ. ಎಲ್ಲವನ್ನೂ ವಾಹನಗಳಿಗೆ ಅರ್ಹತಾ ಪ್ರಮಾಣಪತ್ರ (FC) ಕೊಡುವ ಅಧಿಕಾರ ಪ್ರಾದೇಶಿಕ ಸಾರಿಗೆ ಕಛೇರಿ (RTO)ಗೆ ಮಾತ್ರ ಇದೆ. ಇದನ್ನು ಖಾಸಗಿ ವಾಹನ ತಯ್ಯಾರಿಕಾ ಕಂಪನಿಗಳಿಗೆ ವಹಿಸಲು ಸರ್ಕಾರ ಮುಂದಾಗಿದೆ. ಅರ್ಹತಾ ಪ್ರಮಾಣಪತ್ರ ಪಡೆಯಲು ಸಂಬಂಧಿಸಿದ ವಾಹನದ ತಯ್ಯಾರಿಕಾ ಕಂಪನಿಗಳಿಂದ ವಾಹನ ಅರ್ಹತೆ ಇರುವುದಾಗಿ ಸರ್ಟಿಫಿಕೇಟ್ ಪಡೆಯಬೇಕು ಎಂಬ ನಿಯಮ ಜಾರಿಗೆ ತರಲು ಮುಂದಾಗಿದ್ದಾರೆ. ಇದು ವಾಹನಗಳ ಮಾಲೀಕರನ್ನು ಸುಲಿಗೆ ಮಾಡಲು ಖಾಸಗಿಯವರಿಗೆ ಅವಕಾಶ ಕೊಟ್ಟಂತಾಗುತ್ತದೆ. ಮಾತ್ರವಲ್ಲ ಸಾರಿಗೆ ಇಲಾಖೆಯ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಕೆಲಸ ಇಲ್ಲದಂತೆ ಮಾಡಿ ಅವರ ಉದ್ಯೋಗಳನ್ನು ಕಸಿಯುವ ಪ್ರಯತ್ನ ಇದಾಗಿದೆ.

ಖಾಸಗಿ ಕಂಪನಿಗಳಿಗೆ ಅರ್ಹತಾ ಪ್ರಮಾಣ ಪತ್ರ ನೀಡುವ ಅಧಿಕಾರ ಕೊಡುವ ಒಂದು ಭಾಗವಾಗಿ ಖಾಸಗಿ ಕಂಪನಿಯ ಸರ್ಟಿಫಿಕೇಟ್ ಆಧಾರಿತ ರಿಟ್ರೋ ರಿಫ್ಲೆಟಿವ್ ಟೇಪ್ ರೇರ್ ಮೇಕಿಂಗ್ ಪ್ಲೇಟ್ ಅಳವಡಿಕೆಗೆ ಸಾರಿಗೆ ಇಲಾಖೆ ಮುಂದಾಯಿತು. ಅರ್ಹತಾ ಪ್ರಮಾಣಪತ್ರ ಪಡೆಯಲು ಪ್ರಾದೇಶಿಕ ಸಾರಿಗೆ ಕಛೇರಿಗೆ ಹೋದರೆ ಇಂತಹ ಸ್ಟಿಕರ್ ಅಳವಡಿಸಿಕೊಂಡು ಬರಬೇಕು ಎಂದು ಅಧಿಕಾರಿಗಳು ಒತ್ತಡ ಹಾಕುತ್ತಿದ್ದರು. ಇದನ್ನು ಅಳವಡಿಸಿಕೊಳ್ಳದಿದ್ದರೆ ಅರ್ಹತಾ ಪ್ರಮಾಣ ಪತ್ರ ಕೊಡಲು ನಿರಾಕರಿಸುತ್ತಿದ್ದರು. ಈ ಟೇಪ್ ದುಬಾರಿ ಬೆಲೆಯದಾಗಿದೆ. ಸಾರಿಗೆ ಇಲಾಖೆಯ ಈ ನಡೆಯನ್ನು ವಿರೋಧಿಸಿ ಆಟೋ ಚಾಲಕರೂ ಸೇರಿದಂತೆ ಇತರೆ ಚಾಲಕರು ಹೋರಾಟ ಮಾಡಿದರು. ಹೋರಾಟಕ್ಕೆ ಮಣಿದ ಸಾರಿಗೆ ಇಲಾಖೆ ಈ ದುಬಾರಿ ಟೇಪ್ ಅಳವಡಿಕೆ ಮಾಡಬೇಕೆಂಬ ತಮ್ಮ ಒತ್ತಾಯವನ್ನು ನಿಲ್ಲಿಸಿದ್ದಾರೆ.

ಓಲಾ, ಉಬರ್ ನಿಂದ ಅನಧಿಕೃತ ಕಾರ್ಯಾಚರಣೆ:

ಕೇಂದ್ರ ಸರ್ಕಾರದ ಜಾಗತೀಕರಣ ನೀತಿಗಳು ಸಾರಿಗೆ ವಲಯದ ಮೇಲೆ ಕೆಟ್ಟ ಪರಿಣಾಮ ಬೀರಿದೆ. ವಿದೇಶಿ ನೇರ ಬಂಡವಾಳ ಹೂಡಿಕೆ(ಈಆಖ)ಗೆ ರಸ್ತೆ ಸಾರಿಗೆ ಸೇವಾ ವಲಯದಲ್ಲೂ ಕೇಂದ್ರ ಸರ್ಕಾರ ಮುಕ್ತ ಅವಕಾಶ ಕೊಟ್ಟಿದೆ. ಅಮೆರಿಕ ಮೂಲದ ಉಬರ್, ಭಾರತ ಮೂಲದ ಮತ್ತು ವಿದೇಶೀ ಬಂಡವಾಳ ಹೊಂದಿರುವ ಓಲಾ, ರ್ಯಾಪಿಡೊ ಕಂಪನಿಗಳು ಈ ಅವಕಾಶಗಳನ್ನುಬಳಸಿಕೊಂಡು ಆಪ್ ಆಧಾರಿತ ಟ್ಯಾಕ್ಸಿ ಮತ್ತು ಆಟೋ ಸೇವೆಯಲ್ಲಿ ತೊಡಗಿಸಿಕೊಂಡಿವೆ. ಇವು ಸರ್ಕಾರ ಮತ್ತು ಸಾರಿಗೆ ಇಲಾಖೆಯ ನಿಯಮಗಳನ್ನು ರಾಜಾರೋಷವಾಗಿ ಉಲ್ಲಂಘಿಸುತ್ತಿವೆ. ಪರವಾನಗಿ ಪಡೆಯದೇ ಅನಧಿಕೃತವಾಗಿ ಆಟೋ ಸೇವೆಯಲ್ಲಿ ತೊಡಗಿಕೊಂಡಿವೆ. ಸರ್ಕಾರ ನಿಗಧಿಪಡಿಸಿದ ಆಟೋ ಮತ್ತು ಟ್ಯಾಕ್ಸಿ ಪ್ರಯಾಣದರ ಪಡೆಯಲು ನಿರಾಕರಿಸುತ್ತವೆ. ಪ್ರಯಾಣಿಕರಿಂದ ಅಧಿಕ ದರ ವಸೂಲಿ ಮಾಡುತ್ತಲೇ ಚಾಲಕರಿಂದ ತಮಗೆ ಇಷ್ಟಬಂದಂತೆ ಕಮೀಷನ್ ಪಡೆಯುತ್ತಿವೆ.

ಈ ಆ್ಯಪ್ ಆಧಾರಿತ ಕಂಪನಿಗಳ ಸುಲಿಗೆ ಮತ್ತು ನಿಯಮಬಾಹಿರ ಚಟುವಟಿಕೆಗಳ ವಿರುದ್ಧ ಗ್ರಾಹಕರು ಮತ್ತು ಆಟೋ ಚಾಲಕರು ಸರ್ಕಾರಕ್ಕೆ ದೂರು ಸಲ್ಲಿಸಿದ ನಂತರ ಇತ್ತೀಚೆಗೆ ಸರಿಗೆ ಇಲಾಖೆ ಈ ಕಂಪನಿಗಳು ಆಪ್ ಆಧಾರಿತ ಆಟೋ ಸೇವೆಗೆ ತಡೆ ನೀಡುತ್ತದೆ. ಇದನ್ನು ಪ್ರಶ್ನಿಸಿ ಈ ಕಂಪನಿಗಳು ನ್ಯಾಯಾಲಯದ ಮೊರೆ ಹೋಗಿವೆ. ಸಾರಿಗೆ ಇಲಾಖೆ ಆ್ಯಪ್ ಆಧಾರಿತ ಆಟೋ ಸೇವೆಗೆ ಪ್ರಯಾಣ ದರ ನಿಗದಿ ಮಾಡುವವರೆಗೆ ಈಗಾಗಲೇ ಸಾರಿಗೆ ಇಲಾಖೆ ನಿಗಧಿ ಮಾಡಿರುವ ದರಕ್ಕೆ ಶೇ.5 ರಷ್ಟು ಕಮೀಷನ್ ಮತ್ತು ಜಿಎಸ್ ಟಿ ಪಡೆದು ಆಟೋ ಕಾರ್ಯಾಚರಣೆ ಮಾಡಲು ಈ ಕಂಪನಿಗಳಿಗೆ ಅವಕಾಶ ಮಾಡಿಕೊಟ್ಟಿದೆ. ಶೇ. 5 ಕಮೀಷನ್ ಗೆ ಈ ಕಂಪನಿಗಳು ಒಪ್ಪುತ್ತಿಲ್ಲ, ಮಾತ್ರವಲ್ಲ, ಬೇಡಿಕೆ ಆದಾರಿತ ಪ್ರಯಾಣದರ ನಿಗಧಿಗೆ ಅವಕಾಶ ಕೊಡಬೇಕೆಂದು ವಾದ ಮಾಡುತ್ತಿವೆ.

ಅನಧಿಕೃತ ಬೈಕ್ ಟ್ಯಾಕ್ಸಿ:

ವಿದೇಶಿ ಬಂಡವಾಳ ಹೊಂದಿರುವ ಈ ಕಂಪನಿಗಳು ಮತ್ತೊಂದು ಹೆಜ್ಜೆ ಮುಂದೆ ಹೋಗಿ ಅನಧಿಕೃತವಾಗಿ ಬೈಕ್ ಟ್ಯಕ್ಸಿ ಸೇವೆಯಲ್ಲಿ ತೊಡಗಿವೆ. ನಿಯಮಬಾಹಿರವಾಗಿ ಕಾರ್ಯಾಚರಣೆ ನಡೆಸಿದರೆ ಶಿಕ್ಷೆಯಾಗುತ್ತದೆ ಎಂಬ ಕಿಂಚಿತ್ತೂ ಭಯ ಇವರಿಗಿಲ್ಲ. ಸಾರಿಗೆ ಇಲಾಖೆಯೂ ಕಾನೂನು ಕ್ರಮ ಕೈಗೊಳ್ಳಲಾಗದೆ ಕೈ ಕಟ್ಟಿ ಕುಳಿತಿದೆ. ಅಥವಾ ಸರ್ಕಾರದ ಉದಾರೀಕರಣ, ಜಾಗತೀಕರಣ ಮತ್ತು ಖಾಸಗೀಕರಣ ನೀತಿಗಳು ಈ ಅಧಿಕಾರಿಗಳ ಕೈ ಕಟ್ಟಿದೆ.

ಆ್ಯಪ್ ಆಧಾರಿತ ಖಾಸಗಿ ಕಂಪನಿಗಳನ್ನು ನಿಷೇಧಿಸಿ:

ಆ್ಯಪ್ ಆಧಾರಿತ ಈ ಖಾಸಗಿ ಕಂಪನಿಗಳಿಂದ ನಡೆಯುತ್ತಿರುವ ಶೋಷಣೆಯಿಂದ ಮುಕ್ತವಾಗಬೇಕಾದರೆ ಖಾಸಗಿ ಕಂಪನಿಗಳ ಆ್ಯಪ್ ಆಧಾರಿತ ಸೇವೆಯನ್ನೇ ನಿಷೇಧಿಸಬೇಕು ಎನ್ನುತ್ತಾರೆ ಸಿಐಟಿಯು ಆಟೋರಿಕ್ಷಾ ಚಾಲಕರ ಸಂಘದ ಮುಖಂಡರು.

ಓಲಾ, ಉಬರ್, ರ್ಯಾಪಿಡೋ ಕಂಪನಿಗಳು ಮಾತ್ರವಲ್ಲ, ಎಂವೈಎನ್, ರೂಖ್ ಮತ್ತು ನಮ್ಮ ಯಾತ್ರಿ ಪಾರ್ಟನರ್ ಆ್ಯಪ್ ಆಧಾರಿತ ಬೃಹತ್ ಖಾಸಗಿ ಕಂಪನಿಗಳು ಆಟೋರಿಕ್ಷಾ ಮತ್ತು ಟ್ಯಾಕ್ಸಿ ಸೇವೆಯನ್ನು ನಿಷೇಧಿಸಬೇಕು ಎನ್ನುತ್ತಾರೆ ಅವರು. ಇದಕ್ಕೆ ಪರ್ಯಾಯವಾಗಿ ಸರ್ಕಾರವೇ ಸಾರಿಗೆ ಇಲಾಖೆ ಮೂಲಕ ಆ್ಯಪ್ ಆಧಾರಿತ ಸೇವೆಗೆ ಮುಂದಾಗಬೇಕು. ಇದರಿಂದ ಚಾಲಕರು ಮತ್ತು ಪ್ರಯಾಣಿಕರ ಶೋಷಣೆ ತಪ್ಪುತ್ತದೆ ಮತ್ತು ಇಬ್ಬರಿಗೂ ಅನುಕೂಲವಾಗುತ್ತದೆ ಎಂದು ಸರ್ಕಾರನ್ನು ಸಂಘ ಒತ್ತಾಯಿಸಿದೆ.

ಕಲ್ಯಾಣ ಮಂಡಳಿ ಎಂಬುದೊಂದಿದೆ. ಆದರೆ:

ಅಸಂಘಟಿತ ಕಾರ್ಮಿಕರ ಕಲ್ಯಾಣ ಮಂಡಳಿ ಎಂಬುದೊಂದಿದೆ, ಆದರೆ, ಅದರಲ್ಲಿ ನಿಧಿ ಇಲ್ಲ. ಸರ್ಕಾರ ಈ ಮಂಡಳಿಗೆ ಅನುದಾನ ಕೊಡುತ್ತಿಲ್ಲ. ಹೀಗಾಗಿ ಇದು ಹೆಸರಿಗಷ್ಟೇ ಇದೆ ವಿನಃ ಅಸಂಘಟಿತ ಸಾರಿಗೆ ನೌಕರರಿಗೆ ಯಾವುದೇ ಸೌಲಭ್ಯ ಸಿಗುತ್ತಿಲ್ಲ. ಖಾಸಗಿ ವಾಣಿಜ್ಯ ವಾಹನ ಚಾಲಕರು, ಕಂಡಕ್ಟರ್, ಕ್ಲೀನರ್ ಇವರು ಅಪಘಾತದಿಂದ ಮರಣ ಹೊಂದಿದರೆ ಸರ್ಕಾರದಿಂದ ಐದು ಲಕ್ಷ ಅಪಘಾತ ಪರಿಹಾರ ಮತ್ತು ಅಪಘಾತದಿಂದ ಗಾಯಗೊಂಡವರಿಗೆ ಚಿಕಿತ್ಸೆ ಪಡೆಯಲು 2 ಲಕ್ಷದವರೆಗೂ ಪರಿಹಾರ ಹೊರತುಪಡಿಸಿ ಬೇರೆ ಯಾವುದೇ ಸೌಲಭ್ಯಗಳಿಲ್ಲ.

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಎಂಬುದೊಂದಿದೆ. ಈ ಮಂಡಳಿಗೆ ಹೊಸದಾಗಿ ಕಟ್ಟಡ ನಿರ್ಮಾಣ ಮಾಡುವ ಕಟ್ಟಡಗಳ ಮಾಲೀಕರಿಂದ ಕಟ್ಟಡ ನಿರ್ಮಾಣಕ್ಕೆ ಮಾಡುವ ವೆಚ್ಚದ ಶೇ ಒಂದರಷ್ಟು ಪ್ರಮಾಣದ ಸೆಸ್ ಸಂಗ್ರಹ ಮಾಡಲಾಗುತ್ತದೆ. ಈ ಹಣದಿಂದಲೇ ಕಟ್ಟಡ ಕಾರ್ಮಿಕರಿಗೆ ಹಲವು ರೀತಿಯ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನ, ಕಾರ್ಮಿಕರ ಆರೋಗ್ಯ ಸೇವೆಗೆ ಧನಸಹಾಯ, ಅಪಘಾತ ಪರಿಹಾರ, ಸಹಜ ಮರಣ ಹೊಂದಿದರೆ ಪರಿಹಾರ, ಮಹಿಳಾ ಕಾರ್ಮಿಕರಿಗೆ ಹೆರಿಗೆ ಸೌಲಭ್ಯ, 60 ವಯಸ್ಸಿನ ನಂತರ 3,000 ರೂಗಳ ಪಿಂಚಣಿ ಸೌಲಭ್ಯ ಇಂತಹ ಹಲವು ಸೌಲಭ್ಯಗಳು ಕಲ್ಯಾಣ ಮಂಡಳಿಯಲ್ಲಿ ನೊಂದಾಯಿತರಾದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಸಿಗುತ್ತಿವೆ.

ಇಂತಹ ಸೌಲಭ್ಯಗಳು ಸಾರಿಗೆ ವಲಯದಲ್ಲಿ ದುಡಿಯುವ ಅಸಂಘಟಿತ ಕಾರ್ಮಿಕರಿಗೆ ಸಿಗುವಂತಾಗಬೇಕು. ಇದು ಸಿಗಬೇಕಾದರೆ ಅಸಂಘಟಿತ ಕಾರ್ಮಿಕರ ಕಲ್ಯಾಣ ಮಂಡಳಿಗೆ ನಿಧಿ ಬೇಕು. ಇದನ್ನು ಸರ್ಕಾರವೇ ತುಂಬಬೇಕು. ಸರ್ಕಾರ ವಿವಿಧ ರೂಪದಲ್ಲಿ ಚಾಲಕರಿಂದ, ವಾಹನ ಮಾಲೀಕರಿಂದ ಮತ್ತು ಸಾರಿಗೆ

ಭೂ ಸುದಾರಣಾ ಚಳುವಳಿಯ ನಾಯಕ, ರೈತ ಕಾರ್ಮಿಕ ಮುಖಂಡ ಕಾಮ್ರೇಡ್ ದಾಸ ಭಂಡಾರಿ ನಿಧನ



ಸಿಪಿಐ(ಎಂ) ಪಕ್ಷದ ಹಿರಿಯ ಮುಖಂಡ, ಹಿಂದಿನ ಉಡುಪಿ ಜಿಲ್ಲಾ ಸಮಿತಿ ಸದಸ್ಯ, ಭೂ ಸುಧಾರಣಾ ಕಾಯ್ದೆ ಜಾರಿಗಾಗಿ ನಡೆದ ತೀವ್ರ ಹೋರಾಟದಲ್ಲಿ ನೇತೃತ್ವ ವಹಿಸಿದ್ದ ಕಾಮ್ರೇಡ್ ಯು. ದಾಸ ಭಂಡಾರಿಯವರು ದಿನಾಂಕ 22.11.2022 ರಂದು ರಾತ್ರಿ ಸುಮಾರು 11.40 ಕ್ಕೆ ನಮ್ಮೆಲ್ಲರನ್ನಗಲಿದರು.

ಉಡುಪಿ ಜಿಲ್ಲೆಯಲ್ಲಿ, ವಿಶೇಷವಾಗಿ ಹಿಂದಿನ ಕುಂದಾಪುರ ತಾಲೂಕಿನಲ್ಲಿ ಹಂಚು ಮತ್ತು ಬೀಡಿ ಕಾರ್ಮಿಕರ ಸಹಾಯದಿಂದ ರೈತ ಚಳುವಳಿಯನ್ನು ಕಟ್ಟಿದ ದಾಸ ಭಂಡಾರಿಯವರು ಹಲವಾರು ಬಾರಿ ಭೂ ಮಾಲಕರ ಧಾಳಿಗಳನ್ನು ಎದುರಿಸಿದರು.

ಫೆಬ್ರವರಿ 22, 1942ರಂದು ಉಡುಪಿಯ ಕುಂಜಿಬೆಟ್ಟಿನಲ್ಲಿ ದೇಜು ಭಂಡಾರಿ ಮತ್ತು ಶೇಶಿ ಭಂಡಾರಿಯವರ ಎರಡನೇ ಪುತ್ರನಾಗಿ ಜನಿಸಿದ ದಾಸ ಭಂಡಾರಿಯವರು ಚಿಕ್ಕಂದಿನಲ್ಲೇ ತಾಯಿಯನ್ನು ಕಳೆದುಕೊಂಡು ಅಕ್ಕನ ಆರೈಕೆಯಲ್ಲಿ ಬೆಳೆದರು.

ಉಡುಪಿಯಲ್ಲಿ ಅವಿಭಜಿತ ಕಮ್ಯೂನಿಸ್ಟ್ ಪಕ್ಷದ ದಾಸ ಸೇರಿಗಾರ್ ರೊಂದಿಗೆ ತಂದೆ ದೇಜು ಭಂಡಾರಿಯವರು ಸಹ ಕಮ್ಯೂನಿಸ್ಟ್ ಚಳವಳಿಯಲ್ಲಿ ತೊಡಗಿಸಿಕೊಂಡಿದ್ದರು. ಇದರಿಂದ ಪ್ರಭಾವಿತರಾಗಿದ್ದ ದಾಸ ಭಂಡಾರಿಯವರು ತನ್ನನ್ನು ಕೂಡಾ ಚಳುವಳಿಯಲ್ಲಿ ತೊಡಗಿಸಿಕೊಂಡು ಕೊನೆಯ ದಿನಗಳವರೆಗೂ ಸಿಪಿಐ(ಎಂ) ಪಕ್ಷದ ಮುಖಂಡರಾಗಿದ್ದರು. ಅಲ್ಲದೆ, ತನ್ನ ಕುಟುಂಬದ ಅನೇಕರನ್ನು ಚಳುವಳಿಗೆ ತಂದ ಹೆಗ್ಗಳಿಕೆ ಕಾ. ಭಂಡಾರಿಯವರದ್ದು.

1964ರಲ್ಲಿ ಕುಂದಾಪುರದ ಕೋಣಿಯ ಗುಲಾಬಿಯನ್ನು ವಿವಾಹವಾದ ಬಳಿಕ ಕೋಟೇಶ್ವರದಲ್ಲಿ ಕ್ಷೌರಿಕ ವೃತ್ತಿಯಲ್ಲಿದ್ದುಕೊಂಡು ಚಳುವಳಿಯಲ್ಲಿ ಆಸಕ್ತರಾಗಿದ್ದರು. ರೈತ ಹೋರಾಟ, ಜನ ಸಾಮಾನ್ಯರಿಗೆ ಸಹಾಯವನ್ನು ಮಾಡುವ ಗುಣ, ಕಮ್ಯೂನಿಸ್ಟ್ ಚಳುವಳಿಯಲ್ಲಿ ಅಚಲವಾದ ನಂಬಿಕೆಯಿಂದ

ಕೋಟೇಶ್ವರ ಪಂಚಾಯತ್ ಸದಸ್ಯರಾಗಿ ಆಯ್ಕೆಯಾದರು. ಪಂಚಾಯತ್ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು. ಕೋಟೇಶ್ವರದಲ್ಲಿ ಕಾ. ಕರಿಯ ದೇವಾಡಿಗ ಮತ್ತು ದಿವಂಗತ ಗೋವಿಂದ ಶೆಟ್ಟಿಗಾರ್ ಅವರೊಂದಿಗೆ ಆಸುಪಾಸಿನ ಹಳ್ಳಿಗಳಲ್ಲಿ ಭೂಮಿ ಹಕ್ಕಿಗಾಗಿ ಗೇಣಿದಾರರನ್ನು ಸಂಘಟಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ "ಉಳುವವನೇ ಹೊಲದೊಡೆಯ" ಘೋಷಣೆಯಲ್ಲಿ ಭೂ ಸುಧಾರಣೆಗಾಗಿ ಹೋರಾಟದ ನೇತೃತ್ವ ವಹಿಸಿದ್ದರು. ಕುಂದಾಪುರದ ಸುಮಾರು ಮೂವತ್ತಕ್ಕೂ ಹೆಚ್ಚು ಹಳ್ಳಿಗಳಲ್ಲಿ ರೈತ ಸಂಘದ ಘಟಕಗಳನ್ನು ರಚಿಸಿ ಭೂ ಗೇಣಿದಾರರ ಪರವಾಗಿ ಹೋರಾಟ ನಡೆಸಿದ್ದರು. ಇದರ ಫಲವಾಗಿ ರೈತ ಸಂಘಟನೆ ಬೆಳೆದಿತ್ತು. ಅವರು ಆಗ ಕ.ಪ್ರಾ.ರೈತ ಸಂಘದ ರಾಜ್ಯ ಸಮಿತಿಯ ಸದಸ್ಯರೂ ಆಗಿದ್ದರು.

ಕುಂದಾಪುರ ತಾಲೂಕಿನ ಕೋಣಿಯಲ್ಲಿ ಗೇಣಿದಾರರ ಭೂಮಿ ಉಳಿಸಿಕೊಳ್ಳಲು ನಡೆಸಿದ ಹೋರಾಟದಲ್ಲಿ ಭೂ ಮಾಲೀಕರ ಧಾಳಿಗೆ ಒಳಗಾಗಿ ಒಂದು ತಿಂಗಳ ಕಾಲ ಆಸ್ಪತ್ರೆಯಲ್ಲಿದ್ದರು. ಉಳ್ತೂರು ಎಂಬ ಹಳ್ಳಿಯಲ್ಲಿ ಶಿವರಾಮ ಶೆಟ್ಟಿ ಎಂಬವರ ರಕ್ಷಣೆಗಾಗಿ ಟೊಂಕಕಟ್ಟಿ ನಿಂತಾಗ ಗೂಂಡಾ ಧಾಳಿಗೆ ಒಳಗಾದ್ದರು.

ಪಕ್ಷದ ಪೂರ್ಣಾವಧಿ ಕಾರ್ಯಕರ್ತರಾಗಿ ದುಡಿಯಲು ಕರೆ ಬಂದಾಗ ತನ್ನ ವೃತ್ತಿಯನ್ನು ತ್ಯಜಿಸಿ ಪಕ್ಷದ ಚಳುವಳಿಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡರು.



ಹಾಗೆಯೇ ಅಂಗನವಾಡಿ, ಬಿಸಿಯೂಟ,ಆಶಾ ಮತ್ತು ಕಟ್ಟಡ,ಮೊದಲಾದ ಸಂಘಟನೆಗಳನ್ನು ಕಟ್ಟಲು ಶ್ರಮಿಸಿದರು. ಬಿಸಿಯೂಟ, ಅಂಗನವಾಡಿ ನೌಕರರ ಚಳುವಳಿ ದೂರದ ಬೆಂಗಳೂರು, ದೆಹಲಿಗಳಲ್ಲಿ ನಡೆದಾಗ, ಅವರ ರಕ್ಷಣೆಗಾಗಿ, ದೇಹದಲ್ಲಿ ಶಕ್ತಿ ಕುಂದುತ್ತಿದ್ದರೂ, ಉತ್ಸಾಹಿತರಾಗಿ ಭಾಗವಹಿಸಿದರು.

ನಿವೇಶನ ರಹಿತರು ಮತ್ತು ಉದ್ಯೋಗ ಖಾತ್ರಿ ಯೋಜನೆಯಲ್ಲಿ ತೊಡಗಿಸಿಕೊಂಡ ಕೃಷಿಕೂಲಿಕಾರರನ್ನು ಸಂಘಟಿಸುವಲ್ಲಿ ಮಹತ್ತರ ಪಾತ್ರ ವಹಿಸಿದ ದಾಸಭಂಡಾರಿ ಅವರು ಕೊನೆಯವರೆಗೂ ಉಡುಪಿ ಜಿಲ್ಲಾ ಕೃಷಿಕೂಲಿಕಾರರ ಸಂಘದ ಅಧ್ಯಕ್ಷರಾಗಿದ್ದರು.

ಒಟ್ಟಾರೆಯಾಗಿ ರೈತ, ಕಾರ್ಮಿಕ, ಕೂಲಿಕಾರ – ಹೀಗೆ ವಿವಿಧ ರಂಗಗಳಲ್ಲಿ ಕೆಲಸ ಮಾಡುತ್ತಾ ಯುವಜನರಿಗೆ ಸ್ಫೂರ್ತಿಯ ಸೆಲೆಯಾಗಿದ್ದರು.

ಪತ್ನಿ ಗುಲಾಬಿ, ಪುತ್ರರಾದ ಅಮೃತ್, ಪುತ್ರಿಯಾರಾದ ಮಲ್ಲಿಕಾ ಮತ್ತು ಅಜಿತಾ ಹಾಗೂ ಮೊಮ್ಮಕ್ಕಳನ್ನು ಅಗಲಿದ ದಾಸ ಭಂಡಾರಿಯವರು ತನ್ನ ಅಪಾರ ಸಂಗಾತಿಗಳು, ಬೆಂಬಲಿಗರು, ಅಭಿಮಾನಿಗಳನ್ನು ಅಗಲಿರುತ್ತಾರೆ.

ಸಮತಾ ಸಮಾಜವಾದವನ್ನು ಬಲವಾಗಿ ಸಮರ್ಥಿಸುತ್ತಾ ಬಡ ಕಾರ್ಮಿಕರ ಹಕ್ಕುಗಳನ್ನು ರಕ್ಷಿಸಲು ತನ್ನ ಪ್ರಾಣವನ್ನೇ ಮುಡಿಪಾಗಿಟ್ಟಿದ್ದ

ಕಾಮ್ರೇಡ್ ದಾಸ ಭಂಡಾರಿಯವರು ಜಿಲ್ಲೆಯ ರೈತ–ಕಾರ್ಮಿಕ ಚಳುವಳಿಗೆ ತನ್ನದೇ ಕೊಡುಗೆಯನ್ನು ನೀಡಿದ್ದಾರೆ. ಇತ್ತೀಚೆಗೆ ನಡೆದ ಸಿಐಟಿಯು ರಾಜ್ಯ ಸಮ್ಮೇಳನ ಯಶಸ್ವಯಾಗಿದೆಯೆಂದರೆ, ಅದಕ್ಕೆ ನಮ್ಮನ್ನು ಅಗಲಿರುವ ದಾಸ ಭಂಡಾರಿ, ಅಬ್ರಹಾಂ ಕರ್ಕಡ, ಸಿ. ನಾರಾಯಣ, ವಿ.ಶಂಕರ ಮೊದಲಾದವರು ನೆಟ್ಟ ಗಿಡ ಪುನಃ ಚಿಗುರುತ್ತಲಿದೆ ಎಂದೇ ಅರ್ಥ.

ಕಂಬನಿ ಪ್ರೊ.ಕೆ.ರಾಜೇಂದ್ರ ಉಡುಪರಿಂದ.

ಕಾ. ದಾಸು ಭಂಡಾರರು ನನ್ನ ಆತ್ಮೀಯ ಕಾಮ್ರೇಡ್. ನನ್ನ ಇಡೀ ಕುಟುಂಬದವರಿಗೂ ಆತ್ಮಿಯರಾಗಿದ್ದರು. ಅವರದ್ದು ವಿಶಿಷ್ಟ ವ್ಯಕ್ತಿತ್ವ. ಅವರ ಪಕ್ಷ ನಿಷ್ಟೆ ಹಾಗೂ ಪಕ್ಷ ಪ್ರೇಮ ಅಸಾದಾರಣವಾದದ್ದು. ನನ್ನ ವಿದ್ಯಾರ್ಥಿ ದೆಸೆಯಲ್ಲೇ ನನಗೆ ಕರ್ಕಡ– ಸಿ.ನಾರಾಯಣ– ಕೆ.ಶಂಕರರ ಪರಿಚಯಿಸಿದರು. ಪಕ್ಷದ ಬಗ್ಗೆ ಏನೇನೋ ತಪ್ಪು ತಿಳಿವಳಿಕೆ ಇದ್ದ ನನಗೆ ಈ ಕಾಮ್ರೇಡ್ ಗಳನ್ನ ನೋಡಿ ಪಕ್ಷ ಹೀಗೂ ಇರುತ್ತದಯೇ ಎಂದು ಆಶ್ಚರ್ಯ ಪಟ್ಟಿದ್ದೆ. ನಾನು ಕೇವಲ ಪುಸ್ತಕ ಓದಿ ಕಮ್ಯೂನಿಸ್ಟ್ ಆಗಲಿಲ್ಲ. ದಾಸು ನಂತಹ ವ್ಯಕ್ತಿತ್ವ ಪಕ್ಷದೊಳಗೆ ನನಗೆ ದಾರಿ ಮಾಡಿ ಕೊಟ್ಟಿತ್ತು.

ದಾಸುವರಿಗೆ ತುಂಬ ಜ್ಞಾನದಾಹ ಇತ್ತು. ನನ್ನ ಮಾರ್ಕ್ಸವಾದದ ಅಲ್ಪ ಜ್ಞಾನವನ್ನು ಅವರೊಂದಿಗೆ ಚರ್ಚಿಸುತ್ತಿದ್ದೆ. ದಾಸು ಅದಕ್ಕೆ ಊರಿನ ಕಥೆಗಳನ್ನು ಉದಾಹರಣೆ ಯಾಗಿ ಹೇಳುತ್ತಿದ್ದರು. ಅವರ ಸಲೂನ್ ಒಂದು ಚರ್ಚಾಕೂಟವೇ ಆಗಿತ್ತು. ನನ್ನ ಹಾಗೂ ಅಣ್ಣ ನಾಗರಾಜನ ಕ್ಷೇತ್ರ ಅಧ್ಯಯನಕ್ಕೆ ದಾಸು ಅವರೇ ಬೆನ್ನೆಲುಬು.

ಕಾ. ದಾಸು ಭಂಡಾರರ ನಿಧನದಿಂದ ನಾವು ಗೌರವಿಸುವ ಆತ್ಮೀಯ ಕಾಮ್ರೇಡ್ ನನ್ನು ಕಳೆದುಕೊಂಡಿದ್ದೇವೆ.

ರಾಜ್ಯ ನಾಯಕರ ಶ್ರದ್ಧಾಂಜಲಿ

ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಯು. ಬಸವರಾಜ್, ಕ.ಪ್ರಾ.ರೈತ ಸಂಘದ ಅಧ್ಯಕ್ಷ ಜಿ.ಸಿ. ಬಯ್ಯಾರೆಡ್ಡಿ, ಸಿಐಟಿಯು ರಾಜ್ಯ ಅಧ್ಯಕ್ಷೆ ವರಲಕ್ಷ್ಮಿ, ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ಕಟ್ಟಡ ಕಾರ್ಮಿಕರ ಸಂಘ–ಛಿತಿಜಿಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾ. ಕೆ. ಮಹಾಂತೇಶ್, ಕ.ಪ್ರಾಂ.ಕೃಷಿ ಕೂಲಿಕಾರರ ಸಂಘದ ಅದ್ಯಕ್ಷ ನಿತ್ಯಾನಂದಸ್ವಾಮಿ, ಪ್ರ.ಕಾ. ಚಂದ್ರಪ್ಪ ಹೊಸ್ಕೇರಾ, ಉಪಾದ್ಯಕ್ಷ ಜಿ.ಎನ್. ನಾಗರಾಜ್, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿಸದಸ್ಯರಾದ ಕೆ. ಪ್ರಕಾಶ್, ದ.ಕ.ಜಿಲ್ಲಾ ಕಾರ್ಯದರ್ಶಿ, ರಾಜ್ಯ ಕಾ.ಮಂ.ಸದಸ್ಯರಾದ ಕೆ. ಯಾದವಶೆಟ್ಟಿ, ಹಿರಿಯ ಮುಖಂಡರಾದ ಕೆ.ಶಂಕರ್, ಮಹಾಬಲ ಒಡೇರ ಹೋಬ್ಳಿ, ಕ. ಆದಿವಾಸಿ ಹಕ್ಕುಗಳ ಸ.ಸಮಿತಿಯ ರಾಜ್ಯ ಸಹ ಸಂಚಾಲಕ ಎಸ್.ವೈ.ಗುರುಶಾಂತ್, ಶ್ರೀಧರ ನಾಡ ಮೊದಲಾದವರು ಶ್ರದ್ಧಾಂಜಲಿ ಸಂದೇಶಗಳನ್ನು ಕಳಿಸಿದ್ದಾರೆ.

–ಬಾಲಕೃಷ್ಣ ಶೆಟ್ಟಿ, ಉಡುಪಿ

ವಲಯದಲ್ಲಿ ದುಡಿಯುವ ಕಾರ್ಮಿಕರಿಂದ ಸಹಸ್ರಾರು ಕೋಟಿ ತೆರಿಗೆ ಸಂಗ್ರಹ ಮಾಡುತ್ತಿದೆ. ವಾಹನಗಳನ್ನು ಖರೀದಿಸುವಾಗ ಮಾರಾಟ ತೆರಿಗೆ, ರಸ್ತೆ ತೆರಿಗೆ, ಪೆಟ್ರೋಲ್, ಡೀಸಲ್, ಎಲ್‌ಪಿಜಿ, ಸಿಎನ್‌ಜಿ, ಆಯಿಲ್ ಮತ್ತು ಬಿಡಿಭಾಗಗಳನ್ನು ಖರೀದಿಸುವಾಗ ತೆರಿಗೆ ವಸೂಲಿ ಮಾಡಲಾಗುತ್ತಿದೆ. ಪೆಟ್ರೋಲಿಯಂ ಪದಾರ್ಥಗಳ ಖರೀದಿಗೆ ಗ್ರಾಹಕರು ಕೊಡುವ ಅರ್ಧದಷ್ಟು ಹಣ ತೆರಿಗೆಯ ಹಣವಾಗಿದೆ. ಜೊತೆಗೆ ಇವರು ಕೊಳ್ಳುವ ಬಹುತೇಕ ಅಗತ್ಯ ವಸ್ತುಗಳ ಮೇಲೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಎಸ್‌ಜಿಎಸ್‌ಟಿ ಮತ್ತು ಸಿಜಿಎಸ್‌ಟಿ ಹೆಸರಿನಲ್ಲಿ ತೆರಿಗೆ ಸಂಗ್ರಹಿಸುತ್ತಿವೆ.

ಕಲ್ಯಾಣ ಮಂಡಳಿಗೆ 1000 ಕೋಟಿ ರೂ ಅನುದಾನ ಕೊಡಿ:

ಖಾಸಗಿ ಸಾರಿಗೆ ವಲಯದ ಕಾರ್ಮಿಕರೂ ಸೇರಿದಂತೆ ಇತರೆ ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಲು ಸರ್ಕಾರ ಮುಂದಾಗಬೇಕು. ಇದಕ್ಕಾಗಿ ನಮ್ಮಿಂದ ಸಂಗ್ರಹಿಸುವ ತೆರಿಗೆಯ ಹಣದಿಂದ ಒಂದಿಷ್ಟು ಭಾಗವನ್ನು ಸರ್ಕಾರವೇ ಅಸಂಘಟಿತ ಕಾರ್ಮಿಕರ ಕಲ್ಯಾಣ ಮಂಡಳಿಗೆ ಕೊಡಬೇಕು ಎಂಬುದು ಆಲ್ ಇಂಡಿಯಾ ರೋಡ್ ಟ್ರಾನ್ಸ್ ಪೋರ್ಟ್ ವರ್ಕರ್ಸ್ ಪೆಡರೇಷನ್ (AIRTWF) ನ ಬೇಡಿಕೆಯಾಗಿದೆ. ಇದಕ್ಕಾಗಿ ಒಂದು ಸಾವಿರ ಕೋಟಿ ರೂ ಹಣವನ್ನು ಸರ್ಕಾರ ತನ್ನ ಬಜೆಟ್ ನಲ್ಲಿ ತೆಗೆದಿರಿಸಬೇಕು ಎನ್ನುತ್ತಾರೆ ಸಂಘದ ನಾಯಕರು.

ಸಾರಿಗೆ ವಾಹನಗಳ ವಿಮಾ ಪಾಲಿಸಿಗಳ ಸಿಜಿಎಸ್‌ಟಿ ಮತ್ತು ಎಸ್‌ಜಿಎಸ್‌ಟಿ ತೆಗೆದು ಹಾಕಬೇಕು ಅಥವಾ ತೆರಿಗೆ ಕಡಿಮೆ ಮಾಡಬೇಕು. ಕರ್ನಾಟಕ ಗೃಹ ಮಂಡಳಿ ಹಾಗೂ ಬಿಡಿಎ ವತಿಯಿಂದ “ಸರ್ವರಿಗೂ ಸೂರು” ಎಂಬ ಸರ್ಕಾರದ ಆಶಯವನ್ನು ಮತ್ತು “ಸಾರಥಿ ಸೂರು” ಎಬ ಸರ್ಕಾರದ ಯೋಜನೆಗಳನ್ನು ಜಾರಿ ಮಾಡಬೇಕು. ಹೊಸ ವಾಹನಗಳ ಮೇಲಿನ ರಾಜ್ಯ ಸರ್ಕಾರದ ಮಾರಾಟ ತೆರಿಗೆಯನ್ನು ಶೇ.28 ರಿಂದ ಶೇ.5ಕ್ಕೆ ಇಳಿಸಬೇಕು. ಪೆಟ್ರೋಲ್, ಡೀಸಲ್ ಹಾಗೂ ಆಟೋ ಗ್ಯಾಸ್ ಮೇಲಿನ ತೆರಿಗೆಗಳನ್ನು ಕಡಿಮೆ ಮಾಡಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ಸಂಘಟನೆ ಸರ್ಕಾರದ ಮುಂದಿಟ್ಟಿದೆ.

ರಾಜ್ಯ ರಸ್ತೆ ಸಾರಿಗೆ ನೌಕರರ ಮೇಲೆ ಖಾಸಗೀಕರಣದ ನೆರಳು:

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮುಕ್ತ ಆರ್ಥಿಕ ನೀತಿ ಮತ್ತು ಖಾಸಗೀಕರಣ ನೀತಿಗಳು ರಸ್ತೆ ಸಾರಿಗೆ ವಲಯದ ಮೇಲೂ ಬೀರಿವೆ. ರಾಜ್ಯ ಸರ್ಕಾರ ತನ್ನ ಒಡೆತನದ ಸಾರಿಗೆ ಸಂಸ್ಥೆಗಳನ್ನು ನಿಧಾನವಾಗಿ ಖಾಸಗೀಕರಣ ಮಾಡಲು ಹೊರಟಿದೆ. ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ಸ್ವಾಮ್ಯದ ಸಾರಿಗೆ ಸಂಸ್ಥೆಗಳಾದ ರಾಜ್ಯ ರಸ್ತೆ ಸಾರಿಗೆ ನಿಗಮ (KSRTC), ಬೆಂಗಳೂರು ಮಹಾನಗರಪಾಲಿಕೆ ಸಂಸ್ಥೆ (BMTC), ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ (KKRTC), ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ (NEKRTC) ಸಂಸ್ಥೆಗಳಲ್ಲಿ 1,04,000 ನೌಕರರು ದುಡಿಯುತ್ತಿದ್ದಾರೆ. ಈ ಸಂಸ್ಥೆಗಳ ನೌಕರರಿಗೆ ಜನವರಿ 1, 2020ರಿಂದ ವೇತನ ಪರಿಷ್ಕರಣೆ ಮಾಡಿಲ್ಲ. ಈ ಸಂಭಂದ ನೌಕರರ ಸಂಘದ ಮುಖಂಡರ ಜೊತೆ ಮಾತುಕತೆ ನಡೆಸಲು ಸಂಸ್ಥೆಯ ಅಧಿಕಾರಿಗಳು ಮುಂದಾಗುತ್ತಿಲ್ಲ. ನೌಕರರು 2021ರ ಏಪ್ರಿಲ್ ನಲ್ಲಿ ತಮ್ಮ ಹಕ್ಕುಗಳಿಗಾಗಿ ಮುಷ್ಕರ ಮಾಡಿದಾಗ 750 ನೌಕರರನ್ನು ಕೆಲಸದಿಂದ ವಜಾ ಮಾಡಿದ್ದಾರೆ. ಹಲವು ಮನವಿಗಳಿಗೂ, ಕಾರ್ಮಿಕರ ಒತ್ತಡಗಳಿಗೂ ಸರ್ಕಾರ ಬೆಲೆ ಕೊಡುತ್ತಿಲ್ಲ. ವಜಾಗೊಂಡೆ ನೌಕರರ ಕೊರತೆ ತುಂಬಲು ಸಂಸ್ಥೆಗಳಿಗೆ ಅಗತ್ಯವಿರುವ ಕಾರ್ಮಿಕರನ್ನು ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳುವ ಮೂಲಕ, ಈ ಗುತ್ತಿಗೆ ಕಾರ್ಮಿಕರಿಗೆ ಖಾಯಂ ಕಾರ್ಮಿಕರಿಗೆ ಸಿಗಬೇಕಾದ ಕಾರ್ಮಿಕ ಹಕ್ಕುಗಳಿಂದ ವಂಚಿತರನ್ನಾಗಿ ಮಾಡಲಾಗಿದೆ. ಮತ್ತು ಕಾರ್ಮಿಕರನ್ನು ಶೋಷಣೆ ಮಾಡಲು ಮುಂದಾಗಿದ್ದಾರೆ.

ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು ಮಹಾನಗರಪಾಲಿಕೆ ಸಂಸ್ಥೆ, ಕೆಕೆಆರ್ ಟಿಸಿ, ಎನ್ ಇಕೆಆರ್ ಟಿಸಿ ನೌಕರರ ವೇತನವನ್ನು ಜನವರಿ 2020ರಿಂದ ಅನ್ವಯವಾಗುವಂತೆ ಪರಿಷ್ಕರಣೆ ಮಾಡಬೇಕು. ಮತ್ತು ಈ ಸಂಸ್ಥೆಗಳ ನೌಕರರು 2021ರ ಏಪ್ರಿಲ್ ತಿಂಗಳು ನಡೆಸಿದ ಮುಷ್ಕರದ ಸಂದರ್ಭದಲ್ಲಿ 750 ನೌಕರರನ್ನು ವಜಾ ಮಾಡಲಾಗಿದೆ. ಇವರನ್ನು ಪುನರ್ ನೇಮಕ ಮಾಡಿಕೊಳ್ಳಬೇಕು ಎಂದು AIRTWF ಒತ್ತಾಯಿಸಿದೆ. ರಾಷ್ಟ್ರೀಕೃತ ಮಾರ್ಗಗಳ ಖಾಸಗೀಕರಣ ಹಾಗೂ ಎಲೆಕ್ಟ್ರಿಕ್ ಬಸ್ಸುಗಳ ಹೆಚ್ಚಳದ ನೆಪದಲ್ಲಿ ಸಾರಿಗೆ ನಿಗಮಗಳ ಖಾಸಗೀಕರಣ ಮಾಡಲು ಸರ್ಕಾರ ಮುಂದಾಗಿರುವುದನ್ನು ಸಂಘವು ಬಲವಾಗಿ ವಿರೋಧಿಸಿದೆ.



ಭಾರತದ ರಾಜಧಾನಿಯಲ್ಲಿನ ಪೊಲೀಸರು ನೇರವಾಗಿ ಮೋದಿ ಎಂಬ "ಬಲಶಾಲಿ" ಸರ್ಕಾರದ ಅಡಿಯಲ್ಲಿದ್ದಾಗಲೇ ಶ್ರದ್ಧಾಳ ಹತ್ಯೆ ಮತ್ತು ಅದರ ನಂತರ ಅನೇಕ ಘಟನೆಗಳು ಸಂಭವಿಸಿದವು. ದೆಹಲಿಯಲ್ಲಿ ಮಹಿಳೆಯರ ವಿರುದ್ಧದ ಅಪರಾಧಗಳ ಪ್ರಮಾಣದಲ್ಲಿ ಭಾರಿ ಹೆಚ್ಚಳವಾಗಿದೆ, ಈ ಸಂದರ್ಭದಲ್ಲಿ 'ಬಲಿಷ್ಟ ನಾಯಕ' ಎಲ್ಲಿದ್ದರು? ಅವರು ಮತ್ತು ಅವರ ಹಿಂಬಾಲಕರು, ಬಿಲ್ಕಿಸ್ ಬಾನು ಅತ್ಯಾಚಾರ ಮತ್ತು ನರಮೇಧದ ಘೋರ ಅಪರಾಧಿಗಳನ್ನು ಬಿಡುಗಡೆ ಮಾಡುವಲ್ಲಿ ನಿರತರಾಗಿದ್ದರು. ಏಕೆಂದರೆ ಆ ಅಪರಾಧಿಗಳ ಹೆಸರು ಅಫ್ತಾಬ್ ಆಗಿರಲಿಲ್ಲ.

ಸರ್ಮಾ ಜೀ! 'ಬಲಿಷ್ಠ ನಾಯಕ'ರ ಮೂಗಿನ ಕೆಳಗೇ ಶ್ರದ್ಧಾ ಹತ್ಯೆ ಆಯಿತಲ್ಲ?!

ಬೃಂದಾ ಕಾರತ್ ಅನು: ಲವಿತ್ರ ವಸ್ತ್ರದ

ಅಸ್ಸಾಂ ಮುಖ್ಯಮಂತ್ರಿ ಅವರ ಹಿತಮಿತ ಭಾಷೆಗೆ ಹೆಸರಾದವರಲ್ಲ. ಆದರೆ ಈ ಸಂದರ್ಭದಲ್ಲಿ ಅವರು ತಮ್ಮನ್ನು ತಾವೇ ಮೀರಿಸಿದ್ದಾರೆ. ಗುಜರಾತಿನ ಸೂರತ್ ನಲ್ಲಿ ಬಿಜೆಪಿ ಪರ ಪ್ರಚಾರ ನಡೆಸುತ್ತಿದ್ದ ಅವರು, 'ಮೋದಿಗೆ ಮತ ನೀಡಿ–ದೇಶದಲ್ಲಿ ಬಲಿಷ್ಠ ನಾಯಕ ಇಲ್ಲದೇ ಹೋದರೆ ಅಫ್ತಾಬ್ ನಂತಹ ಕೊಲೆಗಡುಕರು ಪ್ರತಿ ನಗರದಲ್ಲಿಯೂ ಹುಟ್ಟಿಕೊಳ್ಳುತ್ತಾರೆ, ನಮ್ಮ ಸಮಾಜವನ್ನು ಕಾಪಾಡಲು ಸಾಧ್ಯವಿಲ್ಲ' ಎಂದರು. ರಾಷ್ಟ್ರೀಯ ಕುಟುಂಬ ಮತ್ತು ಆರೋಗ್ಯ ಇಲಾಖೆಯ (NFHS) ಸಮೀಕ್ಷೆಯ ಪ್ರಕಾರ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯದ ಪ್ರಮಾಣದಲ್ಲಿ ದೇಶದ ಐದು ರಾಜ್ಯಗಳಲ್ಲಿ ಒಂದರ (ಆಸ್ಸಾಂ) ನ ಮುಖ್ಯಮಂತ್ರಿ ಶ್ರೀ ಸರ್ಮಾ. ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯ ನಡೆದದ್ದಕ್ಕಿಂತಲೂ ಕಡಿಮೆ ವರದಿಯಾಗುವ, ಕೌಟುಂಬಿಕ ಹಿಂಸೆಯ ಸಮರ್ಥನೆಯೂ ಹೆಚ್ಚಿರುವ ರಾಜ್ಯಗಳಲ್ಲಿ ಒಂದು ಇದು. ಅವರು ಎಂದಾದರೂ ಸಾರ್ವಜನಿಕ ಹೇಳಿಕೆಗಳ ಮೂಲಕ ಅಥವಾ ಸರ್ಕಾರದ ನೀತಿಯ ಮೂಲಕ ಈ ಸಮಸ್ಯೆಯನ್ನು ಪರಿಹರಿಸಿದ್ದಾರೆಯೇ? ಭಾರತದಲ್ಲಿ ಮೂರನೇ ಒಂದು ಭಾಗದಷ್ಟು ಮಹಿಳೆಯರು ಕೌಟುಂಬಿಕ ಹಿಂಸಾಚಾರ ಮತ್ತು/ಅಥವಾ ಲೈಂಗಿಕ ದೌರ್ಜನ್ಯವನ್ನು ಅನುಭವಿಸಿದ್ದಾರೆ ಎಂದು NFHS-5 ತನ್ನ 2021 ರ ವರದಿಯಲ್ಲಿ ದಂಗುಬಡಿಸುವ ಅಂಕಿ ಅಂಶವನ್ನು ಬಹಿರಂಗಪಡಿಸಿದೆ. ಪ್ರತಿಶತ 77 ರಷ್ಟು ಮಹಿಳೆಯರು ಈ ಸಮಸ್ಯೆಯನ್ನು ವರದಿ ಮಾಡದಿರುವುದು ಇನ್ನೂ ಹೆಚ್ಚು ಆತಂಕ ಮೂಡಿಸುವ ಸಂಗತಿಯಾಗಿದೆ.

ಬಲಿಷ್ಠ ನಾಯಕ ಎಲಿದ್ದರು?

ಭಾರತವು ಪುರುಷ ಮತ್ತು ಮಹಿಳೆಯರ ನಡುವೆ ಸಮಾನತೆಯನ್ನು ಖಾತರಿಪಡಿಸುವ ಸಂವಿಧಾನವನ್ನು ಹೊಂದಿದೆ. ಸಂವಿಧಾನವನ್ನು ಅಳವಡಿಸಿಕೊಂಡ 73 ವರ್ಷಗಳ ನಂತರವೂ, ಮಹಿಳೆಯರ ವಿರುದ್ಧ ಪುರುಷರು ನಡೆಸುವ ಕೌಟುಂಬಿಕ ಹಿಂಸಾಚಾರದ ಪ್ರಕರಣಗಳಲ್ಲಿ ಆ ಖಾತರಿಯನ್ನು ಚೂರುಚೂರು ಮಾಡಲಾಗಿದೆ, ಅದರಲ್ಲಿ ಹೆಚ್ಚಿನ ಶೇಕಡಾವಾರು ಪ್ರಕರಣಗಳು ವರದಿಯಾಗಿಲ್ಲ. ಹೆಂಡತಿಯನ್ನು ಹೊಡೆಯುವ ಇವರೆಲ್ಲ ಅಫ್ತಾಬರೇ? ಈ ಎಲ್ಲಾ ಮದುವೆಗಳು "ಲವ್ ಜಿಹಾದ್" ಮದುವೆಗಳೇ? ತಮ್ಮ ಮನೆಯಲ್ಲಿಯೇ ಏಕೆ ಮಹಿಳೆಯರು ಅಸುರಕ್ಷಿತರಾಗಿದ್ದಾರೆ? ಮುಖ್ಯಮಂತ್ರಿ ಪ್ರಕಾರ ಸಮಸ್ಯೆಗೆ ಪರಿಹಾರವಾದ ಬಲಿಷ್ಠ ನಾಯಕ ಎಲಿದ್ದರು? ಸರ್ಮಾ ಮುಂತಾದ ನಾಯಕರು; ಇಂತಹ ಅಪರಾಧಗಳ ಮೂಲ ಕಾರಣವನ್ನು ತಿಳಿಸುವ ಬದಲು ತಮ್ಮ ವಿಷಕಾರಿ ಇಸ್ಲಾಮೋಫೋಬಿಯಾವನ್ನು ಹೆಚ್ಚಿಸಲು ಅತ್ಯಂತ ಭಯಾನಕ ಅಪರಾಧವನ್ನು ಬಳಸುತ್ತಾರೆ, ಇದು ಈ ದೇಶಕ್ಕೆ ಅವಮಾನಕರವಾಗಿದೆ. ಸ್ಪಷ್ಟವಾಗಿ ಹೇಳುವುದಾದರೆ, ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯದ ಬಗ್ಗೆ ಅವರಿಗೆ ಯಾವುದೇ ಕಾಳಜಿ ಇಲ್ಲ. ಅದೇ ರೀತಿ ಅಸ್ಸಾಂ ರಾಜ್ಯದ ಮುಖ್ಯಮಂತ್ರಿಯೂ ವಾಸ್ತವದ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಭಾರತದ ರಾಜಧಾನಿಯಲ್ಲಿನ ಪೊಲೀಸರು ನೇರವಾಗಿ ಮೋದಿ ಎಂಬ "ಬಲಶಾಲಿ" ಸರ್ಕಾರದ ಅಡಿಯಲ್ಲಿದ್ದಾಗಲೇ ಶ್ರದ್ಧಾಳ ಹತ್ಯೆ ಮತ್ತು ಅದರ ನಂತರ ಅನೇಕ ಘಟನೆಗಳು ಸಂಭವಿಸಿದವು. ದೆಹಲಿಯಲ್ಲಿ ಮಹಿಳೆಯರ ವಿರುದ್ಧದ ಅಪರಾಧಗಳ ಪ್ರಮಾಣದಲ್ಲಿ ಭಾರಿ ಹೆಚ್ಚಳವಾಗಿದೆ, ಇದು ದೇಶದ ಅತ್ಯಂತ ಅಸುರಕ್ಷಿತ ನಗರವಾಗಿ ಮಾರ್ಪಾಡಾಗಿದೆ. ಈ ಸಂದರ್ಭದಲ್ಲಿ ಬಲಿಷ್ಟ ನಾಯಕ ಎಲ್ಲಿದ್ದಾರೆ? ಅವರು ಮತ್ತು ಅವರ ನೆರಳಿನಂತಿರುವ ಚೇಲಾ ಅತ್ಯಾಚಾರ ಮತ್ತು ಕೊಲೆಯಂತಹ ಘೋರ ಅಪರಾಧಗಳಿಗೆ ಶಿಕ್ಷೆಗೊಳಗಾದ ಅಪರಾಧಿಗಳನ್ನು ಬಿಡುಗಡೆ ಮಾಡುವಲ್ಲಿ ನಿರತರಾಗಿದ್ದರು. ಏಕೆಂದರೆ ಅಪರಾಧಿಗಳ ಹೆಸರುಗಳು ಅಫ್ತಾಬ್ ಆಗಿರಲಿಲ್ಲ. ಮಹಿಳೆಯ ವಿರುದ್ಧ ಅಪರಾಧ ಎಸಗಿದ ಅಪರಾಧಿಯು ಅಫ್ತಾಬ್ ಅಥವಾ ಬಿಲ್ಕಿಸ್ ಬಾನೊ ಪ್ರಕರಣದಲ್ಲಿ ಘೋರ ಕೊಲೆ/ಅತ್ಯಾಚಾರಗಳ ಅಪರಾಧಿಗಳಾದ ಜಸ್ವಂತ್ ನಾಯ್, ಗೋವಿಂದ್ ನಾಯ್, ಶೈಲೇಶ್ ಭಟ್, ರಾಧ್ಯೇಶಮ್ ಶಾ, ಬಿಪಿನ್ ಚಂದ್ರ ಜೋಶಿ, ಕೇಸರಭಾಯಿ ವೋಹಾನಿಯಾ, ಪ್ರದೀಪ್ ಮೋರ್ಧಿಯಾ, ಬಕಾಭಾಯಿ ವೋಹಾನಿಯಾ, ರಾಜುಭಾಯ್ ಸೋನಿ, ಮಿತೇಶ್ ಭಟ್ಟ್, ರಮೇಶ್ ಚಂದನ ಏನೇ ಆಗಿದ್ದರೂ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ. ಅಥವಾ ಹತ್ರಾಸ್ನಲ್ಲಿ ಯುವ ದಲಿತ ಮಹಿಳೆಯ ಅತ್ಯಾಚಾರಿಗಳು ಮತ್ತು ಕೊಲೆಗಾರರಾದ ಸಂದೀಪ್, ರಾಮು, ಲವ್ಕುಶ್ ಮತ್ತು ರವಿ – ಯಾರೇ ಆಗಿದ್ದರೂ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ. ಅಪರಾಧವನ್ನು ಕೋಮುವಾದಗೊಳಿಸುವುದು ಭಾರತದ ಕಾನೂನು ಚೌಕಟ್ಟಿನ ಮೇಲಿನ ಆಕ್ರಮಣವಾಗಿದೆ.

ಮಹಿಳೆಯರ ಬಗ್ಗೆ ಸೂಕ್ಷ್ಮ ಸಂವೇದನೆಯಿಲ್ಲದೇ ವ್ಯವಹರಿಸುವಲ್ಲಿ ಕೇವಲ ಅಸ್ಸಾಂ ಮುಖ್ಯಮಂತ್ರಿ ಮಾತ್ರವಲ್ಲ ಇನ್ನೂ ಅನೇಕರಿದ್ದಾರೆ. ಇಂತಹ ನಾಯಕರ ಸಾಲಿನಲ್ಲಿ ಮತ್ತೊಬ್ಬರು ಸೇರಿದ್ದಾರೆ. ಅವರೇ ಮೋದಿ ಸರ್ಕಾರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ ರಾಜ್ಯ ಸಚಿವ ಕೌಶಲ್ ಕಿಶೋರ್. "ಶಿಕ್ಷಿತ ಹುಡುಗಿಯರು ಅಂತಹ ಸಂಬಂಧಗಳನ್ನು ಹೊಂದಬಾರದು. ಇಂತಹ ಘಟನೆಗಳಿಂದ ಅವರು ಪಾಠ ಕಲಿಯಬೇಕು. ಅವರು ತಮ್ಮ ಪೋಷಕರ ಅನುಮತಿಯೊಂದಿಗೆ ಯಾರೊಂದಿಗಾದರೂ ಇರಬೇಕು – ಮತ್ತು ಸಂಬಂಧವನ್ನು ನೋಂದಾಯಿಸಿಕೊಳ್ಳಬೇಕು." ಎಂದು ಈ ಸಚಿವರು ಹೇಳಿದ್ದಾರೆ. ಈ ಮಹಿಳೆಯ ಕೊಲೆಗೆ ಅವಳನ್ನೇ ದೂಷಿಸಿರುವ ಅವರ ಹೇಳಿಕೆ ತೀವ್ರ ಖಂಡನೆಗ ಗುರಿಯಾದ್ದು ಸರಿಯಾಗಿಯೇ ಇದೆ. ಇಂಥವರ ದೃಷ್ಟಿಯಲ್ಲಿ (1) ಅವಳು ತನ್ನ ಹೆತ್ತವರನ್ನು ಧಿಕ್ಕರಿಸಿ ತನ್ನ ಸಂಗಾತಿಯನ್ನು ಆರಿಸಿಕೊಂಡದ್ದು ತಪ್ಪಾಗಿದೆ. (2) ಅವಳು ಲಿವ್–ಇನ್ (ಮದುವೆಯಾಗದೆ ಜೊತೆಯಾಗಿ ವಾಸಿಸುವ) ಸಂಬಂಧದಲ್ಲಿರುವುದರ ಬದಲು ತನ್ನ ಸಂಬಂಧವನ್ನು ನೋಂದಾಯಿಸಿದ್ದರೆ, ಮದುವೆಯಾಗಿದ್ದರೆ, ಇದು ಸಂಭವಿಸುತ್ತಿರಲಿಲ್ಲ. (3) ವಿದ್ಯಾವಂತಳಾಗಿದ್ದರಿಂದ ಅವಳು ಇದನ್ನು ತಿಳಿದಿರಬೇಕಿತ್ತು. ಅವರ ಈ ಅಭಿಪ್ರಾಯವನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ ಏಕೆಂದರೆ ಸರ್ಕಾರದಲ್ಲಿರುವ ಯಾವ ವ್ಯಕ್ತಿಯೂ ಅಥವಾ ಪಕ್ಷದ ಯಾವ ನಾಯಕರೂ ಇದನ್ನು ನಿರಾಕರಿಸಿಲ್ಲ.



ವಿದ್ಯಾವಂತ ಮಂತ್ರಿಯವರಿಗೆ ಕಾನೂನು ತಿಳಿದಿಲ್ಲವೇ?

ಮಂತ್ರಿಯವರು ವಿದ್ಯಾವಂತರೆಂದೇ ಅಂದುಕೊಳ್ಳೋಣ, ಹಾಗಾಗಿ ಅವರಿಗೆ ಚೆನ್ನಾಗಿ ತಿಳಿದಿರಬೇಕಿತ್ತು. ಇತ್ತೀಚಿನ NCRB (ರಾಷ್ಟ್ರೀಯ ಅಪರಾಧ ಪ್ರಕರಣಗಳ ಕಚೇರಿ) ವರದಿಯ ಪ್ರಕಾರ ಕಳೆದ ವರ್ಷ (2021) ವರದಕ್ಷಿಣೆ/ಸಂಬಂಧಿತ ಸಾವುಗಳಲ್ಲಿ 6,589 ಮಹಿಳೆಯರು ಸಾವನ್ನಪ್ಪಿದ್ದಾರೆ. ಇವುಗಳಲ್ಲಿ ಹೆಚ್ಚಿನವು "ಪೋಷಕರಿಂದ ಮಾಡಿದ ಮದುವೆಗಳೇ". NFHS ಮಾಹಿತಿಯು ಮುಖ್ಯವಾಗಿ ಈ ವರ್ಗದಲ್ಲಿರುವ ಕುಟುಂಬಗಳದ್ದಾಗಿದೆ. ಮದುವೆಗಾಗಿ ನೀಡಿದ ಪೋಷಕರ ಅನುಮೋದನೆಯು ಈ ಯುವತಿಯರನ್ನು ಕೊಲ್ಲುವುದನ್ನು ಅಥವಾ ಮೂರನೇ ಒಂದು ಭಾಗದಷ್ಟು ಮಹಿಳೆಯರು ಎದುರಿಸುತ್ತಿರುವ ಕೌಟುಂಬಿಕ ಹಿಂಸೆಯನ್ನು ತಡೆದಿದೆಯೇ? ಇದಲ್ಲದೆ, ಸಚಿವರು ಕಾನೂನಿನ ಬಗ್ಗೆ ಸ್ವತಃ ಶಿಕ್ಷಣ ಪಡೆಯಬೇಕಿದೆ. ಕೌಟುಂಬಿಕ ಹಿಂಸಾಚಾರದ ದೂರುಗಳ ಪ್ರಕರಣಗಳಲ್ಲಿ ಲೀವ್ ಇನ್ ಸಂಬಂಧವನ್ನು ಕಾನೂನು ಮನ್ನಿಸುತ್ತದೆ. ಇತ್ತೀಚೆಗೆ, ಸರ್ವೋಚ್ಚ ನ್ಯಾಯಾಲಯವು ಎಲ್ಲಾ ಮಹಿಳೆಯರಿಗೆ, ಅವರು ವಿವಾಹಿತರಾಗಿರಲಿ ಅಥವಾ ಒಂಟಿಯಾಗಿರಲಿ– ಅವರ ಸಂತಾನೋತ್ಪತ್ತಿ ಸ್ವಾಯತ್ತತೆಯನ್ನು ಸಹ ಎತ್ತಿಹಿಡಿದಿದೆ.

ಈ ಸಚಿವರು ಮಾಡಿದಂತಹ ವಾದಗಳು ಆಕ್ಷೇಪಾರ್ಹವಾಗಿವೆ. ಏಕೆಂದರೆ ಅವರು ಹಿಂಸಾಚಾರಕ್ಕೆ ಅದಕ್ಕೆ ಬಲಿಯಾದವರನ್ನೇ ದೂಷಿಸುತ್ತಾರೆ, ಆದರೆ ಅವರು "ಅನುಮೋದಿತ" ವಿವಾಹಗಳಲ್ಲಿ ಮಹಿಳೆಯರು ಎದುರಿಸುತ್ತಿರುವ ಕೌಟುಂಬಿಕ ಹಿಂಸೆಯನ್ನು ಮರೆಮಾಚುತ್ತಾರೆ ಮತ್ತು ನಿರ್ಲಕ್ಷಿಸುತ್ತಾರೆ. ಪಿತೃಪ್ರಭುತ್ವದ ಲಕ್ಷ್ಮಣ ರೇಖೆಯನ್ನು ಶ್ರದ್ಧಾ ಉಲ್ಲಂಘಿಸಿದಂತೆ ಉಲ್ಲಂಘಿಸಿದರೆ ಅಂತಹ ಮಹಿಳೆಯ ಮೇಲಿನ ದೌರ್ಜನ್ಯವನ್ನು ಸಮರ್ಥಿಸುತ್ತಾರೆ. ಹುಡುಗಿಯರು ತಮ್ಮ ವಿರುದ್ಧದ ಹಿಂಸಾಚಾರವನ್ನು ವರದಿ ಮಾಡಲು ಮತ್ತು ಹಿಂಸಾತ್ಮಕ ಸಂಬಂಧದಿಂದ ಹೊರಬರಲು ಸಮಾಜದ ಪೂರ್ವಾಗ್ರಹದ ವರ್ತನೆಗಳು ಮತ್ತು ಸಾಮಾಜಿಕ ಕಳಂಕದ ಭಯವು ಹೆಚ್ಚಿನ ತಡೆಗೋಡೆಯಾಗಿದೆ.

ಅಫ್ತಾಬ್ ಪೂನಾವಾಲಾ ಮಾಡಿದ ಶ್ರದ್ಧಾ ವಾಕರ್ ಅವರ ಭೀಕರ ಹತ್ಯೆ ಮತ್ತು ಆಕೆಯ ದೇಹವನ್ನು ತುಂಡರಿಸಿದ ಕ್ರೌರ್ಯವು, ಸರಣಿ ಅತ್ಯಾಚಾರಿಯೊಂದಿಗೆ ಅಮಾನವೀಯ ಸಂಬಂಧದಲ್ಲಿ ಸಿಲುಕಿರುವ ಯುವತಿಯ ಸಂಪೂರ್ಣ ದುರ್ಬಲತೆಯನ್ನು ತೋರಿಸಿದೆ. ಆಕೆಯ ಹಿತೈಷಿಗಳು ಮತ್ತು ಕೆಲಸದಲ್ಲಿರುವ ಆಕೆಯ ಸಹೋದ್ಯೋಗಿಗಳ ಸಾಕ್ಷ್ಯಗಳ ಪ್ರಕಾರ ಅವಳೊಂದಿಗಿನ ಪುನರಾವರ್ತಿತ ಹಿಂಸಾಚಾರಕ್ಕೆ ಗುರಿಯಾದ ತನ್ನ ಅನುಭವವನ್ನು ಅವರೊಂದಿಗೆ ಹಂಚಿಕೊಂಡಿದ್ದಾಳೆ, ಆದರೂ ಆ ಹಿಂಸಾಚಾರಕ್ಕೆ ಗುರಿಯಾದ ಸಂಬಂಧದಿಂದ ಹೊರತರಲು ಮಾಡಿದ ಪ್ರಯತ್ನಗಳು ಯಶಸ್ವಿಯಾಗಲಿಲ್ಲ. ಈಗ ಮಾಧ್ಯಮಗಳೊಂದಿಗೆ ಹಂಚಿಕೊಳ್ಳಲಾಗುತ್ತಿರುವ ಆಕೆಯ ವಿರುದ್ಧದ ಹಿಂಸಾಚಾರದ ಸಾಕ್ಷ್ಯವನ್ನು ಆಕೆಯ ಸ್ನೇಹಿತರು ಎಂದಿಗೂ ಪೊಲೀಸರೊಂದಿಗೆ ಹಂಚಿಕೊಂಡಿರಲಿಲ್ಲ.

ಹಿಂಸಾತ್ಮಕ ಸಂಬಂಧದಿಂದ ಹೊರಬರುವ ಸ್ಥೈರ್ಯವನ್ನು ಮಹಿಳೆಯಲ್ಲಿ ಮೂಡಿಸುವ ವಾತಾವರಣ ಬೇಕು

ಪತಿವ್ರತೆಯ ಪರಿಕಲ್ಪನೆಯನ್ನು ಪ್ರಶ್ನಿಸುವ, ಅದರ ವಿರುದ್ಧ ದಂಗೆಯೇಳುವ ಅಥವಾ ಅಧೀನತೆಯ ವಿರುದ್ಧ ಮಾತನಾಡುವ ಮಹಿಳೆಯನ್ನು ದೂಷಿಸುವ ಸಂಸ್ಕೃತಿ, ಅಂತಹ ನಿಂದನೆಯನ್ನು ಸಾಮಾನ್ಯೀಕರಿಸುವ ಅಥವಾ ಸಹಿಸಿಕೊಳ್ಳುವ ಸಂಸ್ಕೃತಿಯಿಂದಲೇ ಕೌಟುಂಬಿಕ ಸಂಬಂಧದಲ್ಲಿ ಪುರುಷ ಹಿಂಸಾಚಾರಕ್ಕೆ ಬಲ ತುಂಬಿದೆ. ಮನುಸ್ಮೃತಿಯ ಮಾತಿನಲ್ಲಿ ಹೇಳುವುದಾದರೆ, "ಒಳ್ಳೆಯ ಮಹಿಳೆ ತನ್ನ ಪತಿಯನ್ನು ಯಾವಾಗಲೂ ದೇವರಂತೆ ಪೂಜಿಸಬೇಕು". ನಮ್ಮ ಶಿಕ್ಷಣ ವ್ಯವಸ್ಥೆಯು ಯುವಜನರಲ್ಲಿ ಇಂತಹ ಆಲೋಚನೆಗಳನ್ನು ಕೆಡಹುವುದು ಒಟ್ಟಿಗಿರಲಿ, ಪ್ರಶ್ನಿಸುವುದದು ಸಹ ಇಲ್ಲ; ವ್ಯತಿರಿಕ್ತವಾಗಿ, ಗಂಡುಮಗನಿಗೆ ಆದ್ಯತೆಯ ಸಿದ್ಧಾಂತಗಳು ಮೇಲುಗೈ ಸಾಧಿಸುತ್ತವೆ. ಯುಜಿಸಿ ನಿರ್ದೇಶನಗಳ ನಿರ್ದೇಶನದಂತೆ ನಮ್ಮ ಮಕ್ಕಳಿಗೆ ಖಾಪ್ ಪಂಚಾಯತ್ ಗಳ ಅದ್ಭುತಗಳು, "ಗೌರವ ಹತ್ಯೆಯ ಘೋರ ಅಪರಾಧಗಳಲ್ಲಿ" ಅವರ ಪಾತ್ರಕ್ಕಾಗಿ ಸುಪ್ರೀಂ ಕೋರ್ಟಿನಿಂದ ದೋಷಾರೋಪಣೆಗೆ ಒಳಗಾದ ಖಪ್ ಪಂಚಾಯತ್ ಗಳು, ಜಾತಿವಾದಿ ಸಂಸ್ಥೆಗಳು 'ಎಂತಹ 'ಅದ್ಭುತಗಳು' ಎಂದು ಯುಜಿಸಿ ನಿರ್ದೇಶನದ ಪ್ರಕಾರ ಕಲಿಸಬೇಕು ಎಂದು ಪ್ರೇರೇಪಿಸುವಂತಹ ಸಿದ್ಧಾಂತಗಳನ್ನು ಒಪ್ಪುವವರು ಇಂದು ಅಧಿಕಾರದಲ್ಲಿದ್ದಾರೆ.

ಕಳೆದ ದಶಕದಲ್ಲಿ ಮಹಿಳೆಯರ ಹಕ್ಕುಗಳು ಮತ್ತು ಸಮಾನತೆಯ ಚೌಕಟ್ಟು ಗಂಭೀರವಾದ ಹಿನ್ನಡೆಯನ್ನು ಕಂಡಿದೆ. ಸತ್ತುಹೋಗಿರುವ ಅತ್ಯಂತ ಪ್ರತಿಗಾಮಿ ಸಾಮಾಜಿಕ ಚಿಂತನೆಯನ್ನು, ಸ್ತ್ರೀಯರ ಸ್ವಾಯತ್ತತೆಯ ವಿರುದ್ಧ ಉತ್ತೇಜಿಸಲು ಯಾವುದೇ ಹಿಂಜರಿಕೆಯಿಲ್ಲದವರು ರಾಜಕೀಯ ಅಧಿಕಾರ ಪಡೆದಿರುವುದರಿಂದ, ಭಾರತದಲ್ಲಿ ಪಿತೃಪ್ರಭುತ್ವದ ಕಲ್ಪನೆಗಳು ಮತ್ತು ಆಚರಣೆಗಳು ಹೊಸ ಜೀವವನ್ನು ಪಡೆದುಕೊಂಡಿದೆ. ಮನುಸ್ಮೃತಿಯನ್ನು ➚

ಮಹಿಳೆಯರ ವಿರುದ್ಧದ ದೌರ್ಜನ್ಯ ನಿಲ್ಲಿಸಿ

ಭಾರತದಲ್ಲಿ ಗಂಭೀರ ಪರಿಸ್ಥಿತಿ

ಪ್ರಕಾಶ್ ಕಾರತ್

ನವೆಂಬರ್ 25ನ್ನು 'ಮಹಿಳೆಯರ ವಿರುದ್ಧದ ಹಿಂಸಾಚಾರ ನಿರ್ಮೂಲನೆ'ಯ ಅಂತರರಾಷ್ಟ್ರೀಯ ದಿನವಾಗಿ ಆಚರಿಸಲು ವಿಶ್ವ ಸಂಸ್ಥೆ ನೀಡಿರುವ ಕರೆಗೆ ವ್ಯಾಪಕ ಮಾಧ್ಯಮ ಪ್ರಚಾರ ಸಿಕ್ಕಿದೆ. ಜಗತ್ತಿನಲ್ಲಿ ಪ್ರತಿ 11 ನಿಮಿಷಕ್ಕೆ ಒಬ್ಬ ಮಹಿಳೆ ಅಥವಾ ಹೆಣ್ಣುಮಕ್ಕಳು ಅವರ ನಿಕಟ ಸಂಗಾತಿ ಅಥವಾ ಕುಟುಂಬ ಸದಸ್ಯರಿಂದ ಕೊಲೆಯಾಗುತ್ತಾರೆ ಎಂಬ ಘೋರ ಮಾಹಿತಿಯನ್ನು ವಿಶ್ವ ಸಂಸ್ಥೆ ಮಹಾ ಕಾರ್ಯದರ್ಶಿ ಅಂಟೋನಿಯೊ ಗುಟೆರಸ್ ಬಿಚ್ಚಿಟ್ಟ ಹಿನ್ನೆಲೆಯಲ್ಲಿ ಮಾಧ್ಯಮಗಳು ಇದರೆಡೆಗೆ ಗಂಭೀರವಾಗಿ ಗಮನಹರಿಸಿವೆ. ಮಹಿಳೆಯರು ಮತ್ತು ಹೆಣ್ಣುಮಕ್ಕಳ ಮೇಲೆ ನಡೆಯುತ್ತಿರುವ ಹಿಂಸಾಚಾರವು ಜಗತ್ತಿನ ಅತೀಹೆಚ್ಚು ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ ಎಂದು ಗುಟೆರಸ್ ವರ್ಣಿಸಿದ್ದಾರೆ.

ಕೌಟುಂಬಿಕ ದೌರ್ಜನ್ಯವು ಮಹಿಳೆಯರ ವಿರುದ್ಧದ ಅಘೋಷಿತ ಯುದ್ಧವಾಗಿದೆ. ಯಾವುದೇ ಸಾಂಪ್ರದಾಯಿಕ ಯುದ್ಧದಲ್ಲಿ ಸಂಭವಿಸಿದ ಸಾವುಗಳಿಗಿಂತ ಹೆಚ್ಚಿನ ಸಾವುಗಳು ಕೌಟುಂಬಿಕ ದೌರ್ಜನ್ಯಗಳಿಂದ ಸಂಭವಿಸಿವೆ. ಬಂಡವಾಳಶಾಹಿಯ ಕೇಂದ್ರ ಬಿಂದುಗಳಾದ ತಥಾಕಥಿತ ಅಭಿವೃದ್ಧಿ ಹೊಂದಿದ ದೇಶಗಳು ಈ ವಿಚಾರದಲ್ಲಿ ಅತ್ಯಂತ ಕೆಟ್ಟ ದಾಖಲೆ ಹೊಂದಿರುವುದು ವಿಶ್ವ ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಅಂಕಿಅಂಶಗಳು ತೋರಿಸುತ್ತವೆ.

ಭಾರತದಲ್ಲಿ ಗಂಭೀರ ಸ್ಥಿತಿ

ಈ ವಿಚಾರದಲ್ಲಿ ಭಾರತದ ಪರಿಸ್ಥಿತಿ ತುಂಬಾ ಗಂಭೀರವಾಗಿದೆ. ರಾಷ್ಟ್ರೀಯ ಅಪರಾಧ ಬ್ಯೂರೋದ (ಎನ್‌ಸಿಬಿ) 2021ರ ವರದಿಗಳ ಪ್ರಕಾರ ಸರಾಸರಿ ಪ್ರತಿದಿನ 86 ಮಹಿಳೆಯರ ಮೇಲೆ ಅತ್ಯಾಚಾರ ನಡೆದಿರುವ ಪ್ರಕರಣಗಳು ದಾಖಲಾಗುತ್ತವೆ. ಐಪಿಸಿ ಅಡಿಯಲ್ಲಿ ದಾಖಲಾಗುವ ಮಹಿಳೆಯರ ವಿರುದ್ಧ ದೌರ್ಜನ್ಯಕ್ಕೆ ಸಂಬಂಧಿಸಿದ ಸರಾಸರಿ 49 ಪ್ರಕರಣಗಳು ಪ್ರತಿ ಗಂಟೆಗೆ ನಡೆಯುತ್ತವೆ. ವರದಕ್ಷಿಣೆ ಸಂಬಂಧಿತ ಕೌಟುಂಬಿಕ ದೌರ್ಜನ್ಯಕ್ಕೆ ಪ್ರತಿದಿನ ಸರಾಸರಿ 18 ಮಹಿಳೆಯರು ಪ್ರಾಣ ಕಳೆದುಕೊಳ್ಳುತ್ತಾರೆ. 2021ರ ಒಂದೇ ವರ್ಷದಲ್ಲಿ 6589 ಮಹಿಳೆಯರು ವರದಕ್ಷಿಣೆ ಭೂತಕ್ಕೆ ಬಲಿಯಾಗಿದ್ದಾರೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–5 ಹೇಳುವ ಪ್ರಕಾರ ಸಮೀಕ್ಷೆಗೆ ಒಳಪಡಿಸಲಾದ ಮಹಿಳೆಯರಲ್ಲಿ ಮೂರನೇ ಒಂದರಷ್ಟು ಮಹಿಳೆಯರು ಕೌಟುಂಬಿಕ ಅಥವಾ ಲೈಂಗಿಕ ಹಿಂಸಾಚಾರಕ್ಕೆ ಒಳಗಾಗಿದ್ದಾರೆ.

ಈ ಎಲ್ಲಾ ಅಂಕಿಸಂಖ್ಯೆಗಳು ಯಾವುದೇ ದೇಶವಾದರೂ ತಲೆತಗ್ಗಿಸಬೇಕಾದ ವಿಚಾರವಾಗಿದೆ. ಆದರೆ, ಭಾರತದಲ್ಲಿ ಸರಕಾರ ಈ ಬಗ್ಗೆ ಚಕಾರ ಎತ್ತಿಲ್ಲ. ಇದೊಂದು ಸಾಂಕ್ರಾಮಿಕತೆ ಎಂದು ಕೆಲವರು ವರ್ಣಿಸಿದ್ದಾರೆ; ವಾಸ್ತವವಾಗಿ ಮಹಿಳೆಯರ ವಿರುದ್ಧದ ಹಿಂಸಾಚಾರ ನಮ್ಮ ಸಾಮಾಜಿಕ ವ್ಯವಸ್ಥೆಗಳಲ್ಲಿ ಎಂಡೆಮಿಕ್ ಆಗಿದೆ (ಹಾಸುಹೊಕ್ಕಾಗಿದೆ). ಆಕ್ರಮಣಕಾರಿ ಜಾತೀಯ ಪದ್ಧತಿಗಳಿಂದಾಗಿ ದಲಿತ ಮಹಿಳೆಯರು ಅತ್ಯಂತ ಕೆಟ್ಟ ಹಿಂಸೆಯನ್ನು ಎದುರಿಸುತ್ತಾರೆ.

ಮಹಿಳೆಯರ ವಿರುದ್ಧ ದೌರ್ಜನ್ಯ ಎಸಗುವವರಿಗೆ ಜಾತಿವಾದಿ ಹಾಗೂ ಪಿತೃಪ್ರಧಾನ ವ್ಯವಸ್ಥೆ ರಕ್ಷಣೆ (ಇಮ್ಯುನಿಟಿ) ನೀಡುತ್ತಿರುವುದು ಇದಕ್ಕೆ ಒಂದು ಮುಖ್ಯ ಕಾರಣವಾಗಿದೆ. ಈ ಕಾರಣದಿಂದಾಗಿಯೇ ಶೇಕಡ 75ರಷ್ಟು ಅರೋಪಿಗಳು ಯಾವುದೇ ಶಿಕ್ಷೆಗೊಳಗಾಗದೆ ಪಾರಾಗುತ್ತಾರೆ. ಪೊಲೀಸರ ಪಕ್ಷಪಾತದಿಂದ ಕೂಡಿದ ವಿಚಾರಣೆ, ನ್ಯಾಯಾಂಗ ವ್ಯವಸ್ಥೆಯಲ್ಲಿ ದೀರ್ಘಕಾಲದ ವಿಳಂಬಗಳು ಮತ್ತು ದೌರ್ಜನ್ಯಕ್ಕೆ ಒಳಗಾಗಿ ಬದುಕುಳಿದ ಸಂತ್ರಸ್ತರ ಮೇಲೆ ರಾಜಿ ಮಾಡಿಕೊಳ್ಳುವಂತೆ ಸಾಮಾಜಿಕ ಒತ್ತಡಗಳು ಇವೆಲ್ಲವೂ ಅಪರಾಧಿಗಳಿಗೆ ಕಡಿಮೆ ಪ್ರಮಾಣದ ಶಿಕ್ಷೆಗೆ ಕಾರಣವಾಗಿವೆ.

ಸರಕಾರದ ಧೋರಣೆ

ಕೌಟುಂಬಿಕ ಹಿಂಸಾಚಾರವನ್ನು ಸಹಜವೆಂಬಂತೆ ಭಾವಿಸುವ ಸಂಸ್ಕೃತಿಗಳಿಗೆ ಹಾಲಿ ಸರಕಾರದಡಿ ಹೊಸದೊಂದು ಜೀವ ಸಿಕ್ಕಿದೆ. ಗಂಡ ಅಥವಾ ಆತನ ಸಂಬಂಧಿಕರಿಂದ ನಡೆಯುವ ದೌರ್ಜನ್ಯಕ್ಕೆ ಒಗ್ಗಿಕೊಳ್ಳುವುದು ಒಬ್ಬ ಮಾದರಿ ಮಹಿಳೆಯ ಲಕ್ಷಣ ಎಂಬ ಭಾವನೆಗಳನ್ನು ಅದು ಉತ್ತೇಜಿಸುತ್ತದೆ. ಒಬ್ಬ ಮಹಿಳೆಯ ಉತ್ತಮ ನಡತೆಯ ಭಾಗ ಅದೆಂದು ಪ್ರಚುರಪಡಿಸಲಾಗುತ್ತಿದೆ. ಪತಿಯಿಂದಲೇ ಅತ್ಯಾಚಾರ ನಡೆಯುವುದು ಒಂದು ಕ್ರಿಮಿನಲ್ ಅಪರಾಧ ಎಂದು ಪರಿಗಣಿಸಿದರೆ ಅದರಿಂದ ಕೌಟುಂಬಿಕ ಸಂಬಂಧ ಕೆಡುತ್ತದೆ ಎನ್ನುವ ಆಧಾರದ ಮೇಲೆ ಹಾಗೆ ಮಾಡಲು ಸರಕಾರ ನಿರಾಕರಿಸುತ್ತಿರುವುದು ಅದೇ ಮಾನಸಿಕ ಸ್ಥಿತಿಯ ಪ್ರತಿಬಿಂಬವಾಗಿದೆ. ಈ ಮನುವಾದಿ ಸಂಸ್ಕೃತಿಯು ಕೌಟುಂಬಿಕ ಸ’ಂಬಂದ,’ಗ’ಳ’ನ’ು ಜನತಾಂತ್ರಿಕಗೊಳಿಸಲು ಹಾಗೂ ಮಹಿಳಾ ಸಮಾನತೆಯನ್ನು ರಕ್ಷಿಸುವಲ್ಲಿ ದೊಡ್ಡ ಅಡ್ಡಿಯಾಗಿದೆ.

ಸಂತ್ರಸ್ತರು ಮತ್ತು ಆರೋಪಿಯ ಧಾರ್ಮಿಕ ಹಿನ್ನೆಲೆ ಆಧಾರದಲ್ಲಿ ಪ್ರತಿಯೊಂದು ಅತ್ಯಾಚಾರ ಪ್ರಕರಣವನ್ನು ಕೋಮುವಾದೀಕರಣಗೊಳಿಸುವುದು ಇನ್ನೂ ಹೆಚ್ಚು ಅಪಾಯಕಾರಿಯಾಗಿದೆ. ಬಿಲ್ಕಿಸ್ ಬಾನು ಪ್ರಕರಣದಲ್ಲಿ ಸಾಮೂಹಿಕ ಅತ್ಯಾಚಾರಿಗಳು ಮತ್ತು ಕೊಲೆಗಾರರ ಬಿಡುಗಡೆಯನ್ನು ವಿರೋಧಿಸಿ ಸಲ್ಲಿಸಲಾದ ಅರ್ಜಿಗೆ ಸಂಬಧಿಸಿ ಗುಜರಾತ್ ಸರಕಾರ ಸಲ್ಲಿಸಿದ ಅಫಿಡವಿಟ್, ಕೇಂದ್ರ ಗೃಹ ಸಚಿವಾಲಯ ಅವರ ಬಿಡುಗಡೆಗೆ ಅನುಮತಿ ನೀಡುವ ಮುನ್ನ ಹೇಳಿದ್ದನ್ನು ನಿರ್ದಿಷ್ಟವಾಗಿ ಉಲ್ಲೇಖಿಸಿದೆ. ಬೇರೆ ಮಾತಿನಲ್ಲಿ ಹೇಳುವುದಾದರೆ ಗೃಹ ಸಚಿವ ಅಮಿತ್ ಷಾ, ಕೊಲೆಗಾರರು ಮತ್ತು ಅತ್ಯಾಚಾರಿಗಳನ್ನು ಬಿಡುಗಡೆ ಮಾಡುವಲ್ಲಿ ನೇರವಾಗಿ ಒಳಗೊಂಡಿದ್ದಾರೆ. ಅತ್ಯಂತ ಹೀನ ಅಪರಾಧದಲ್ಲಿ ಪಾಲ್ಗೊಂಡವರನ್ನು ಅವರ ಧರ್ಮ ಮತ್ತು ರಾಜಕೀಯ ಬಾಂಧವ್ಯದ ಆಧಾರದಲ್ಲಿ ಬಿಡುಗಡೆ ಮಾಡಲಾಗಿದೆ. ಮುಸ್ಲಿಮರು ಆರೋಪಿಗಳಾಗಿರುವ ಸಂದರ್ಭದಲ್ಲಿ ಮಾತ್ರವೇ ಮಹಿಳೆಯರಿಗೆ ನ್ಯಾಯ ಬೇಕೆಂದು ಆಳುವ ಪಕ್ಷ ಮತ್ತು ಅದರ ಸಂಘ ಪರಿವಾರದ ಸಂಘಟನೆಗಳಿಗೆ ನೆನಪಾಗುವುದು ಕಾಕತಾಳೀಯವೇನೂ ಅಲ್ಲ.

ಶ್ರದ್ಧಾ ವಾಕರ್ ಪ್ರಕರಣಕ್ಕೆ ಸಂಬಂಧಿಸಿ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಶ್ವ ಶರ್ಮಾ ನೀಡಿರುವ ಹೇಳಿಕೆ ಇದನ್ನು ಪುಷ್ಟೀಕರಿಸುತ್ತದೆ ಹಾಗೂ ಅದು ತೀರಾ ಖಂಡನೀಯವಾಗಿದೆ. 'ಪ್ರತಿ ನಗರದಲ್ಲಿರುವ ಅಫ್ತಾಬ್‌ರನ್ನು ತಡೆಯಲು' ನೀವು 'ಬಲಿಷ್ಠ ವ್ಯಕ್ತಿ' ಮೋದಿಗೆ ಮತ ನೀಡಬೇಕು ಎಂದು ಶರ್ಮಾ ಹೇಳಿದ್ದಾರೆ. ಶ್ರದ್ಧಾಳನ್ನು ಆಕೆಯ ಮುಸ್ಲಿಂ ಸ್ನೇಹಿತ ಅಫ್ತಾಬ್ ಬರ್ಬರವಾಗಿ ಕೊಂದು ಭಯಾನಕ ರೀತಿಯಲ್ಲಿ ದೇಹವನ್ನು ತುಂಡು ತುಂಡು ಮಾಡಿದ ಹೇಯ ಘಟನೆಯನ್ನು ಅತ್ಯಂತ ವಿಷಮಯ ಕೋಮುವಾದಿ ಪ್ರಚಾರ ನಡೆಸಲು ಹಾಗೂ ಲವ್ ಜಿಹಾದ್ ಎಂದು ಬಿಂಬಿಸಲು ಬಳಸಲಾಗುತ್ತಿದೆ.



ದೆಹಲಿಯಲ್ಲಿ ಭೀಕರ ಘಟನೆ ಪತ್ತೆಯಾದ ಆಸುಪಾಸಿನ ಸಮಯದಲ್ಲೇ ಉತ್ತರ ಪ್ರದೇಶದ ಅಜಂಗಢದಲ್ಲಿ ಒಬ್ಬ ಯುವತಿಯನ್ನು ಕೊಂದು ಆರು ಭಾಗಗಳಾಗಿ ತುಂಡರಿಸಲಾಗಿತ್ತು, ಆಕೆಯ ಮಾಜಿ ಬಾಯ್‌ಫ್ರೆಂಡ್ ಈ ಕುಕೃತ್ಯ ನಡೆಸಿದ್ದ. ಸೀತಾಪುರ ಜಿಲ್ಲೆಯಲ್ಲಿ ಇನ್ನೊಬ್ಬ ಮಹಿಳೆಯನ್ನು ಆಕೆಯ ಗಂಡನೇ ಕೊಂದು ಶವವನ್ನು ತುಂಡರಿಸಿ ಹೊಲವೊಂದರಲ್ಲಿ ಹೂತು ಹಾಕಿದ್ದ. ಈ ಎರಡೂ ಪ್ರಕರಣಗಳಲ್ಲಿ ಬಿಜೆಪಿ ನಾಯಕರು ತುಟಿ ಪಿಟಿಕ್ ಎನ್ನಲಿಲ್ಲ. ಯಾಕೆಂದರೆ ಈ ಎರಡೂ ಪ್ರಕರಣಗಳ ಆರೋಪಿಗಳು ಹಿಂದೂ ಸಮುದಾಯಕ್ಕೆ ಸೇರಿದವರು. ದಲಿತ ಹುಡುಗಿಯರನ್ನು ಮೇಲ್ಜಾತಿ ಪುರುಷರು ಅತ್ಯಾಚಾರಗೈದು ಕೊಂದು ಹಾಕಿದಾಗಲೂ ಅವರು ಒಂದೇ ಒಂದು ಮಾತಾಡಲಿಲ್ಲ. ಭಾರತದಲ್ಲಿ ಮಹಿಳೆಯರ ವಿರುದ್ಧದ ದೌರ್ಜನ್ಯದ ಈ ಬಗೆಯ ಕೋಮುವಾದೀಕರಣವು ಅತಿ ಅಪಾಯಕಾರಿ ಆಯುಧವಾಗಿದ್ದು ಅದು ನ್ಯಾಯಾಂಗ ಪ್ರಕ್ರಿಯೆಯನ್ನು ಹಾಗೂ ನ್ಯಾಯ ನೀಡಿಕೆಯನ್ನು ಬುಡಮೇಲು ಮಾಡಬಲ್ಲದಾಗಿದೆ.

ಬಂಡವಾಳಶಾಹಿ ಮತ್ತು ಅದರ ಸಾಮಾಜಿಕ ಸಂರಚನೆಗಳು ಜಗತ್ತಿನಾದ್ಯಂತ ಪಿತೃಪ್ರಧಾನ ಅಭಿಪ್ರಾಯಗಳನ್ನು ಬೆಂಬಲಿಸಿವೆ ಹಾಗೂ ಪೋಷಿಸಿವೆ. ಅಗ್ಗದ ಸ್ತ್ರೀ ಶ್ರಮವನ್ನು ಶೋಷಿಸಲು ಮಹಿಳೆಗೆ ಅಧೀನ ಸ್ಥಾನಮಾನವನ್ನು ಉತ್ತೇಜಿಸುವ ಸಾಮಾಜಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆಯನ್ನು ಅದು ಆಧರಿಸಿದೆ. ಈ ಮೂಲಭೂತ ಅಂಶದ ಆಧಾರದ ಮೇಲೆ ಬಂಡವಾಳಶಾಹಿ ಜಗತ್ತಿನಾದ್ಯಂತ ಮಹಿಳೆಯರು ತಾರತಮ್ಯ ಮತ್ತು ಹಿಂಸೆಯನ್ನು ಎದುರಿಸುತ್ತಿದ್ದಾರೆ. ಕೆಲವರು ಇತರರಿಗಿಂತ ಹೆಚ್ಚು ಸಮಸ್ಯೆಗೆ ಒಳಗಾಗುತ್ತಾರೆ. ಮನುಸ್ಮೃತಿ ಮತ್ತು ಜಾತಿ ಪದ್ಧತಿಯ ಶ್ರೇಣೀಕರಣವನ್ನು ಬಲಪಂಥೀಯ ಹಿಂದೂತ್ವವಾದಿ ಶಕ್ತಿಗಳು ಬಹಿರಂಗವಾಗಿಯೇ ಪ್ರತಿಪಾದಿಸುವ ಮೂಲಕ ಭಾರತದಲ್ಲಿ ಪ್ರಚಲಿತವಿರುವ ಸ್ತ್ರೀ ದ್ವೇಷ ಮತ್ತು ಪಿತೃಪ್ರಧಾನ ಮೌಲ್ಯಗಳಿಗೆ ಇನ್ನಷ್ಟು ಇಂಬು ನೀಡಲಾಗುತ್ತಿದೆ. ಇದು ಅಲ್ಪಸಂಖ್ಯಾತ ಸಮುದಾಯದಲ್ಲಿನ ಶಕ್ತಿಗಳನ್ನು ಬಲಪಡಿಸಿ ಮಹಿಳೆಯರನ್ನು ಇನ್ನಷ್ಟು ಅಧೀನಗೊಳಿಸುವಂತೆ ಮಾಡುವಲ್ಲಿ ಪರ್ಯಾವಸಾನವಾಗುತ್ತದೆ.

ಸಂವಿಧಾನದಲ್ಲಿ ಖಾತರಿಪಡಿಸಲಾಗಿರುವ ಮಹಿಳೆಯರ ಹಕ್ಕುಗಳನ್ನು ರಕ್ಷಿಸಲು ಮತ್ತು ಮಹಿಳೆಯರ ಮೇಲಿನ ದೌರ್ಜನ್ಯಗಳ ವಿರುದ್ಧದ ಕಾನೂನುಗಳ ಅನುಷ್ಠಾನಕ್ಕೆ ಹೋರಾಟವನ್ನು ಹೊಸ ಹುರುಪಿನಿಂದ ನಡೆಸಬೇಕಿದೆ. ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಇದನ್ನು ತಾವು ನಡೆಸುತ್ತಿರುವ ಕಾರ್ಯಾಚರಣೆಯ ಒಂದು ಮುಖ್ಯ ಭಾಗವಾಗಿ ಮಾಡಬೇಕಿದೆ.

ಅನು: **ವಿಶ್ವ**

➘ ಭಾರತದ ಸಂವಿಧಾನದ ಆಧಾರವನ್ನಾಗಿ ಬಯಸಿದ ಶಕ್ತಿಗಳು ಈಗ ಅಧಿಕಾರದಲ್ಲಿವೆ. ಅಧಿಕಾರದಲ್ಲಿರುವವರು ಪ್ರಚಾರ ಮಾಡುತ್ತಿರುವ ಚಾಲ್ತಿಯಲ್ಲಿರುವ ಸಂಸ್ಕೃತಿಗಳು ಎಲ್ಲಿಯವರೆಗೆ ಇರುತ್ತವೆಯೋ, ಅಲ್ಲಿಯವರೆಗೆ ಭಾರತದ ಹೆಣ್ಣುಮಕ್ಕಳು ಸಂವಿಧಾನವು ಅವರಿಗಾಗಿ ಖಾತರಿಪಡಿಸಿದ – ಬದುಕುವ ಹಕ್ಕು – ಹಕ್ಕುಗಳನ್ನು ಚಲಾಯಿಸಲು ಮತ್ತು ಸಾಕಷ್ಟು ಹೋರಾಟದ ನಂತರ ಪಡೆದ ರಕ್ಷಣೆಯ ಕಾನೂನಿನ ಬಳಕೆ ಮಾಡಲು ಕಷ್ಟವಾಗುತ್ತದೆ. ತನ್ನ ಹೆತ್ತವರಿಂದ ಅನುಮೋದಿಸಲ್ಪಟ್ಟ ಸಂಬಂಧವೇ ಆಗಿರಲಿ ಅಥವಾ ಸ್ವಯಂ–ಆಯ್ಕೆಯ ಸಂಬಂಧವಾಗಲೀ – ಯಾವುದೇ ಮಹಿಳೆ ಸಂಬಂಧದೊಳಗೆ ಹಿಂಸೆಯನ್ನು ಎದುರಿಸಬೇಕಾಗಿಲ್ಲ. ಯುವತಿಯರಿಗೆ ಯಾವುದೇ ರೀತಿಯ ಸಂಬಂಧಗಳಿಂದ ದೂರ ಸರಿಯುವ ಶಕ್ತಿಯನ್ನು ನೀಡುವ ಸಮಾಜ ಮತ್ತು ಸಾಮಾಜಿಕ ಮೂಲಸೌಕರ್ಯವನ್ನು ನಾವು ನಿರ್ಮಿಸಬೇಕಾಗಿದೆ. ಇಂತಹ ಸಮಾಜವನ್ನು ನಿರ್ಮಿಸಿದ್ದರೆ ಇಂದು ಶ್ರದ್ಧಾ ನಮ್ಮೊಂದಿಗೆ ಇರುತ್ತಿದ್ದರು.

ಕ್ರಾಂತಿಕಾರಿಘಟ್ಟದಿಂದ ಪ್ರತ್ಯೇಕತಾವಾದದ ಪ್ರವಾದಿಯಘಟ್ಟದತ್ತ...........

ಪುಟ 2 ರಿಂದ

ಸಮಯದಲ್ಲಿ ಅದು ಸ್ಪಷ್ಟರೂಪ ಪಡೆದುಕೊಂಡಿತು. ಸಾವರ್ಕರ್‌ಅವರು ಸ್ವತಃ ಒಂದು ಕ್ಷಮಾಯಾಚನೆಯ ಅರ್ಜಿಯನ್ನು (ಆ ಅರ್ಜಿಯ ಪೂರ್ಣ ಪಠ್ಯ ಅಧ್ಯಾಯ 3 ರಲ್ಲಿ ಲಭ್ಯವಿದೆ) ನವಂಬರ್ 14, 1913 ರಂದು ಸರ್ ರೆಜಿನಾಲ್ಡ್ ಅವರಿಗೆ ಸಲ್ಲಿಸಿದರು. ಭಾರತವನ್ನು ಆಳುವ ಬ್ರಿಟಿಷ್ ಪ್ರಭುಗಳ ಕೊಳಕು ತಂತ್ರಕ್ಕೆ ಅವರು ಬಲಿಯಾಗಿರುವುದರ ಯಥಾವತ್ತಾದ ಸಾಕ್ಷ್ಯವನ್ನು ಆ ಅರ್ಜಿಯ ಕೊನೆಯ ಭಾಗದಲ್ಲಿ ನೋಡಬಹುದು. ಅದು ಹೀಗಿದೆ:

ಬ್ರಿಟಿಷ್ ಸರ್ಕಾರ ಇಷ್ಟಪಡುವ ಯಾವುದೇ ಸ್ಥಾನದಲ್ಲಿ ಸೇವೆ ಮಾಡಲು ನಾನು ಸಿದ್ಧನಾಗಿದ್ದೇನೆ, ಆ ಉದ್ದೇಶಕ್ಕಾಗಿ ಶುದ್ಧಾಂತಃಕರಣದಿಂದ ನನ್ನ ಪರಿವರ್ತನೆಯಾಗಿದೆ. ಆ ನಿಟ್ಟಿನಲ್ಲಿ ನನ್ನ ಮುಂದಿನ ನಡವಳಿಕೆಗಳೂ ಇರುತ್ತವೆ ಎಂಬ ವಿಶ್ವಾಸವಿದೆ. ಬಲಿಷ್ಠರು ಮಾತ್ರವೇ ಕರುಣಾಮಯಿಗಳಾಗಲು ಸಮರ್ಥರಿರುತ್ತಾರೆ. ಆದ್ದರಿಂದ ದುರ್ಮಾರ್ಗದಿಂದ ಸನ್ಮಾರ್ಗಕ್ಕೆ ಹಿಂದಿರುಗುವ ಮಗನು ಸರ್ಕಾರವೆಂಬ ಪೋಷಕರ ಬಾಗಿಲಿಗಲ್ಲದೆ ಬೇರೆಲ್ಲಿ ಹೋಗುತ್ತಾನೆ.

ವಿಷಾದವೆಂದರೆ, ಸಂಕುಚಿತ ಮನೋಭಾವದ ಕೋಮುವಾದಿ ಹಾದಿಯತ್ತ ಸಾಗುವ ಮೂಲಕ ಮತ್ತು ವಸಾಹತುಶಾಹಿ–ವಿರೋಧಿ ಹೋರಾಟದಿಂದ ದೂರ ಉಳಿಯುವ ಮೂಲಕ ಬ್ರಿಟಿಷರಿಗೆ ನಿಷ್ಠೆ ತೋರುವ ಈ ಪ್ರತಿಜ್ಞೆ ಮಾಡುವುದು ಸ್ವಲ್ಪ ಹೆಚ್ಚು ಗಂಭೀರವಾದ ಸಂಗತಿ. ರಾಜಕೀಯ ಖೈದಿಗಳ ಸಂಕಲ್ಪವನ್ನು ಭಂಗಗೊಳಿಸುವ ಸಲುವಾಗಿಯೇ ಅಂಡಮಾನಿಗೆ ಗಡೀಪಾರು ಮಾಡುವ ಬ್ರಿಟಿಷರ ಉದ್ದೇಶವಾಗಿತ್ತು, ಸಾವರ್ಕರ್‌ರದ್ದು ಆ ನೀತಿಯ ದುರಂತ ಯಶೋಗಾಥೆಯ ಭಾಗವಾಗಿದೆ.

(ಮುಂದುವರೆಯುವುದು)

ಬೆಟ್ಟದಷ್ಟು ಬವಣೆಗಳು
ಬದಲಾಗುತ್ತಿರುವ ಕೃಷಿ ಕಾರ್ಮಿಕರ ಸ್ಥಿತಿಗತಿ

ನಿತ್ಯಾನಂದಸ್ವಾಮಿ

ತಮ್ಮ ಶ್ರಮಶಕ್ತಿಯನ್ನು ಮುಖ್ಯವಾಗಿ ಭೂಮಾಲಕರಿಗೆ ಮಾರಾಟ ಮಾಡಿ ಬದುಕುವವರು ಕೃಷಿ ಕಾರ್ಮಿಕರು. ಕೃಷಿ ಕಾರ್ಮಿಕರಿಲ್ಲದೆ ಕೃಷಿ ಸರಕುಗಳ ಉತ್ಪಾದನೆ ಸಾಧ್ಯವಿಲ್ಲ. ಕೃಷಿ ಕಾರ್ಮಿಕರೆಂದರೆ ಗ್ರಾಮೀಣ ಪ್ರದೇಶದಲ್ಲಿ ತುಳಿತಕ್ಕೆ ಒಳಗಾದ ಜನ ಸಮುದಾಯ. ಎಲ್ಲಾ ಉತ್ಪಾದನಾ ಸಾಧನಗಳಿಂದ ಅವರು ವಂಚಿತರು. ಅವರಿಗೆ ಸ್ವಂತ ಭೂಮಿ ಇರುವುದಿಲ್ಲ. ಭೂಮಾಲೀಕರು ಕೊಟ್ಟಷ್ಟೆ ವೇತನ ಪಡೆದು ಜೀವಿಸಲು ಅವರು ನಿರ್ಭಂಧಿತರು. ಅವರ ಬಳಿ ಮಾರಾಟ ಮಾಡಲು ತಮ್ಮ ಶ್ರಮಶಕ್ತಿಯಲ್ಲದೆ ಬೇರೇನೂ ಇರುವುದಿಲ್ಲ. ಅವರು ತಮ್ಮ ಶ್ರಮಶಕ್ತಿಯ ಮೌಲ್ಯವನ್ನು ನಿಗಧಿಪಡಿಸಲಾರರು. ಸರ್ಕಾರಗಳು ನಿಗಧಿಪಡಿಸುವ ಕನಿಷ್ಠ ವೇತನವನ್ನು ಸಹ ಪಡೆಯುವ ಹಕ್ಕಿನಿಂದ ಅವರು ವಂಚಿತರು. ಮಾಲೀಕರು ನಿಗದಿಪಡಿಸುವ ಕೂಲಿಗೆ ಅವರು ದುಡಿಯುತ್ತಿರುತ್ತಾರೆ.

ಕೃಷಿಕಾರ್ಮಿಕರು ಆರ್ಥಿಕವಾಗಿ ಮಾತ್ರವಲ್ಲ ಸಾಮಾಜಿಕವಾಗಿಯೂ ಶೋಷಣೆಗೆ ಒಳಪಟ್ಟವರು. ಅವರು ಸಮಾಜದ ಅಂಚಿನಲ್ಲಿ ಇರುವವರು. ಕೃಷಿಕಾರ್ಮಿಕರು ಬಹುತೇಕವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದವರಾಗಿರುತ್ತಾರೆ. ಅವರು ಹಲವಾರು ವಿಧದ ಸಾಮಾಜಿಕ ದೌರ್ಜನ್ಯಗಳಿಗೆ ಒಳಪಟ್ಟವರಾಗಿರುತ್ತಾರೆ. ಅವರು ಮನುವಾದ ಪ್ರತಿಪಾದಿಸುವ ಸಮಾಜ ವ್ಯವಸ್ಥೆಗೆ ಬಲಿಪಶುಗಳು. ಅವರನ್ನು ಸಮಾಜದ ಇತರರೊಂದಿಗೆ ಸಮಾನರಾಗಿ ಕಾಣಲಾಗುತ್ತಿರುವುದಿಲ್ಲ. ಅವರನ್ನು ಪಶುಗಳಿಗಿಂತ ಕೀಳಾಗಿ ಕಾಣಲಾಗುತ್ತಿರುತ್ತಾರೆ. ಶತಮಾನಗಳಿಂದ ಆಚರಣೆಯಲ್ಲಿರುವ ಎಲ್ಲ ವಿಧದ ಸಾಮಾಜಿಕ ತಾರತಮ್ಯವನ್ನು ಅನುಭವಿಸುತ್ತಿರುವವರು ಆಗಿರುತ್ತಾರೆ.

ಅವರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯಿಂದಾಗಿ ಅವರು ತೀರಾ ಕೆಳಮಟ್ಟದ ಪ್ರಜ್ಞೆಯನ್ನು ಹೊಂದಿದವರಾಗಿತ್ತಾರೆ. ಆರಂಭದ ದಿನಗಳಲ್ಲಿ ಅವರು ಬಹುತೇಕವಾಗಿ ಕೆಳಮಟ್ಟದ ಪ್ರಜ್ಞೆ ಹೊಂದಿದವರಾಗಿದ್ದರು. ಈಗ ಅವರ ಮಕ್ಕಳು ಸಹ ಅವಕಾಶ ವಂಚಿತರಾಗಿಯೇ ಬೆಳೆಯುತ್ತಿದ್ದಾರೆ. ಅವರಿಗೆ ಗುಣಮಟ್ಟದ ಶಿಕ್ಷಣ ಕೈಗೆಟುಕುವುದಿಲ್ಲ. ಇದಕ್ಕೂ ಅವರ ಕೆಳಮಟ್ಟದ ಪ್ರಜ್ಞೆ ಒಂದು ಕಾರಣವಾಗಿದೆ. ಇದರ ಪರಿಣಾಮವಾಗಿ ಅವರಲ್ಲಿ ಪ್ರಗತಿಪರ ಪ್ರಜ್ಞೆ ಬೆಳೆಯುವುದಿಲ್ಲ. ಅವರ ಮನಸ್ಸುಗಳು ಕ್ರಾಂತಿಕಾರಿ ಚಿಂತನೆಗೆ ತೆರೆದುಕೊಳ್ಳುವುದಿಲ್ಲ. ಬದಲಾಗಿ ಅವರಲ್ಲಿ ಪ್ರತಿಗಾಮಿ, ಪಾಳೆಗಾರಿ ಅಭಿಪ್ರಾಯಗಳೇ ಬೆಳೆದುಬರುತ್ತಿವೆ.

ಬದಲಾಗುತ್ತಿರುವ ಕೃಷಿ ಕೂಲಿಕಾರರ ಪರಿಸ್ಥಿತಿ

ನಮ್ಮನ್ನು ಆಳುತ್ತಿರುವ ಬಿಜೆಪಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ದಿವಾಳಿಕೋರ ನೀತಿಗಳಿಂದಾಗಿ ಕೃಷಿ ಬಿಕ್ಕಟ್ಟು, ದಿವಾಳಿಕೋರತನಕ್ಕೆ ದೇಶವನ್ನು ತಳ್ಳುತ್ತಿದೆ. ದೇಶಕ್ಕೆ ಅನ್ನ ಬೆಳೆದು ಕೊಡುವುದರಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಾ ಬಂದಿರುವ ರೈತರು ಆತ್ಮಹತ್ಯೆಯಲ್ಲಿ ಪರಿಹಾರ ಕಂಡುಕೊಳ್ಳುತ್ತಿದ್ದಾರೆ. ಅಲ್ಪಸ್ವಲ್ಪ ಭೂಮಿ ಇದ್ದವರು ಭೂಮಿಯನ್ನು ಕಳೆದುಕೊಂಡು ನಿರ್ಗತಿಕರಾಗುತ್ತಿದ್ದಾರೆ. ದಾರಿ ಕಾಣದಾದ ಕೃಷಿ ಕಾರ್ಮಿಕರು ಕುಟುಂಬ ಸಮೇತರಾಗಿ ವಲಸೆ ಹೋಗುತ್ತಿರುತ್ತಾರೆ. ದೊಡ್ಡ ಸಂಖ್ಯೆಯಲ್ಲಿ ಕೃಷಿ ಕಾರ್ಮಿಕರು ಸಹ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ.

ವರ್ಷ	ಆತ್ಮಹತ್ಯೆ ಮಾಡಿಕೊಂಡ ಕೂಲಿಕಾರರು
2019	4,324
2020	5098
2021	5518

ಇವರಲ್ಲಿ ಹೊಟ್ಟೆಪಾಡಿಗಾಗಿ ವಲಸೆ ಹೋಗುವುದು ಗಣನೀಯವಾಗಿ ಹೆಚ್ಚುತ್ತಿದೆ. ಕೆಲವು ರಾಜ್ಯಗಳಲ್ಲಿ ರೈತರಿಗಿಂತ ಕೃಷಿ ಕಾರ್ಮಿಕರೇ ಹೆಚ್ಚು ಆತ್ಮಹತ್ಯೆ ಮಾಡಿಕೊಂಡಿರುವುದು ಕಂಡುಬರುತ್ತದೆ.

ಕೃಷಿ ಕೂಲಿಕಾರರ ಸಾವುಗಳನ್ನು ಮಾಧ್ಯಮಗಳು ಗಂಭೀರವಾಗಿ ಪರಿಗಣಿಸುವುದಿಲ್ಲ. ಅಗತ್ಯ ಪ್ರಚಾರ ನೀಡುವುದಿಲ್ಲ.

ದೇಶದ ಇತರ ರಾಜ್ಯಗಳಂತೆ ಕರ್ನಾಟಕದಲ್ಲಿ ಕೃಷಿ ಬಿಕ್ಕಟ್ಟಿಗೆ ಒಳಗಾಗಿರುವ ಸಣ್ಣ ರೈತರು ಮತ್ತು ಅತಿ ಸಣ್ಣ ರೈತರು ತಮ್ಮ ಸ್ವಾಧೀನದಲ್ಲಿದ್ದ ಅಲ್ಪಸ್ವಲ್ಪ ಭೂಮಿಯನ್ನು ಕಳೆದುಕೊಂಡು




ನಿರ್ಗತಿಕರಾಗುತ್ತಿದ್ದಾರೆ ಮತ್ತು ಹೊಟ್ಟೆ ಪಾಡಿಗಾಗಿ ಕೂಲಿಕಾರರಾಗುತ್ತಿದ್ದಾರೆ. ಇದರಿಂದಾಗಿ ಕೂಲಿಕಾರರ ಸಂಖ್ಯೆ ಬೆಳೆಯುತ್ತದೆ ಮತ್ತು ಅವರ ನಡುವೆ ಅಹಿತಕರ ಸ್ಪರ್ಧೆಯನ್ನು ಉಂಟುಮಾಡುತ್ತದೆ. ಕರ್ನಾಟಕದಲ್ಲಿ ಹಿಡುವಳಿದಾರ ರೈತರಿಗಿಂತ ಹಿಡುವಳಿರಹಿತ ಕೂಲಿಕಾರರ ಸಂಖ್ಯೆ ಹೆಚ್ಚಾಗುತ್ತಿರುವ ಆಘಾತಕಾರಿ ಬೆಳವಣಿಗೆ ಬಯಲಾಗಿದೆ. 2001 ರಲ್ಲಿದ್ದ 69 ಲಕ್ಷ ಹಿಡುವಳಿದಾರರ ಸಂಖ್ಯೆ 2011 ರಲ್ಲಿ 66 ಲಕ್ಷಕ್ಕೆ ಇಳಿದಿದೆ. ಆದರೆ 2001ರಲ್ಲಿ 62 ಲಕ್ಷದಷ್ಟಿದ್ದ ಕೃಷಿ ಕೂಲಿಕಾರರ ಸಂಖ್ಯೆ 2011 ರಲ್ಲಿ 72 ಲಕ್ಷಕ್ಕೆ ಏರಿದೆ. ನಂತರದ ಅಂಕಿ–ಅಂಶಗಳು ಲಭ್ಯವಿಲ್ಲ. 2021 ರ ಗಣತಿಯಲ್ಲಿ ಈ ಅಂಕಿ–ಅಂಶಗಳು ಬದಲಾಗಿ ಕೃಷಿ ಕೂಲಿಕಾರರ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿರುತ್ತವೆ ಎಂದು ಗಮನಿಸಬಹುದಾಗಿದೆ.

ಕೃಷಿಕೂಲಿಕಾರರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಏರುತ್ತಾ ಹೋಗುತ್ತಿರುವುದರಿಂದಲೂ, ರೈತರು ಗಣನೀಯ ಸಂಖ್ಯೆಯಲ್ಲಿ ಕೃಷಿ ವಲಯವನ್ನು ತೊರೆಯುತ್ತಿರುವುದರಿಂದಲೂ, ಹಾಗೂ ಅಳಿದುಳಿದ ಕೃಷಿ ರಂಗದಲ್ಲಿ ನಾಟಿ ಮಾಡುವುದು, ಕಳೆ ಕೀಳುವುದು, ಕಟ್ಟಾವು ಮಾಡುವುದು ಮೊದಲಾದ ಕೆಲಸಗಳಿಗೆ ಯಾಂತ್ರೀಕರಣ ಹೆಚ್ಚಾಗುತ್ತಿರುವುದರಿಂದಲೂ ಕೃಷಿ ಕೂಲಿಕಾರರಿಗೆ ಮೊದಲಿನಂತೆ ಕೃಷಿ ಕ್ಷೇತ್ರದಲ್ಲಿ ಕೆಲಸ ದೊರೆಯದಂತಾಗಿದೆ. ಕಳೆದ ಕೆಲವು ವರ್ಷಗಳಿಂದ ರಾಜ್ಯವು ಸತತವಾಗಿ ಬರಗಾಲಕ್ಕೆ ತುತ್ತಾಗುತ್ತಿರುವುದರಿಂದ ಕೃಷಿ ಕೂಲಿಕಾರರಿಗೆ ಕೃಷಿಯಲ್ಲಿ ಋತು ಆಧಾರಿತ ಕೆಲಸವೂ ಸಿಗದಂತಾಗಿದೆ. ಮಳೆಯ ಅಭಾವದಿಂದ ಅಣೆಕಟ್ಟುಗಳಲ್ಲಿ ಪೂರ್ಣ ಪ್ರಮಾಣದಲ್ಲಿ ನೀರು ಸಂಗ್ರಹವಾಗಿದಿರುವುದರಿಂದ ನೀರಾವರಿ ಕುಂಠಿತಗೊಂಡು ನೀರಾವರಿ ಪ್ರದೇಶದಲ್ಲಿಯೂ ಕೂಲಿಯವರಿಗೆ ಕೆಲಸ ಸಿಗದಂತಾಗಿದೆ. ಹಿಂದಿನ ವರ್ಷ ಕರ್ನಾಟಕವು ಭೀಕರ ಅತಿವೃಷ್ಟಿಗೆ ತುತ್ತಾಗಿ ರೈತರು ತಮ್ಮ ಭೂಮಿಯನ್ನು, ಬೆಳೆದ ಫಸಲನ್ನು ಕಳೆದುಕೊಂಡರು. ಕೂಲಿಕಾರರ ಮನೆಗಳು, ಸಾಕಿದ ಜಾನುವಾರಗಳು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋದವು. ಇತ್ತ ಸರ್ಕಾರ ಸಂತ್ರಸ್ತರಿಗೆ ಪೂರ್ಣಪ್ರಮಾಣದ ಪುನರ್ವಸತಿಯನ್ನು ಒದಗಿಸಲಿಲ್ಲ. ಅತ್ತ ಕೂಲಿಕಾರ ಸಮೂಹಕ್ಕೆ ಪರ್ಯಾಯ ಉದ್ಯೋಗವನ್ನೂ ಒದಗಿಸಲಿಲ್ಲ.

ಹೀಗೆ ರಾಜ್ಯದ ಕೃಷಿ ಕೂಲಿಕಾರರು ಗಂಭೀರ ಪರಿಸ್ಥಿತಿಯನ್ನು ಎದುರಿಸುವಂತಾಗಿದೆ. ಇಷ್ಟು ಕಾಲದಿಂದ ತಮ್ಮ ಕುಟುಂಬಗಳ ನಿರ್ವಹಣೆಗೆ ಅವರು ನಂಬಿದ್ದ ಕೃಷಿ ಕ್ಷೇತ್ರ ಇಂದು ಅವರನ್ನು ಕೈಹಿಡಿಯುವ ಸಾಧ್ಯತೆ ಕ್ಷೀಣಿಸಿದೆ. ಈಗ ಅವರು ಬೇರೆ ವೃತ್ತಿಯನ್ನು ಅರಸಿ ಅಲೆಯುವ ಪರಿಸ್ಥಿತಿ ಉಂಟಾಗಿದೆ. ಇಟ್ಟಿಗೆ ತಯಾರಿಸುವುದು, ಕಟ್ಟಡ ನಿರ್ಮಾಣ, ರಸ್ತೆ ನಿರ್ಮಾಣ, ಹಮಾಲಿ ಕೆಲಸ, ಸಣ್ಣ ಪ್ರಮಾಣದ ವ್ಯಾಪಾರ ಮುಂತಾದ ಕೃಷಿಯೇತರ ವೃತ್ತಿಗಳಲ್ಲಿ ತೊಡಗುವುದು ಅವರಿಗೆ ಅನಿವಾರ್ಯವಾಗುತ್ತದೆ. ಇವು ಕಾಯಂ ಸ್ವರೂಪದ ಕೆಲಸಗಳಲ್ಲ. ಇಂದು ಕೆಲಸ ಸಿಗಬಹುದು. ನಾಳೆ ಅದೇ ಕೆಲಸ ಸಿಗದಿರಬಹುದು. ಹಾಗಾಗಿ ಅವರಿಗೆ





ನಿಶ್ಚಿತ ಕೆಲಸವೂ ಇಲ್ಲ; ನಿಶ್ಚಿತ ಆದಾಯವೂ ಇಲ್ಲ. ಕೃಷಿ ಕೂಲಿಕಾರರೆಂಬ ಆಸ್ಮಿತೆಯನ್ನು ಅವರು ಕಳೆದಕೊಂಡು ಗ್ರಾಮೀಣ ಕೆಲಸಗಾರರು ಎಂದು ಕರೆಯಲ್ಪಡುವಂತಾಗಿದೆ.

ಕೃಷಿ ವಲಯದಿಂದ ಹೊರದಬ್ಬಲ್ಪಟ್ಟ ಗ್ರಾಮೀಣ ಕೆಲಸಗಾರರು ಉದ್ಯೋಗಕ್ಕಾಗಿ ಅಲೆದಾಡುವುದನ್ನು ತಪ್ಪಿಸಲು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಎಂಬ ಕಾಯ್ದೆ ಜಾರಿಗೆ ಬಂದು ಈಗಾಗಲೇ 15 ವರ್ಷಗಳಾಗುತ್ತಿವೆ. ಆದರೆ ಎಲ್ಲಾ ಗ್ರಾಮಗಳಿಗೆ ಈ ಯೋಜನೆಯ ವಿಸ್ತರಣೆ ಆಗಿಲ್ಲ. ಯೋಜನೆ ಜಾರಿಯಾಗಿರುವ ಗ್ರಾಮಗಳಲ್ಲಿಯೂ ಅದರ ಪ್ರಯೋಜನ ದೊರೆಯುತ್ತಿಲ್ಲ. ಅರ್ಜಿಸಲ್ಲಿಸಿದವರಿಗೆ ಕೆಲಸ ನೀಡುವಲ್ಲಿ ವಿಳಂಬ, ಕೆಲಸ ಮಾಡಿದವರ ಕೂಲಿ ಹಣ ಅವರವರ ಬ್ಯಾಂಕ್ ಖಾತೆಗಳಿಗೆ ಸಕಾಲದಲ್ಲಿ, ಸರಿಯಾಗಿ ಜಮಾ ಆಗದಿರುವುದು, ಕೆಲಸ ಒದಗಿಸಲಾಗದ ದಿನಗಳಿಗೆ ನಿರುದ್ಯೋಗ ಭತ್ಯೆಯನ್ನು ಪಾವತಿಸದಿರುವುದು, ಕೂಲಿ ದರಗಳನ್ನು ಹೆಚ್ಚಿಸಿ ಆಕರ್ಷಕಗೊಳಿಸದಿರುವುದು, ಅಸಂಘಟಿತ ಕಾರ್ಮಿಕರಿಗೆ ಅನ್ವಯಿಸುವ ಪಿ.ಎಫ್, ಇ.ಎಸ್.ಐ. ಮುಂತಾದ ಸೌಲಭ್ಯಗಳನ್ನು ವಿಸ್ತರಿಸದಿರುವುದು ಮೊದಲಾದ ವೈಫಲ್ಯಗಳಿಂದಾಗಿ ಗ್ರಾಮೀಣ ಕೆಲಸಗಾರರು ಯೋಜನೆಯ ಬಗ್ಗೆ ಆಸಕ್ತಿಯನ್ನೇ ಕಳೆದು ಕೊಳ್ಳುತ್ತಿದ್ದಾರೆ.

ಹೀಗೆ ಕೃಷಿ ಕಾರ್ಮಿಕರು ಕೇವಲ ಕೃಷಿ ಕಾರ್ಮಿಕರಾಗಿ ಉಳಿಯದೆ ಗ್ರಾಮೀಣ ಕೆಲಸಗಾರರಾಗಿ ಪರಿವರ್ತನೆಯಾಗುತ್ತಾರೆ. ಅವರನ್ನು ಗ್ರಾಮೀಣ ಕೆಲಸಗಾರರೆಂದು ಕರೆಯಬಹುದಾದ ಪರಿಸ್ಥಿತಿ ಉಂಟಾಗುತ್ತದೆ.

ಗ್ರಾಮಗಳಲ್ಲಿ ಮತ್ತು ನಗರಗಳಲ್ಲಿ ಯಾವ ಕೆಲಸ ಸಿಗುವುದೋ ಆ ಕೆಲಸ ಮಾಡಬೇಕಾಯಿತು. ಕೊಟ್ಟಷ್ಟೇ ಕೂಲಿಗೆ ದುಡಿಯಬೇಕಾಯಿತು. ಪಟ್ಟಣ ಪ್ರದೇಶಗಳಲ್ಲಿ ಸಿಕ್ಕಂತಹ ಕೆಲಸಕ್ಕೆ ತೃಪ್ತಿ ಪಡಬೇಕಾಯಿತು. ಹೀಗೆ ಕೃಷಿ ಕೂಲಿಕಾರರು ಕೆಲಸ ಸಿಕ್ಕರೆ ಮಾತ್ರ ಕೆಲಸ ಮಾಡಿಕೊಂಡಿರಬೇಕಾಯಿತು. ಹೆಚ್ಚಾಗಿ ಕಟ್ಟಡ ನಿರ್ಮಾಣ, ರಸ್ತೆ ನಿರ್ಮಾಣದಂತಹ ಕೆಲಸವನ್ನು ಅವಲಂಭಿಸಬೇಕಾಯಿತು. ಹೀಗಾಗಿ ಅವರು ಕೃಷಿ ಕೂಲಿಕೂಲಿಕಾರರಾಗಿ ಉಳಿಯದೆ ಗ್ರಾಮೀಣ ಕೆಲಸಗರರಾಗಿ ಮಾರ್ಪಡುವಂತಾಯಿತು. ಇಂತಹ ಕೆಲಸಗಾರರು ಗುತ್ತಿಗೆದಾರರ, ಸ್ವಾಧೀನ ಸಿಕ್ಕಂತಹ ಕೆಲಸ ಮಾಡಿಕೊಂಡು ಜೀವನ ನಡೆಸಬೇಕಾಯಿತು. ಇವರನ್ನು ಸಂಘಟಿಸಿ ಅವರ ಕಾನೂನುಬದ್ಧ ಹಕ್ಕುಗಳಿಗಾಗಿ ಹೋರಾಡುವುದು ಅನಿವಾರ್ಯ ವಾಗಿದೆ.

ಮೀಸಲಾತಿ ಅಸ್ತಿತ್ವಕ್ಕೆ ಒದಗಿರುವ ಅಪಾಯ ಒಗ್ಗಟ್ಟಿನಿಂದ ಎದುರಿಸಬೇಕು – ಬಿ.ವಿ. ರಾಘವಲು



ಆರ್ಥಿಕ ಹಿಂದುಳಿದ ವಿಭಾಗಗಳಿಗೆ ಶೇ.10 ಮೀಸಲಾತಿ ನೀಡಿಕೆಯ ಕುರಿತು ಸುಪ್ರೀಂಕೋರ್ಟಿನ ತೀರ್ಪಿನ ಹಿನ್ನೆಲೆಯಲ್ಲಿ ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯರಾದ ಸಂಗಾತಿ ಬಿ.ವಿ.ರಾಘವಲು ರವರ ಸಂದರ್ಶನ. ಮಾರ್ಕ್ಸ್‌ವಾದಿ ಚಿಂತಕರಾದ ರಾಘವಲು ರವರು ದಲಿತ, ಆದಿವಾಸಿ ಸಮುದಾಯಗಳ ವಿಶೇಷವಾಗಿ ಸಾಮಾಜಿಕ ಪ್ರಶ್ನೆಗಳ ವಿಷಯದಲ್ಲಿ ಅನುಭವಿಗಳು.

ಸಂದರ್ಶಿಸಿದವರು:

ಡಾ.ಎಸ್.ವೈ.ಗುರುಶಾಂತ್

ಪ್ರಶ್ನೆ: ಆರ್ಥಿಕ ದುರ್ಬಲ ವಿಭಾಗಗಳಿಗೆ 10 ಮೀಸಲಾತಿ ನೀಡುವುದರ ಕುರಿತಾದಂತೆ ಸುಪ್ರೀಂಕೋರ್ಟ್ ನೀಡಿದ ತೀರ್ಪಿನ ಕುರಿತು ತಮ್ಮ ಮೊದಲ ಪ್ರತಿಕ್ರಿಯೆ ಏನು?

ಬಿ.ವಿ.ರಾಘವಲು: ಆರ್ಥಿಕ ದುರ್ಬಲ ವಿಭಾಗಗಳಿಗೆ ಶೇ.10 ಮೀಸಲಾತಿ ಕೊಡಬೇಕು ಎಂಬುದನ್ನು ಸುಪ್ರೀಂ ಕೋರ್ಟ್ ಮಾನ್ಯತೆ ಮಾಡಿದ ತೀರ್ಪು ವಿಘಟಿತ ತೀರ್ಪಾಗಿದೆ. ಮೂವರು ನ್ಯಾಯಮೂರ್ತಿಗಳ ಬಹುಮತದ ತೀರ್ಪು ಸರ್ಕಾರದ ನಿರ್ಧಾರ ಸಂವಿಧಾನಾತ್ಮಕ ರೀತ್ಯಾ ಇದೆ ಎಂದು ಒಪ್ಪಿದ್ದರೆ, ಇಬ್ಬರು ನ್ಯಾಯಮೂರ್ತಿಗಳ ಅಲ್ಪ ಮತದ ತೀರ್ಪು ಭಿನ್ನಮತ ವ್ಯಕ್ತ ಪಡಿಸಿದೆ. ಈಗಿರುವ ಶೇ.50 ಮೀಸಲಾತಿ ಪ್ರಮಾಣವನ್ನು ಮೀರಬಾರದು ಎನ್ನುವ ನಿರ್ಬಂಧವನ್ನು ಮೀರುತ್ತದೆ ಎಂಬುದು ಅವರ ಅಭಿಪ್ರಾಯ.

ಈ ಕುರಿತಂತೆ ಹಲವು ವಾದಗಳು ಇದ್ದವು. 'ಆರ್ಥಿಕ ಹಿಂದುಳಿದಿರುವಿಕೆಯನ್ನು ಆಧರಿಸಿ ಮೀಸಲಾತಿ ನೀಡುವುದು ತರ್ಕ ಬದ್ಧವಲ್ಲ. ಏಕೆಂದರೆ, ಮೀಸಲಾತಿ ಸಾಮಾಜಿಕ ಹಿಂದುಳಿದಿರುವಿಕೆಯನ್ನೇ ಆಧರಿಸಿರಬೇಕು. ಸಾಮಾಜಿಕ ಮಾನದಂಡವನ್ನು ಅನುಸರಿಸ ಬೇಕೇ ಹೊರತು ಆರ್ಥಿಕ ಮಾನದಂಡವಲ್ಲ' ಎಂಬುದು ಇದು ಒಂದು ರೀತಿಯ ವಾದ. ಬುದ್ದಿಜೀವಿಗಳ ಒಂದು ವಿಭಾಗದಲ್ಲಿಯೂ ಇಂತಹ ವಾದ ಇದೆ. ಅದನ್ನೇ ಸುಪ್ರೀಂ ಕೋರ್ಟ್ ನ ಮುಂದೆ ಮಂಡಿಸಲಾಗಿತ್ತು. ಇದನ್ನು ಆಲಿಸಿದ ಸುಪ್ರೀಂ ಕೋರ್ಟ್ 'ಮೀಸಲಾತಿಗೆ ಕೇವಲ ಸಾಮಾಜಿಕ ಅಂಶ ಮಾತ್ರವೇ ಅಲ್ಲ, ಶೈಕ್ಷಣಿಕ, ಆರ್ಥಿಕ ಮತ್ತಿತರೆ ಹಿಂದುಳಿದಿರುವಿಕೆಯನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಇದು ಸಂವಿಧಾನದ ಮೂಲಭೂತ ತತ್ವಗಳಿಗೆ ವಿರುದ್ಧವಲ್ಲ, ಅದು ಸಂವಿಧಾನದ ಪರಿ ವ್ಯಾಪ್ತಿಯಲ್ಲಿ ಬರುತ್ತದೆ' ಎಂದು ಹೇಳಿದೆ. ಇದು ಮತ್ತೊಂದು ರೀತಿಯ ವ್ಯಾಖ್ಯಾನ.

ಸಿ.ಪಿ.ಐ(ಎಂ) ಪಕ್ಷದ ಅಭಿಪ್ರಾಯ ಏನು?

ಬಿ.ವಿ.ಆರ್: ಸಿಪಿಐ(ಎಂ)ನ ಅಭಿಪ್ರಾಯದಲ್ಲಿ ಸಾಮಾಜಿಕವಾಗಿ ಹಿಂದುಳಿದವರಿಗೆ ನ್ಯಾಯ ದೊರೆಯಲು ಸಾಮಾಜಿಕ ತಾರತಮ್ಯದ ಅಂಶಗಳನ್ನು ಮೀಸಲಾತಿಗೆ ಆಧಾರವಾಗಿ ಇರಿಸಿಕೊಳ್ಳಬೇಕು ಎನ್ನುವುದು ಖಂಡಿತಕ್ಕೂ ಸರಿ. ಆದರೆ ಅದೇ ಹೊತ್ತಿನಲ್ಲಿ ಶೈಕ್ಷಣಿಕ, ಆರ್ಥಿಕ, ಮುಂತಾದ ಹಿಂದುಳಿದಿರುವಿಕೆಯನ್ನು ಸಹ ಪರಿಗಣಿಸುವುದನ್ನು ನಿರ್ಲಕ್ಷಿಸಬಾರದು, ನಿರಾಕರಿಸಲಾಗದು. ಸಾಮಾಜಿಕ ತಾರತಮ್ಯದ ಅಂಶಕ್ಕೆ ಮೊದಲ ಪ್ರಾಧಾನ್ಯತೆಯನ್ನು ನೀಡಬೇಕು. ಆದರೆ ಶೈಕ್ಷಣಿಕ, ಆರ್ಥಿಕ, ಹಿಂದುಳಿದಿರುವಿಕೆಯನ್ನು ನಿರ್ಲಕ್ಷಿಸುವುದು ಅನೇಕ ವೈರುಧ್ಯಗಳಿಗೆ ಎಡೆ ಮಾಡಿಕೊಡುತ್ತದೆ. ಉದಾಹರಣೆಗೆ, ಶಿಕ್ಷಣ, ಉದ್ಯೋಗ ನೀಡಲು ಯಾಕೆ ಸಾಮಾಜಿಕ ತಾರತಮ್ಯದ ಅಂಶವನ್ನು ಆಧರಿಸಲಾಗುತ್ತಿದೆ? ಇದು ಅವರು ಸಾಮಾಜಿಕ ಹಿಂದುಳಿದಿರುವಿಕೆಯಿಂದ ಹೊರ ಬರಲು, ಸಬಲೀಕರಣಗೊಳ್ಳಲು ಅನುವಾಗುವಂತೆ ಮಾಡುತ್ತದೆ ಎಂದು ನಂಬಲಾಗಿದೆ. ಪರಿಣಾಮವೆಂದರೆ, ಆರ್ಥಿಕವಾಗಿ ಮುಂದುವರಿದವರು ಸಾಮಾಜಿಕ ತಾರತಮ್ಯವನ್ನು ಮೀರಬಹುದು ಎನ್ನುವುದಾಗಿದೆ. ಆರ್ಥಿಕವಾಗಿ ದುರ್ಬಲವಾಗಿದ್ದರೆ ಸಮಾಜದಲ್ಲಿ ಹಲವು ರೀತಿಯ ತರತಮಗಳನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ ಆರ್ಥಿಕವಾಗಿ ಸಬಲೀಕರಣ ಗೊಳ್ಳುವುದು ಯಾವುದೇ ವಿಭಾಗಗಳು ಸಮಾಜದಲ್ಲಿ ಮುನ್ನಡೆ ಸಾಧಿಸಲು ಅತ್ಯಗತ್ಯವಾಗಿದೆ. ಆದ್ದರಿಂದ ಆರ್ಥಿಕ ಅಂಶವನ್ನು ನಿರ್ಲಕ್ಷಿಸಬಾರದು.

ಮೀಸಲಾತಿ ಅಗತ್ಯವಾಗಿ ಬೇಕಿರುವ ದಮನಿತ ವರ್ಗಗಳ ಮತ್ತು ವಿಭಾಗಗಳ ಮೀಸಲಾತಿ ರಕ್ಷಣೆಗೆ ಎಲ್ಲರನ್ನೂ ಅಣಿ ನೆರೆಸಬೇಕು. ಇದು ಮೀಸಲಾತಿಯನ್ನು ಉಳಿಸಿಕೊಳ್ಳಲು ಅತ್ಯಗತ್ಯ ಕೂಡ.

ಎರಡನೆಯದು ತಾರತಮ್ಯ ಎನ್ನುವುದು ಹಲವು ರೀತಿಗಳಲ್ಲಿ ಇರುತ್ತದೆ. ವಿವಿಧ ದೇಶಗಳಲ್ಲಿ ಸಬಲೀಕರಣದ ವಿಧಾನಗಳು ಭಿನ್ನವಾಗಿವೆ.

ಇತರೆ ದೇಶಗಳಲ್ಲಿ ಮೀಸಲಾತಿ ನೀತಿ ಹೇಗಿದೆ?

ಮೀಸಲಾತಿ ಇತರೆ ಪ್ರಕಾರಗಳನ್ನು ಮೀಸಲಾತಿಯಲ್ಲಿ ಪಾಲಿಸಲಾಗುತ್ತದೆ. ಐರ್ಲೆಂಡ್, ನ್ಯೂಜಿಲೆಂಡ್ ನಲ್ಲಿ ಭಿನ್ನ ಇವೆ. ಮಲೇಶಿಯಾದಲ್ಲಿ ಬಹುಸಂಖ್ಯೆಯ ಇಲ್ಲಿರುವ ಮಲೇಶಿಯನ್ನರಿಗೆ ಮೀಸಲಾತಿ ಇದೆ. ಯಾಕೆಂದರೆ ಅಲ್ಲಿ ನೆಲೆಗೊಂಡಿರುವ ಚೀನಾ ಮತ್ತು ಇತರೆಯವರಿಗಿಂತ ಮಲೇಶಿಯನ್ನರು ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಿಂದುಳಿದಿದ್ದಾರೆ. ಹೀಗಾಗಿ ಅವರಿಗೆ ಮೀಸಲಾತಿ ಕಲ್ಪಿಸಲಾಗಿದೆ. ಅಮೆರಿಕದಲ್ಲಿ ಮೂಲ ನಿವಾಸಿಗಳು–ಇಂಡಿಯನ್ನರಿಗೆ ಸಬಲೀಕರಣಕ್ಕಾಗಿ ಒಂದು ರೀತಿಯ ಮೀಸಲಾತಿ ಅವಕಾಶಗಳು ಇವೆ. ಕೆಲವೆಡೆ ಪ್ರದೇಶಕ್ಕೆ ಅನುಗುಣವಾದ ಮೀಸಲಾತಿಯೂ ಇದೆ. ಅಲ್ಲಿ ಮಹಿಳೆಯರು, ವರ್ಣಭೇದಕ್ಕೆ ಈಡಾದವರಿಗೆ ಟಾರ್ಗೆಟೆಡ್ ಅವಕಾಶಗಳ ಸೃಷ್ಟಿ ಮಾಡಲಾಗುತ್ತದೆ. ಅಲ್ಲಿ ಕೋಟಾ ಪದ್ಧತಿ ಇಲ್ಲ. ಹೀಗೆ ವಿವಿಧ ರೀತಿಯಲ್ಲಿವೆ. ಆದ್ದರಿಂದ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ತಾರತಮ್ಯ ಅನುಭವಿಸುತ್ತಿರುವವರಿಗೆ ವಿವಿಧ ರೀತಿಯ ಮೀಸಲಾತಿ ನೀತಿ ಜಾರಿಯಲ್ಲಿವೆ.

ಭಾರತದಲ್ಲಿ ಮೀಸಲಾತಿಗೆ ಪರಿಗಣಿಸಲಾದ ಮಾನದಂಡಗಳೇನು?

ಭಾರತದಲ್ಲಿ ಮೀಸಲಾತಿಯ ಇತಿಹಾಸವನ್ನು ನೋಡಿದರೂ ಕೇವಲ ಸಾಮಾಜಿಕ ಅಂಶವನ್ನು ಮಾತ್ರ ಆಧರಿಸಿ ಮೀಸಲಾತಿ ನೀಡಿಲ್ಲ. ಇತರೆ ಮಾನದಂಡಗಳನ್ನು ಪರಿಗಣಿಸಿರುವುದನ್ನು ಕಾಣಬಹುದು.

ಮೊದಲು ಕ್ರಿ.ಶ. 1909ರಲ್ಲಿ ಮಿಂಟೋ ಮಾರ್ಲೆ ಸುಧಾರಣೆಗಳು ಬಂದಾಗ ಅಲ್ಲಿ ಧಾರ್ಮಿಕ ಮೀಸಲಾತಿಯನ್ನು ರಾಜಕೀಯ ಕ್ಷೇತ್ರದಲ್ಲಿ ಪರಿಚಯಿಸಲಾಯಿತು. ಕ್ರಿ.ಶ.1931–32 ರಲ್ಲಿ ಇದು ಬದಲಾಯಿತು. ರಾಜಕೀಯ ಪ್ರಾತಿನಿಧ್ಯದ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿಗಳಿಗೆ ಮೀಸಲಾತಿ ನೀಡಲಾಯಿತು. ಅದಕ್ಕೂ ಬಹಳ ಮೊದಲು ಸಾಹು ಮಹಾರಾಜ್ ರವರು ಮೀಸಲಾತಿ ನೀಡುವಾಗ ಕೇವಲ ಅಸ್ಪೃಶ್ಯತೆಯನ್ನು ಆಧರಿಸಿರಲಿಲ್ಲ. ಅವರು ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ಎಂದು ವಿಂಗಡಿಸಿದ್ದರು. ಬ್ರಾಹ್ಮಣೇತರರು ಒಂದು ಗುಂಪು ಅದರಲ್ಲಿ ಸ್ಪೃಶ್ಯರು, ಅಸ್ಪೃಶ್ಯರು, ಹಣವಂತರೂ ಇದ್ದರು. ಕ್ರಿ.ಶ.1921 ರಲ್ಲಿ ಮದ್ರಾಸ್ ಪ್ರಾಂತ್ಯದಲ್ಲಿಯೂ ಹೀಗೆ ಆಯಿತು. ಅದರಲ್ಲಿ ಬ್ರಾಹ್ಮಣೇತರರ ಗುಂಪಿಗೆ ಮೀಸಲಾತಿ ನೀಡಲಾಗಿತ್ತು. ಅದು ಕೇವಲ ಸಾಮಾಜಿಕವಾಗಿ ಮಾತ್ರ ಇರಲಿಲ್ಲ. ಹೀಗೆ ಭಾರತದಲ್ಲಿ ಅನೇಕ ಅಂಶಗಳನ್ನು ಪರಿಗಣಿಸುತ್ತಾ ಬರಲಾಗಿದೆ.

ಮೀಸಲಾತಿಯೇ ಅಂತಿಮ ಪರಿಹಾರ ಎನ್ನುವ ಭ್ರಮೆ ಯಾರಿಗೂ ಬೇಡ. ಶಿಕ್ಷಣ ಉದ್ಯೋಗ ಬೇಕಿರುವ ಎಲ್ಲರೂ ಮೂಲಭೂತ ಹಕ್ಕಾಗಲು ಅವಕಾಶಗಳ ಹೆಚ್ಚಳಕ್ಕಾಗಿ, ಮೀಸಲಾತಿಯ ಹಕ್ಕಿನ ವಿಸ್ತಾರಕ್ಕಾಗಿ ಒಂದಾಗಿ ಹೋರಾಡಬೇಕು. ಅದೇ ಪ್ರಮುಖವಾದದು.

ಸ್ವಾತಂತ್ರ್ಯದ ನಂತರ ಮೀಸಲಾತಿಯನ್ನು ವಿಸ್ತರಿಸಲಾಯಿತು. ಆಗ ಪರಿಗಣಿಸಿದ ಬಗೆ ಹೇಗೆ?

ಸ್ವಾತಂತ್ರ್ಯ ಪೂರ್ವದಲ್ಲಿ ಆದಿವಾಸಿಗಳಿಗೆ ಮೀಸಲಾತಿ ಇರಲಿಲ್ಲ. ಅವರಿಗೆ ಸ್ವಾತಂತ್ರ್ಯ ನಂತರದಲ್ಲಿ ಮೀಸಲಾತಿ (ಎಸ್.ಟಿ) ನೀಡಲಾಯಿತು. ಅವರಲ್ಲಿ ಅಸ್ಪೃಶ್ಯತೆ ಇಲ್ಲ. ಶೈಕ್ಷಣಿಕ ಮತ್ತು ಆರ್ಥಿಕವಾಗಿ ಹಿಂದುಳಿದಿರುವುದು, ಬಹುತೇಕರು ಅರಣ್ಯವಾಸಿಗಳು. ಶೈಕ್ಷಣಿಕ, ಸಾಂಸ್ಕೃತಿಕ ಮಟ್ಟದಲ್ಲಿಯೂ ಇವರು ಹಿಂದುಳಿದಿದ್ದಾರೆ. ಅವರಲ್ಲಿ ಅಸ್ಪೃಶ್ಯತೆ, ಜಾತಿ ತಾರತಮ್ಯಗಳು ಇಲ್ಲ. ಆದಾಗ್ಯೂ ಅವರಿಗೆ ಮೀಸಲಾತಿಯನ್ನು ನೀಡಲಾಯಿತು. ನಮ್ಮ ಸಂವಿಧಾನದಲ್ಲಿ ಮಧ್ಯಮ ಜಾತಿಗಳಿಗೆ ಮೀಸಲಾತಿ ಇಲ್ಲ. ಕಾಲ ನಂತರದಲ್ಲಿ ಹಿಂದುಳಿದ ವರ್ಗಗಳಿಗೆ ಒಬಿಸಿ, ಮೀಸಲಾತಿ ನೀಡಲಾಯಿತು. ಕೆಲವು ಅಂಶಗಳನ್ನು ಪರಿಗಣಿಸಿ ರಾಜ್ಯಗಳು ಮೀಸಲಾತಿಯನ್ನು ನೀಡಬಹುದು ಮತ್ತು ನಿರ್ಧರಿಸಬಹುದು ಎಂದು ಸಂವಿಧಾನದಲ್ಲಿ ಹೇಳಲಾಗಿದೆ ಅಷ್ಟೇ. 1992 ರ ನಂತರವೇ ಒಬಿಸಿ ವಿಭಾಗಗಳು ಮೀಸಲಾತಿಯೊಳಗೆ ಬಂದರು. ಇದರಲ್ಲಿ ಶೂದ್ರರು ಆರ್ಥಿಕವಾಗಿ ವಿವಿಧ ಹಂತಗಳಲ್ಲಿ ಇದ್ದಾರೆ. ಆರ್ಥಿಕ ಬಲಿಷ್ಠರಿಗೂ ಇಲ್ಲಿ ನೀಡಲಾಗಿದೆ. ಕರ್ನಾಟಕದ ಉದಾಹರಣೆ ತೆಗೆದುಕೊಳ್ಳಿ. ಒಬಿಸಿಯಲ್ಲಿ ಹಣವಂತರು, ಭೂಮಿ ಉಳ್ಳವರು, ಅಧಿಕಾರಸ್ತರು ಇದ್ದಾರೆ. ಹಾಗೆ ಕಾಪುಗಳು, ಮರಾಠರು ಮೀಸಲಾತಿ ಬೇಕು ಎಂದು ಕೇಳಿ ಚಳುವಳಿಗಳು ನಡೆದಿರುವುದು ಇದೆ.

ಕೇಂದ್ರ ಸರ್ಕಾರ ಆರ್ಥಿಕ ಹಿಂದುಳಿದ ವಿಭಾಗಗಳ ಮೀಸಲಾತಿಗೆ ಸೂಚಿಸಿರುವ ಮಾನದಂಡಗಳು ಅತ್ಯಂತ ಕೆಟ್ಟದಾಗಿವೆ. ಅದು ಮೇಲ್ಜಾತಿಗಳಲ್ಲಿರುವ ಶ್ರೀಮಂತರು ಇದರೊಳಗೆ ಪ್ರವೇಶ ಪಡೆಯುವಂತೆ ಅವಕಾಶ ಕಲ್ಪಿಸಿದೆ. ಮೀಸಲಾತಿಯ ಉದ್ದೇಶವನ್ನೇ ಅರ್ಥಹೀನಗೊಳಿಸುತ್ತದೆ. ಅವು ಬದಲಾಗಲೇಬೇಕು.

ಗುಜರಾತ್ ನಲ್ಲೂ ಪಟಿದಾರ್–ಪಟೇಲ್ ಸಮುದಾಯ ಕೇಳುತ್ತಿದೆಯಲ್ಲ?

ಹೌದು.

ಮೀಸಲಾತಿ ಪರಿಗಣನೆಗೆ ತೆಗೆದುಕೊಳ್ಳಲಾದ ಅಂಶಗಳೇನು?

ಮೀಸಲಾತಿಗೆ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಅಂಶಗಳನ್ನು ಒಟ್ಟಾರೆಯಾಗಿ ಪರಿಗಣನೆಗೆ ತೆಗೆದುಕೊಳ್ಳಲಾಗಿದೆ. ಇದು ಸಂವಿಧಾನಾತ್ಮಕವಾಗಿದೆ. ಕೆಲವೆಡೆ ಕೆಲವರು ಹಿಂದುಳಿದವರಾಗಿದ್ದರೆ ಕೆಲವು ಕಡೆ ಅವರು ಮುಂದುವರಿದವರಾಗಿರುತ್ತಾರೆ. ಮುಂದುವರಿದ ಜಾತಿ ಹಿಂದುಳಿದ ಜಾತಿಗಳು ಅದಲು ಬದಲು ಆಗಬಹುದು. ಇವೆಲ್ಲ ರಾಜಕೀಯ ಪರಿಗಣನೆಯನ್ನು ಆಧರಿಸಿವೆ. ಒಂದು ವೇಳೆ ಶೈಕ್ಷಣಿಕ, ಆರ್ಥಿಕವಾಗಿ ಹಿಂದುಳಿದವರಿಗೂ ನೀಡಿದರೆ ಅದರಿಂದ ಒಂದಿಷ್ಟು ಅನುಕೂಲ ಆಗುವುದಾದರೆ ತೊಂದರೆ ಏನಿದೆ?

ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವಾಗ ಏನಾದರೂ ನಿರ್ಭಂಧಗಳು ಇರಬೇಕೆ?

ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವಾಗಲೂ ಆರ್ಥಿಕ ಮಾನದಂಡವನ್ನು ವಿಧಿಸಬೇಕು ಎಂದು ಸಿಪಿಐ(ಎಂ) ಹೇಳುತ್ತದೆ. ಸಾಮಾಜಿಕ ಅಂಶವನ್ನು ಪ್ರಧಾನವಾಗಿ ಪರಿಗಣಿಸಿ ಮೀಸಲಾತಿ ನೀಡಿದರೂ ಆರ್ಥಿಕವಾದ ಅಂಶವನ್ನು ಒಳಗೊಳಿಸಬೇಕು. ಅಂದಾಗ ನಿಜಕ್ಕೂ ತುಂಬಾ ಅತ್ಯಗತ್ಯ ಇರುವ ಜನರಿಗೆ ಅದರ ಪ್ರಯೋಜನ ಸಿಗಲಿದೆ. ಇವೆಲ್ಲವುಗಳ ನಡುವೆ 'ಚೀನಾ

ಪುಟ 10 ಕ್ಕೆ

ಮೀಸಲಾತಿಯೇ ಅಂತಿಮ ಪರಿಹಾರ....... ಪುಟ 9 ರಿಂದ

ಗೋಡೆ'ಯನ್ನು ಎಬ್ಬಿಸಬಾರದು. ಮೀಸಲಾತಿ ಪರಿಗಣನೆಗೆ ಮೊದಲನೆಯ ಆದ್ಯತೆ ಸಾಮಾಜಿಕ ಅಂಶವೇ ಆಗಿದೆ. ಮೇಲ್ಜಾತಿಗಳಲ್ಲಿಯೂ ಅತ್ಯಂತ ಬಡತನ ಅನುಭವಿಸುತ್ತಿರುವ ಅನೇಕರು ಇದ್ದಾರೆ. ಮೇಲ್ಜಾತಿಗಳಲ್ಲಿಯೂ ಹಲವು ವ್ಯತ್ಯಾಸಗಳು ಇವೆ. ಅವರ ಕಲ್ಯಾಣಕ್ಕೆ ಹಲವಾರು ಕ್ರಮಗಳನ್ನು ಕೈಗೊಳ್ಳಬಹುದು. ಇಲ್ಲೊಂದು ಪ್ರಶ್ನೆ ಬರುತ್ತದೆ, 'ಅವರಿಗೆ ಆರ್ಥಿಕ ಕಾರ್ಯಕ್ರಮಗಳನ್ನು ಕೈಗೊಳ್ಳಲಿ, ಯಾಕೆ ಮೀಸಲಾತಿ ನೀಡುವುದು?' ಎಂಬುದು.

ಹೌದಲ್ಲ, ಹಾಗೆ ಮಾಡಬಹುದಲ್ಲಾ?

ಇಲ್ಲಿ ಒಂದು ಮುಖ್ಯ ರಾಜಕೀಯ ಪ್ರಶ್ನೆ ಇದೆ. ನಾವು ನಿಜಕ್ಕೂ ಮೀಸಲಾತಿ ಅತ್ಯಗತ್ಯವಾಗಿರುವ ವಿಭಾಗಗಳಿಗೆ ಎಸ್.ಸಿ, ಎಸ್.ಟಿ, ಒಬಿಸಿ ಗಳಿಗೆ ಮೀಸಲಾತಿಯನ್ನು ಉಳಿಸಿಕೊಳ್ಳಬೇಕಾದರೆ ಮೇಲ್ಜಾತಿಗಳಲ್ಲಿರುವ ಅತಿ ಹಿಂದುಳಿದ ವಿಭಾಗಗಳನ್ನು ಮೀಸಲಾತಿ ಪರವಾಗಿ ಸಂಘಟಿಸುವುದು ಅತ್ಯಗತ್ಯ. ಇಲ್ಲವಾದರೆ ಮೀಸಲಾತಿ ವಿರೋಧಿಗಳು ಇವರನ್ನು ಎತ್ತಿ ಕಟ್ಟುತ್ತಾರೆ. 'ನೀವು ಯಾಕೆ ಬಡವರಾಗಿದ್ದೀರಾ ಎಂದರೆ ನಿಮಗೆ ಯಾವುದೇ ಸೌಲಭ್ಯಗಳು ಸಿಗುತ್ತಿಲ್ಲ. ಕಾರಣ ಮೀಸಲಾತಿ ಪಡೆಯುತ್ತಿರುವವರೇ ಎಲ್ಲವನ್ನು ಹೊಡೆದುಕೊಳ್ಳುತ್ತಿದ್ದಾರೆ. ಮೀಸಲಾತಿ ಹೋದರೆ ನಿಮಗೆ ಅವಕಾಶಗಳು ಸಿಗುತ್ತವೆ' ಎಂದು ಶತ್ರುತ್ವ ಭಾವನೆಯನ್ನು ಮತ್ತು ಆಕ್ರೋಶವನ್ನು ಹುಟ್ಟುಹಾಕಿ ಎತ್ತಿ ಕಟ್ಟುತ್ತಿದ್ದಾರೆ.

ಹೀಗೆ ಬಡವರನ್ನು ಮೀಸಲಾತಿ ವಿರುದ್ಧ ನಿಲ್ಲಿಸುತ್ತಾರೆ. ಮೀಸಲಾತಿ ವಿರೋಧಿ ಚಳುವಳಿಗಳ ಇತಿಹಾಸವನ್ನು ನೀವು ನೋಡಿದರೆ ಇದೇ ಅಂಶ ಸ್ಪಷ್ಟವಾಗಿ ಕಾಣಿಸುತ್ತದೆ. ಆದ್ದರಿಂದ ಇಂದಿನ ಎಸ್.ಸಿ, ಎಸ್.ಟಿ, ಇತರೆ ವಿಭಾಗಗಳ ಮೀಸಲಾತಿಗೆ ಬೆಂಬಲವಾಗಿ ಉಳಿದವರನ್ನು ಸಂಘಟಿಸದೆ ಇರುವುದರಿಂದ ಅದರ ವಿರುದ್ಧವೇ ಎತ್ತಿ ಕಟ್ಟಿ ನಿಲ್ಲಿಸುತ್ತಾ ಬರಲಾಗಿದೆ. ಆದ್ದರಿಂದ ಮೇಲ್ಜಾತಿಗಳಲ್ಲಿ ಇರುವ ಆರ್ಥಿಕ ಹಿಂದುಳಿದವರನ್ನು ಮೀಸಲಾತಿ ಪರವಾಗಿ ನಿಲ್ಲುವಂತೆ ಮಾಡುವುದು ತುಂಬಾ ಅತ್ಯಗತ್ಯ. ಅವರಿಗೆ ಒಂದು ರೀತಿಯ ಬೆಂಬಲ ಬೇಕು. ಈ ಆರ್ಥಿಕ ಹಿಂದುಳಿದವರ ನಡುವೆ ಮೀಸಲಾತಿ ಅವಕಾಶಗಳು ಇವೆ ಎಂಬುದು ಒಂದು ಸಹಾಯಕ ಅಂಶವಾಗಬಲ್ಲದು. ಅದರಿಂದ ಮೀಸಲಾತಿ ಅಗತ್ಯವಾಗಿ ಬೇಕಿರುವ ದಮನಿತ ವರ್ಗಗಳ ಮತ್ತು ವಿಭಾಗಗಳ ಮೀಸಲಾತಿ ರಕ್ಷಣೆಗೆ ಎಲ್ಲರನ್ನೂ ಅಣಿ ನೆರೆಸಬೇಕು. ಇದು ಮೀಸಲಾತಿಯನ್ನು ಉಳಿಸಿಕೊಳ್ಳಲು ಅತ್ಯಗತ್ಯ ಕೂಡ.

ಈ ಒಗ್ಗಟ್ಟು ಮಹತ್ವದ್ದು ಎನ್ನುವಿರಾ? ಹೇಗೆ?

ಈ ಒಗ್ಗಟ್ಟು ಬೆಸೆಯುವುದು ಮಹತ್ವದ ರಾಜಕೀಯ ಅಂಶವಾಗಿದೆ. ಇದರ ಅರ್ಥ ಎಲ್ಲರನ್ನು ಸಂಘಟಿಸಲು ಮುಂದಾಗ ಬೇಕಿದೆ. ಅವರಿಗೆ ಒಂದಿಷ್ಟು ಬೆಂಬಲ ಬೇಕು. ಅದು ಆರ್ಥಿಕ ಹಿಂದುಳಿದ ಮೀಸಲಾತಿ ಎಂದು ಸಿಗುವುದಾದರೆ ನಮ್ಮ ಮೀಸಲಾತಿ ಬೆಂಬಲಕ್ಕೆ ಅವರು ನಿಲ್ಲುವರು. ಆರ್ಥಿಕ ಅಂಶದಿಂದ ಅವರನ್ನು ಮೀಸಲಾತಿ ಪರವಾಗಿ ತರುವುದು ರಾಜಕೀಯ ಮಹತ್ವದ್ದು. ಇಲ್ಲವಾದಲ್ಲಿ ಈ ವಿಭಾಗಗಳು ಮೀಸಲಾತಿ ವಿರೋಧವಾಗಿ ಮೀಸಲಾತಿಯ ಅಸ್ತಿತ್ವಕ್ಕೆ ಬೆದರಿಕೆ ಒಡ್ಡುವ ಶಕ್ತಿಗಳಾಗುತ್ತವೆ ಎನ್ನುವುದನ್ನು ಗಮನದಲ್ಲಿಡಬೇಕು. ಇಲ್ಲವಾದರೆ ಮೀಸಲಾತಿ ವಿರೋಧಿ ಭಾವನೆಗಳು ಬೆಳೆಯುತ್ತವೆ. ಅಂತಿಮವಾಗಿ ಮೀಸಲಾತಿ ಅಸ್ತಿತ್ವಕ್ಕೆ ಬೆದರಿಕೆ ಬರುತ್ತದೆ.

ಸಿಪಿಐ(ಎಂ) ದೃಷ್ಟಿಯಲ್ಲಿ ಮೂರನೆಯ ಅಂಶ ನಾವು ಬಡವರಾಗಿರುವ ಎಲ್ಲ ವಿಭಾಗ ವರ್ಗಗಳ ಜನರನ್ನು ಒಂದುಗೂಡಿಸಿ ಒಗ್ಗಟ್ಟು ಬೆಸೆಯಬೇಕು. ಮೇಲ್ಜಾತಿ ಕೆಲ ಜಾತಿಗಳಲ್ಲಿರುವ ಎಲ್ಲರ ವರ್ಗ ಐಕ್ಯತೆ ಬೆಳೆಸುವುದು ಅತಿ ಅಗತ್ಯ. ನಮ್ಮ ಎಲ್ಲರ ಸಮಸ್ಯೆಗಳಿಗೆ ಇಡೀ ಸಮಾಜ ವ್ಯವಸ್ಥೆ ಬದಲಾಗಬೇಕು. ಹಳೆಯ ಪಾಳೇಗಾರಿ, ಹೊಸ ಬಂಡವಾಳಶಾಹಿ ವ್ಯವಸ್ಥೆಯನ್ನು ಪೂರ್ಣವಾಗಿ ಬದಲಾಯಿಸದೇ ಹೋದರೆ ಯಾವ ಮೂಲಭೂತ ಪ್ರಶ್ನೆಗಳೂ ಇತ್ಯರ್ಥ ಆಗಲಾರವು. ಒಂದು ಅಂಶ ಮರೆಯಬಾರದು. ಮೀಸಲಾತಿಯು ಎಸ್.ಸಿ.ಮತ್ತು ಎಸ್.ಟಿ. ಮುಂತಾದ ವಿಭಾಗಗಳಿಗೂ, ಎಲ್ಲವಕ್ಕೂ ರಾಮಬಾಣವೇನೂ ಅಲ್ಲ ಎಂಬುದರ ಅರಿವು ಇರಬೇಕು. ಆದ್ದರಿಂದ ಈ ಎಲ್ಲಾ ವಿಭಾಗಗಳಲ್ಲಿ ಒಗ್ಗಟ್ಟು ತರಲು ಆರ್ಥಿಕ ಹಿಂದುಳಿದ ವಿಭಾಗಗಳಿಗೆ ಮೀಸಲಾತಿ ನೀಡುವಿಕೆಯು ಒಂದು ಕಾರ್ಯ ತಂತ್ರಾತ್ಮಕವಾದ ಅವಶ್ಯಕತೆಯಾಗಿದೆ.

ಇ.ಡಬ್ಲ್ಯೂ.ಎಸ್ ಗೆ ಶೇ.10 ಮೀಸಲಾತಿ ಇರಬೇಕೇ? ಕೇಂದ್ರ ಸರಕಾರ ರೂಪಿಸಿರುವ ಮಾನದಂಡಗಳು ನಿಜಕ್ಕೂ ಕಡು ಬಡವರಿಗೆ ನ್ಯಾಯ ಕೊಡುವುದೇ?

ಇಲ್ಲಿ ಮೀಸಲಾತಿ ಪ್ರಮಾಣ ಶೇ.10 ಅಥವಾ 5 ಎನ್ನುವುದು ಬೇರೆ ವಿಷಯ. ಒಂದು ಕಂಡಿಶನ್. ನಾವು ಒಬಿಸಿ ಗಳಿಗೆ ಕೆನೆ ಪದರ ಮಿತಿಯನ್ನು ವಿಧಿಸಲು ಹೇಳಿದಂತೆ ಇಲ್ಲಿಯೂ ತೀರಾ ಅಗತ್ಯ ಇರುವವರಿಗೆ ಮಾತ್ರ ಮೀಸಲಾತಿ ನೀಡಬೇಕೆ ಹೊರತು ಎಲ್ಲರಿಗೂ ಅಲ್ಲ. ಈಗ ಕೇಂದ್ರ ಸರ್ಕಾರ ಆರ್ಥಿಕ ಹಿಂದುಳಿದ ವಿಭಾಗಗಳ ಮೀಸಲಾತಿಗೆ ಸೂಚಿಸಿರುವ ಮಾನದಂಡಗಳು ಅತ್ಯಂತ ಕೆಟ್ಟದಾಗಿವೆ. ಅದು ಮೇಲ್ಜಾತಿಗಳಲ್ಲಿರುವ ಶ್ರೀಮಂತರು ಇದರೊಳಗೆ ಪ್ರವೇಶ ಪಡೆಯುವಂತೆ ಅವಕಾಶ ಕಲ್ಪಿಸಿದೆ. ಮೀಸಲಾತಿಯ ಉದ್ದೇಶವನ್ನೇ ಅರ್ಥಹೀನಗೊಳಿಸುತ್ತದೆ. ಆದ್ದರಿಂದ ಇದನ್ನು ನಾವು ಕಟುವಾಗಿ ವಿರೋಧಿಸುತ್ತೇವೆ. ಈಗಿರುವ ಮಾನದಂಡಗಳನ್ನು ಕೂಡಲೇ ಶೀಘ್ರವಾಗಿ ಬದಲಾಯಿಸಬೇಕು. ಕೆಳಸ್ತರದ, ನಿಜಕ್ಕೂ ಬಡತನದಲ್ಲಿರುವ ತೀರಾ ಅಗತ್ಯವಿರುವ ಈ ವಿಭಾಗಗಳಿಗೆ ಮಾತ್ರವೇ ಅದರ ಪ್ರಯೋಜನ ಪಡೆಯುವಂತಾಗಬೇಕು. ಈ ಕಾರಣದಿಂದ ಮಾತ್ರ ನಾವು ಬೆಂಬಲಿಸಿದ್ದೇವೆ.

ಇದರ ಬಗ್ಗೆಯೂ ಪರ ವಿರೋಧಗಳು ಇವೆಯಲ್ಲಾ?

ಬೌದ್ಧಿಕ ವಲಯದಲ್ಲಿನ ಕೆಲವರು, ಎನ್.ಜಿ.ಒ. ಗಳು, ದಲಿತ ಚಳುವಳಿಗಳಲ್ಲಿರುವ ಕೆಲವರು ನಮ್ಮ ದೃಷ್ಟಿಕೋನವನ್ನು ವಿರೋಧಿಸಬಹುದು. ಹಾಗೆಯೇ 'ಮೀಸಲಾತಿ ಬೇಡವೇ ಬೇಡ, ಇದು ಜಾತಿ ವ್ಯವಸ್ಥೆಯನ್ನು ತೊಲಗಿಸುವ ಬದಲು ಸಂರಕ್ಷಿಸುತ್ತದೆ' ಎನ್ನುವವರು ಅವರ ನಡುವೆಯೂ ಇದ್ದಾರೆ ಎನ್ನುವುದನ್ನು ಗಮನಿಸಬೇಕು. 'ಬೇರೆ ದೃಢವಾದ ಕ್ರಮಗಳನ್ನು ವಹಿಸುವುದರಿಂದ ಈ ಜಾತಿ ವ್ಯವಸ್ಥೆಯನ್ನು ನಾಶಗೊಳಿಸಬಹುದು ಎಂದು, ಅಂತಹ ಕ್ರಮಗಳನ್ನು ವಹಿಸಬೇಕು' ಎನ್ನುತ್ತಾರೆ ಅವರು. 'ಈ ಜಾತಿ ವ್ಯವಸ್ಥೆಯಿಂದಾಗಿ ಸಾಮಾಜಿಕ ತಾರತಮ್ಯ ಉಳಿದುಕೊಳ್ಳುತ್ತದೆ. ತಾರತಮ್ಯದ ಈ ಜಾತಿ ವ್ಯವಸ್ಥೆಯು ಸಾಮಾಜಿಕ ದಮನಕ್ಕೂ ಕಾರಣವಾಗುತ್ತದೆ. ಆದ್ದರಿಂದ ಮೀಸಲಾತಿ ವ್ಯವಸ್ಥೆಯನ್ನೇ ತೆಗೆದುಹಾಕಿ' ಎಂದು ಅವರು ವಾದಿಸುತ್ತಾರೆ. ನಾವು ಈ ವಾದವನ್ನು ಖಡಾಖಂಡಿತ ಒಪ್ಪುವುದಿಲ್ಲ. ಆದರೆ ಮೀಸಲಾತಿಯು ಜಾತಿ ವ್ಯವಸ್ಥೆಯನ್ನು, ಜಾತಿ ತಾರತಮ್ಯವನ್ನು ನಾಶಗೊಳಿಸುವುದಿಲ್ಲ ಎಂಬ ಬುದ್ಧಿಜೀವಿಗಳ, ದಲಿತ ಚಳುವಳಿಕಾರರ ಒಂದು ಅಭಿಪ್ರಾಯವನ್ನು ನಾವು ಒಪ್ಪುತ್ತೇವೆ. ಆದರೆ ಈ ಮೀಸಲಾತಿಯು ಒಂದು ಮಟ್ಟದಲ್ಲಿ ಸಮುದಾಯಗಳಿಗೆ ಸಾಮಾಜಿಕ ಸಂಚಲನೆ, ಶಕ್ತಿಯನ್ನು ಕೊಡುವುದು ಎನ್ನುವುದು ನಮ್ಮ ಅಭಿಪ್ರಾಯ. ಇನ್ನೂ ಕೆಲವರು ಈ ಮೀಸಲಾತಿಯನ್ನು ಎಲ್ಲರಿಗೂ ಕೊಡಿ. ಅವರವರ ಜನಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ ಹಂಚಿ ಎನ್ನುತ್ತಾರೆ. ಅವರು ಸಾಮಾಜಿಕ ಅಂಶದ ಆಧಾರವನ್ನೇ ದುರ್ಬಲಗೊಳಿಸಲು ಬಯಸುತ್ತಾರೆ. ಇದನ್ನು ಒಪ್ಪಲು ಸಾಧ್ಯವಿಲ್ಲ. ಇಂತಹ ಹಲವಾರು ವಾದಗಳಿವೆ.

ತಕ್ಷಣದಲ್ಲಿ ಮಾಡಬೇಕಾದುದೇನು?

ಮೂಲಭೂತವಾಗಿ ಸಾಮಾಜಿಕವಾಗಿ ತಾರತಮ್ಯಕ್ಕೆ ಒಳಗಾದವರಿಗೆ ಧೃಡ ಬೆಂಬಲ ಬೇಕು. ಅದು ಭಾರತದಲ್ಲಿ ಮೀಸಲಾತಿ ನೀಡಿಕೆಯ ಸ್ವರೂಪದಲ್ಲಿದೆ. ಇದನ್ನು ಸಂರಕ್ಷಿಸಬೇಕು. ಅಸ್ಪೃಶ್ಯ, ಇತರ ಹಿಂದುಳಿದ ಸಮುದಾಯಗಳಲ್ಲಿ, ಅಸ್ಪೃಶ್ಯತೆ ಇಲ್ಲದವರಿಗೂ ಕೆಲವು ವಿಭಾಗಗಳಿಗೆ ಶೈಕ್ಷಣಿಕವಾಗಿ ಮತ್ತಿತರೆ ಅಂಶಗಳಲ್ಲಿ ತೀರಾ ಹಿಂದುಳಿದಿವೆ. ಅಂತಹವರಿಗೂ ಮೀಸಲಾತಿಯ ಸೌಲಭ್ಯ ನೀಡಬೇಕು. ಮೂರು ಅಂಶಗಳು ಇಲ್ಲಿ ಆಧಾರವಾಗಿರಬೇಕು. ಒಂದು, ಆರ್ಥಿಕವಾಗಿ ಬೆಂಬಲಿಸಬೇಕು. ಎರಡು, ರಾಜಕೀಯವಾಗಿ ಮೀಸಲಾತಿ ಪರವಾಗಿ ಬೆಂಬಲವನ್ನು ಕ್ರೋಢಿಕರಿಸಬೇಕು. ಅವರನ್ನು ಒಂದುಗೂಡಿಸಬೇಕು. ಮೂರನೆಯದಾಗಿ, ಒಂದು ವರ್ಗವಾಗಿ ಅವರೆಲ್ಲರನ್ನೂ ಒಗ್ಗೂಡಿಸಬೇಕು. ಈಗ ಶೇ.10 ಮೀಸಲಾತಿಯು ಈ ಮೂರು ಸಾಮಾಜಿಕ, ಶೈಕ್ಷಣಿಕ, ಆರ್ಥಿಕವಾಗಿ ಹಿಂದುಳಿದಿರುವ ವಿಭಾಗಗಳಿಗೆ ಒಂದು ಅವಕಾಶವನ್ನು ಕಲ್ಪಿಸುತ್ತದೆ. ಅದಕ್ಕಾಗಿ ನಾವು ಬೆಂಬಲಿಸಬೇಕಿದೆ.

ಮೀಸಲಾತಿಗೆ ಸಾಮಾಜಿಕ ಅಂಶವನ್ನು ಮಾತ್ರವೇ ಪರಿಗಣಿಸಬೇಕು. ಮೀಸಲಾತಿ ಎನ್ನುವುದು ಆರ್ಥಿಕ ಕಾರ್ಯಕ್ರಮ ಅಲ್ಲ ಅನ್ನುತ್ತಾರೆ. ನಮ್ಮ ಸಂವಿಧಾನದಲ್ಲಿ ಇದಕ್ಕೆ ಅವಕಾಶವಿದೆಯೇ?

ಮೀಸಲಾತಿ ಏನೂ ಬ್ರಹ್ಮ ಸೃಷ್ಟಿಯಲ್ಲ. ನಾವೇ ಯೋಚಿಸಿ ಒಂದು ಕಾರ್ಯಕ್ರಮವನ್ನು ವಿನ್ಯಾಸಗೊಳಿಸಿಕೊಂಡಿದ್ದೇವೆ. ಒಂದೊಂದು ದೇಶವು ಸಾಮಾಜಿಕ ತಾರತಮ್ಯ ನಿವಾರಣೆಗೆ ಒಂದೊಂದು ರೀತಿಯಲ್ಲಿ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿವೆ. ಭಾರತ ಕೋಟಾ ಪದ್ಧತಿಯನ್ನು ಅಳವಡಿಸಿಕೊಂಡಿದೆ. ಬೇರೆ ದೇಶಗಳಲ್ಲಿ ಈ ಕೋಟಾ ಸಿಸ್ಟಮ್ ಇಲ್ಲ. ಭಾರತದ ಸಂವಿಧಾನವನ್ನು ರೂಪಿಸುವಾಗ ಸಂವಿಧಾನ ಕರ್ತೃಗಳು ಕೇವಲ ಸಾಮಾಜಿಕ ತಾರತಮ್ಯಕ್ಕೆ ಮಾತ್ರವೇ ಪ್ರಧಾನ್ಯತೆ ನೀಡಿಲ್ಲ. ಇತರೆ ತಾರತಮ್ಯಗಳನ್ನು ಗುರುತಿಸಿದ್ದಾರೆ. ಮೀಸಲಾತಿಯ ಇತಿಹಾಸವನ್ನು ನೋಡಿದಾಗಲೂ ಆಳುವವರು ಹಲವಾರು ರೀತಿಯ ಮಾನದಂಡಗಳನ್ನು ಆಧಾರ ಅಂಶಗಳಾಗಿ ಒಳಗೊಂಡಿದ್ದಾರೆ. ಇವೆಲ್ಲವುಗಳ ಹೊರತಾಗಿಯೂ ಸಾಮಾಜಿಕ ತಾರತಮ್ಯವನ್ನು ಪ್ರಧಾನವಾಗಿ ಪರಿಗಣಿಸಬೇಕು ಎನ್ನುವುದು ಸಿಪಿಐ(ಎಂ)ನ ವಾದ ಕೂಡ. ಮೀಸಲಾತಿಯ ಅಂಶ ಇದು ಹೊರ ತಳ್ಳುವಿಕೆಯಾಗಬಾರದು, ಒಳಗೊಳ್ಳುವಿಕೆ ಆಗಬೇಕು.

ಉದಾಹರಣೆಗೆ, ಮಹಿಳಾ ಮೀಸಲಾತಿ ನೀಡುತ್ತಿದ್ದೇವೆ. ಇದರಲ್ಲಿ ಮೇಲ್ಜಾತಿ ಮಹಿಳೆಯರನ್ನು ಒಳಗೊಳ್ಳುವುದಿಲ್ಲವೇ? ಅಂಗವಿಕಲರಿಗೆ, ಕ್ರೀಡಾಪಟುಗಳಿಗೆ ಸಹ ಮೀಸಲಾತಿ ನೀಡಲಾಗುತ್ತಿದೆ. ಕರ್ನಾಟಕದಲ್ಲಿ ಪ್ರಾದೇಶಿಕವಾಗಿಯೂ ಮೀಸಲಾತಿ ನೀಡುತ್ತಿಲ್ಲವೇ? ಕೆಲವರು ಸ್ಥಳೀಯರಿಗೆ ಮೀಸಲಾತಿ ಇರಬೇಕು ಎನ್ನುವ ಕಾಯ್ದೆಗಳನ್ನು ಅಂಗೀಕರಿಸಿದ್ದಾರೆ. ಕೆಲವು ವಿಶ್ವವಿದ್ಯಾಲಯಗಳು ಗ್ರಾಮೀಣ ವಿದ್ಯಾರ್ಥಿಗಳಿಗೆ ವಿಶೇಷ ಅಂಕಗಳನ್ನು ನೀಡುವ ಅವಕಾಶ ಮೀಸಲಿಟ್ಟಿದ್ದಾರೆ. ತಮಿಳುನಾಡಿನಲ್ಲಿ ನಡೆದ ಹೋರಾಟ ಒಂದು ಗ್ರಾಮೀಣ, ನಗರ ಎನ್ನುವ ವಿಂಗಡನೆಯನ್ನು ಆಧರಿಸಿತ್ತು. ಹೀಗಾಗಿ ಅನೇಕ ವಿಭಿನ್ನ ಅಂಶಗಳನ್ನು ಮೀಸಲಾತಿ ನೀಡಿಕೆಯಲ್ಲಿ ಆಧಾರವಾಗಿ ಪರಿಗಣಿಸಲಾಗಿದೆ. ಹೀಗಿದ್ದಾಗಲೂ ಮೀಸಲಾತಿಯು ಮುಖ್ಯವಾಗಿ ಸಾಮಾಜಿಕ ತಾರತಮ್ಯದ ಅಂಶವನ್ನು ಆಧಾರವಾಗಿರಿಸಿ ಕೊಂಡಿರಬೇಕು. ಅದಕ್ಕೆ ಒತ್ತು ನೀಡಬೇಕು. ಒಟ್ಟು ವಿದ್ಯಾಮಾನಗಳ ಬೆಳವಣಿಗೆಯ ಇತರೆ ವಿಷಯಗಳನ್ನು ಪರಿಗಣಿಸದೆ ಇ.ಡಬ್ಲ್ಯೂ. ಎಸ್.ನ್ನು ನಿರಾಕರಿಸುವುದು ಅಂತಿಮವಾಗಿ ಮೀಸಲಾತಿಯ ವಿರುದ್ಧವೇ ಜನರನ್ನು ಅಣಿನೆರೆಸಲು ಅವಕಾಶ ಕಲ್ಪಿಸುತ್ತದೆ. ಅಂದರೆ ಮೀಸಲಾತಿ ವ್ಯವಸ್ಥೆಯ ಅಸ್ತಿತ್ವಕ್ಕೆ ಅಪಾಯ ಒದಗಿ ಬರುತ್ತದೆ.

ಈ ಅಪಾಯ ಗಂಭೀರವೇ?

ಹೌದು, ಈಗೀಗ 'ಸಂವಿಧಾನವೇ ಇದಕ್ಕೆ ಕಾಲಮಿತಿ ವಿಧಿಸಿದೆ ಎಂದು ಇನ್ನೆಷ್ಟು ವರ್ಷಗಳು ಮೀಸಲಾತಿ ಮುಂದುವರಿಯಬೇಕು' ಎಂದು ಕೆಲವರು ಪ್ರಶ್ನೆಗಳನ್ನು ಹೈಕೇಳುತ್ತಿರುತ್ತಾರೆ. ಹಿಂದುತ್ವದ ಶಕ್ತಿಗಳು 'ಮೀಸಲಾತಿಗೆ ಹತ್ತು ವರ್ಷಗಳಷ್ಟೇ ಗಡುವು ನೀಡಲಾಗಿತ್ತು. ಮತ್ತೆ ಈಗೇಕೆ?' ಎಂದು ಪ್ರಶ್ನಿಸುತ್ತಿವೆ. ನೋಡಿ ಸುಪ್ರೀಂಕೋರ್ಟಿನ ನ್ಯಾಯಮೂರ್ತಿಗಳು ಸಹ 'ಮೀಸಲಾತಿ ಇನ್ನೆಷ್ಟು ವರ್ಷ ಮುಂದುವರಿಸಲು ಇಚ್ಚಿಸುತ್ತೀರಿ' ಎಂಬ ಪ್ರಶ್ನೆಯನ್ನು ಕೇಳಿದ್ದಾರೆ! ಈಗ ಮೀಸಲಾತಿಯಿಂದ ಹೊರಗುಳಿದ ಜನರನ್ನು ಒಳಗೊಳಿಸದೇ ಹೋದರೆ ಅವರು ಮೀಸಲಾತಿ ವ್ಯವಸ್ಥೆ ವಿರುದ್ಧವೇ ತಿರುಗುತ್ತಾರೆ. ಅಂತಿಮವಾಗಿ, ಬಾಧೆಗೆ ಒಳಗಾಗುವವರು ಸಾಮಾಜಿಕ ತಾರತಮ್ಯಕ್ಕೆ ಈಡಾದ ಜನ ಸಮುದಾಯಗಳು. ಈಗಲೂ ಮೀಸಲಾತಿಯಿಂದ ಹೊರಗಿರುವವರೆಗೂ ದೂರ ಇಡುವ ಕ್ರಮಗಳು ಅಪಾಯ ತರುತ್ತವೆ ಎಂಬುದನ್ನು ನೆನಪಿಡಬೇಕು.

ಇ.ಡಬ್ಲ್ಯೂ.ಎಸ್. ಕುರಿತ ಕೇಂದ್ರ ಸರ್ಕಾರದ ಮಾನದಂಡಗಳು ಸರಿಯೇ?

ಈಗ ಆರ್ಥಿಕ ಹಿಂದುಳಿದ ವಿಭಾಗಗಳಿಗೆ ರೂಪಿಸಲಾದ ಕಾಯ್ದೆಯಲ್ಲಿರುವ ಮಾನದಂಡಗಳು ಸರಿಯಿಲ್ಲ. ಅವು ಬದಲಾಗಲೇಬೇಕು. 8 ಲಕ್ಷ ಆದಾಯದ ಮಿತಿ, 1000 ಚದರಡಿ ಮನೆ ಅಥವಾ ನಿವೇಶನ ಇತ್ಯಾದಿಗಳು ಇರುವ ಎಲ್ಲ ಮಾನದಂಡಗಳು ಪೂರ್ಣವಾಗಿ ಬದಲಾಗಬೇಕು. ಇಲ್ಲವಾದರೆ ನಿಜಕ್ಕೂ ದಕ್ಕ ಬೇಕಿರುವ, ಅಗತ್ಯವಿರುವ ವಿಭಾಗಗಳಿಗೆ ಅದರಲ್ಲೂ ಆರ್ಥಿಕ ಹಿಂದುಳಿದಿರುವವರು ವಂಚಿತರಾಗುತ್ತಾರೆ. ಆದ್ದರಿಂದ ಸರ್ಕಾರ ಕೂಡಲೇ ಅದನ್ನು ಬದಲಾಯಿಸಬೇಕು.

ಕೊನೆಯದಾಗಿ,

ಇದೇ ಹೊತ್ತಿನಲ್ಲಿ ಮೀಸಲಾತಿಯೇ ಅಂತಿಮ ಪರಿಹಾರ ಎನ್ನುವ ಭ್ರಮೆ ಯಾರಿಗೂ ಬೇಡ. ಇಂದು ಸಾರ್ವಜನಿಕ ರಂಗದಲ್ಲಿ ಶಿಕ್ಷಣ ಉದ್ಯೋಗದ ಅವಕಾಶಗಳೇ ಕುಗ್ಗಿ ಹೋಗುತ್ತಿವೆ. ಶಿಕ್ಷಣ ಉದ್ಯೋಗ ಬೇಕಿರುವ ಎಲ್ಲರೂ ಮೂಲಭೂತ ಹಕ್ಕಾಗಲು ಅವಕಾಶಗಳ ಹೆಚ್ಚಳಕ್ಕಾಗಿ, ಮೀಸಲಾತಿಯ ಹಕ್ಕಿನ ವಿಸ್ತಾರಕ್ಕಾಗಿ ಒಂದಾಗಿ ಹೋರಾಡಬೇಕು. ಅದೇ ಪ್ರಮುಖವಾದದು.

ಸಂಗಾತಿ ರಾಘವಲು ರವರು ಕೂಡಲೇ ತಮ್ಮ ಪ್ರಯಾಣವನ್ನು ಆರಂಭಿಸಬೇಕಿದ್ದುದರಿಂದ, ಬಿಡುವು ಮಾಡಿಕೊಂಡು ಸಂದರ್ಶನ ನೀಡಿದ್ದಕ್ಕಾಗಿ ಅವರಿಗೆ ತುಂಬು ಹೃದಯದ ಧನ್ಯವಾದಗಳನ್ನು ತಿಳಿಸುತ್ತಾ ಬೀಳ್ಕೊಟ್ಟೆವು.

ಈ ಸಂದರ್ಶನಕ್ಕೆ ವೀಡಿಯೋ ರೆಕಾರ್ಡಿಂಗ್‌ಗೆ ತಾಂತ್ರಿಕ ನೆರವು ಹಾಗೂ ಸಾಥ್ ನೀಡಿದ ಜನಶಕ್ತಿ ಮಿಡಿಯಾದ ಗುರುರಾಜ ದೇಸಾಯಿ, ಜನಶಕ್ತಿ ಪತ್ರಿಕೆಯ ಕೆ.ಎಂ.ನಾಗರಾಜ್, ಕಛೇರಿಯ ರಾಯಚೂರು ನಾಗರಾಜ್ ರವರಿಗೂ ಧನ್ಯವಾದಗಳು. ●

ಇತ್ತೀಚೆಗಿನ ದಿನಗಳಲ್ಲಿ ನಮ್ಮ ಕೊಡಗು, ಚಿಕ್ಕಮಗಳೂರು, ಹಾಸನ ಜಿಲ್ಲೆಗಳಲ್ಲಿ ವನ್ಯ ಮೃಗಗಳ ಹಾವಳಿ ಅಪಾಯಕಾರಿ ಪರಿಸ್ಥಿತಿಯನ್ನು ಸೃಷ್ಟಿಸಿದೆ. ಬೆಳೆ ಮಾತ್ರವಲ್ಲ, ಮನುಷ್ಯರು, ಜಾನುವಾರುಗಳು ಬಲಿಯಾಗಿವೆ. ಆ ಪ್ರದೇಶದ ಜನರು ಭಯವಿಹ್ವಲರಾಗಿದ್ದಾರೆ. ರಾಜ್ಯದ ಇತರೆ ಕೆಲವು ಜಿಲ್ಲೆಗಳಲ್ಲಿಯೂ ಇಂತಹ ಪರಿಸ್ಥಿತಿ ಉದ್ಭವಿಸುತ್ತಿದೆ. ಆದರೆ ಸರ್ಕಾರದ ಪ್ರತಿಕ್ರಿಯೆ?

ವನ್ಯ ಮೃಗಗಳ ಹಾವಳಿ ಮತ್ತು ಸರಕಾರದ ನಿರ್ಲಕ್ಷ್ಯ

ಡಾ.ಐ.ಆರ್.ದುರ್ಗಾಪ್ರಸಾದ್

ಆನೆಗಳ ಕಾಟ ಬಹುತೇಕ ಕೊಡಗು ಜಿಲ್ಲೆಯನ್ನು ಆವರಿಸಿದ್ದು ಅದು ಇಂದು ನಿನ್ನೆಯದಲ್ಲ, ಅದೂ ಮನುಷ್ಯರ, ಪ್ರಾಣಿಗಳ ಜೀವ ತೆಗೆಯುತ್ತಿವೆ ಮಾತ್ರವಲ್ಲದೆ ಅಪಾರ ಪ್ರಮಾಣದಲ್ಲಿ ಬೆಳೆಯನ್ನೂ ನಾಶ ಮಾಡುತ್ತಿವೆ. ತಾವು ಕೊಡುಕೊಳ್ಳುವ ಪ್ರತಿಯೊಂದು ಸರಕಿನ ಬೆಲೆ ಹೆಚ್ಚುತ್ತಿದ್ದು ಅದಕ್ಕನುಗುಣವಾಗಿ ತಾವು ಬೆಳೆದ ಬೆಳೆಗಳಿಗೆ ಬೆಲೆ ಸಿಗದೆ ಬೆಳೆಗಾರರು ನಿರಂತರವಾಗಿ ಪಾಡು ಪಡುತ್ತಿರುವ ಸಂದರ್ಭದಲ್ಲೇ ಈ ವನ್ಯ ಪ್ರಾಣಿಗಳ ನಿರಂತರ ಧಾಳಿಯಿಂದ ಅವರು ಮತ್ತಷ್ಟು ಕಂಗೆಟ್ಟಿದ್ದಾರೆ. ವನ್ಯ ಮೃಗಗಳ ಈ ರೀತಿಯ ಧಾಳಿಗೆ ರೈತರು, ಕಾರ್ಮಿಕರು ಮತ್ತು ಬುಡಕಟ್ಟು ಜನರೇ ಅತಿ ಹೆಚ್ಚು ಬಲಿಯಾಗುತ್ತಿರುವುದಾಗಿದೆ.

ಸರಕಾರ ಮತ್ತು ಜನಪ್ರತಿನಿಧಿಗಳ ವೈಫಲ್ಯ

ವನ್ಯ ಮೃಗಗಳ ಈ ಧಾಳಿ ಮತ್ತು ಅನುಭವಿಸುತ್ತಿರುವ ಸಂಕಷ್ಟಗಳಿಗೆ ರಾಜ್ಯ ಸರಕಾರ ಕಾರಣ. ನಮ್ಮ ಜಿಲ್ಲೆಯ ಶಾಸಕರುಗಳು ಪ್ರಮುಖ ಕಾರಣರಾಗಿದ್ದಾರೆ. ಜನಪರವಾದ ಅರಣ್ಯ ಧೋರಣೆಯನ್ನು ಸರಕಾರ ರೂಪಿಸಿ ಅದನ್ನು ಅನುಷ್ಠಾನಕ್ಕೆ ತರುವಂತೆ ಮಾಡುವಲ್ಲಿ ಈ ಜನ ಪ್ರತಿನಿಧಿಗಳು ವಿಫಲರಾಗಿದ್ದಾರೆ.

ನಮ್ಮ ರಾಜ್ಯದಲ್ಲಿ ಈ ಹಿಂದಿನಿಂದಲೂ ಸರಕಾರಗಳು ಈ ಸಮಸ್ಯೆಯ ಮೂಲ ಕಾರಣಕ್ಕೆ ಗಮನ ಕೊಡಲಿಲ್ಲ. ಅರಣ್ಯದಲ್ಲಿ ಸಹಜವಾಗಿ ಬೆಳೆಯುತ್ತಿದ್ದ ಮರಗಳನ್ನು ಕಡಿದು ಹಾಕಿದ್ದಲ್ಲದೇ ಕಾಡನ್ನೂ ಲಾಭ ತರುವ ಸೊತ್ತಾಗಿ ಪರಿಗಣಿಸಿ ಏಕ ರೂಪದ ಮರಗಳನ್ನು ಬೆಳೆಸಿದರು. ಇದರಿಂದಾಗಿ ಆನೆಗಳ, ಇತರ ಪ್ರಾಣಿಗಳ ಆಹಾರ ಕಾಡಿನಲ್ಲಿ ಇಲ್ಲವಾಯಿತು. ಅವು ಆಹಾರವನ್ನರಸುತ್ತಾ ನಾಡಿಗೆ ಬರುವುದು ಅನಿವಾರ್ಯವಾಯಿತು.

ಕಾಡಿನಲ್ಲಿ ಅವುಗಳ ಆಹಾರಗಳನ್ನು ಬೆಳೆಸುವತ್ತ ಗಮನ ಕೊಡಲೇ ಇಲ್ಲ. ಕೇವಲ ಯೋಜನೆಗಳ ಹೆಸರಿನಲ್ಲಿ ಕೋಟಿಗಟ್ಟಲೆ ಹಣ ಮಾತ್ರ ಖರ್ಚಾಗಿದೆ. ಆದರೆ ಆ ಯೋಜನೆಗಳೆಲ್ಲವೂ ವಾಸ್ತವದಲ್ಲಿ ಈ ಸಮಸ್ಯೆಯ ಪಾಲಿಗೆ ನಿಷ್ಪ್ರಯೋಜಕವಾದುವು.

ನ್ಯಾಯಾಲಯದ ಮಧ್ಯ ಪ್ರವೇಶ

ಮೈಸೂರು ಅರಣ್ಯ ಪ್ರದೇಶದಲ್ಲಿ 4 ಆನೆಗಳ ಮರಣದ ಬಗ್ಗೆ 06–11–08ರ 'ದಿ ಹಿಂದೂ' ಪತ್ರಿಕೆಯಲ್ಲಿ ಬಂದ ವರದಿಯನ್ನು ಆಧರಿಸಿ ನಮ್ಮ ರಾಜ್ಯದ ಉಚ್ಛ ನ್ಯಾಯಾಲಯವು ಸ್ವ ಪ್ರೇರಣೆಯಿಂದ ಮೊಕದ್ದಮೆ ದಾಖಲಿಸಿಕೊಂಡಿತ್ತು. ಈ ಸಂದರ್ಭ ದಲ್ಲಿ ರಾಜ್ಯ ಸರಕಾರ ತಾನು ತಯಾರಿಸಿದ ವರದಿ ಮತ್ತು ಕ್ರಿಯಾಯೋಜನೆಯನ್ನು 11–03–09 ರಂದು ಮಂಡಿಸಿತು. ಈ ಬಗ್ಗೆ ನ್ಯಾಯಾಲಯ 2009ರ ಮೇ 25 ರಂದು ತನ್ನ ತೀರ್ಪು ಕೊಟ್ಟಿತು.

ಅನಂತರ ಕರ್ನಾಟಕದ ಲೀಗಲ್ ಸರ್ವೀಸಸ್ ಅಥೋರಿಟಿಯವರು ಮಂಡಿಸಿದ ಶಿಫಾರಸುಗಳನ್ನೊಳಗೊಂಡ ವರದಿಯೊಂದು ನ್ಯಾಯಾಲಯದ ಮುಂದೆ ಬಂದು ನ್ಯಾಯಾಲಯ ಅದನ್ನು ಗಣನೆಗೆ ತೆಗೆದುಕೊಂಡು ಮೊಕದ್ದಮೆಯನ್ನು ದಾಖಲಿಸಿಕೊಂಡು ವಿಚಾರಣೆಗೆ ಒಳಪಡಿಸಿತು. ಈ ಸಮಯದಲ್ಲಿ ಈ ಬಗ್ಗೆ ಸಮಗ್ರ ಅಧ್ಯಯನ ನಡೆಸಿ ವರದಿ ಸಲ್ಲಿಸಲು ಬೆಂಗಳೂರಿನಲ್ಲಿ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸಯನ್ಸ್‌ನಲ್ಲಿ ಸಿ.ಇ.ಎಸ್.ಆಗಿದ್ದ ಡಾ.ರಾಮನ್ ಸುಕುಮಾರ್ ಅವರ ಅಧ್ಯಕ್ಷತೆಯಲ್ಲಿ 'ಕರ್ನಾಟಕ ಎಲಿಫೆಂಟ್ ಟಾಸ್ಕ್ ಫೋರ್ಸ್" ಎಂಬ ಹೆಸರಿನಲ್ಲಿ 11 ಸದಸ್ಯರಿರುವ ಒಂದು ಸಮಿತಿಯನ್ನು ರಚಿಸಲಾಯಿತು. ಈ ಸಮಿತಿ ತನ್ನ ವರದಿಯನ್ನು ಕೊಟ್ಟಿತು. ಈ ವರದಿಯಲ್ಲಿ ಮಾಡಿರುವ ಶಿಫಾರಸುಗಳಲ್ಲಿ ಪ್ರತಿಯೊಂದರ ಬಗ್ಗೆ ರಾಜ್ಯ ಸರಕಾರ ತನ್ನ ನಿಲುವನ್ನು ವಿವರಿಸಿತು. ಈ ಮೊಕದ್ದಮೆಯ ತೀರ್ಪನ್ನು ನ್ಯಾಯಾಲಯ 2013ರ ಅಕ್ಟೋಬರ್ 8 ರಂದು ಕೊಟ್ಟಿತು.

ಮುಖ್ಯ ನಾಯಾಧೀಶ ಮಾನ್ಯ ಡಿ.ಹೆಚ್. ವಾಘೇಲ ಮತ್ತು ಶ್ರೀಮತಿಬಿ.ಎ.ನಾಗರತ್ನಮ್ಮರವರ ಮುಂದೆ ಕೊಡಗಿನವರಾದ ಸರ್ವಶ್ರೀ ಸಿ.ಎ.ಸುಬ್ಬಯ್ಯ, ಪಿ.ಎಸ್.ಗಣಪತಿ, ಎನ್.ಪಿ.ಕಾರ್ಯಪ್ಪ, ಬಿ.ಎಂ. ಚಂಗಪ್ಪ, ಇಮ್ಯಾನುವೆಲ್ ಟಿ. ರಾಮಪುರಂ, ಕೆ.ಪಿ.ಗಣಪತಿ ಮತ್ತು ಬಿದ್ದಾಡಂಡ ಜೀವನ್ ಮಂದಣ್ಣ ರವರು ಮಾನ್ಯ ದಿ.ಎ.ಕೆ. ಸುಬ್ಬಯ್ಯನವರ ಮೂಲಕ ಮಂಡಿಸಿದ್ದ ಮೊಕದ್ದಮೆಯ ತೀರ್ಪನ್ನು ಅದೇ ಅಕ್ಟೋಬರ್ 8 ರಂದೇ ನ್ಯಾಯಾಲಯ ಕೊಟ್ಟಿತು.

ತೀರ್ಪಿನಲ್ಲಿ 12 ನೇ ಅಂಶ ಅತ್ಯಂತ ಪ್ರಮುಖವಾದದ್ದಾಗಿದೆ.

"12)The statement of the Chief Wild-life Warden is recorded to the effect that an action plan would be put in place and timely action would be taken to ameliorate the dangers faced by the citizens on account of elephant menace or death caused by wild elephants. In case any representation is made by the citizens bringing to the notice of the chief wild-life warden or other designated officers about the elephant menace, then immediate steps must be taken under the provisions of the act.Therefore, the Chief Wild-Life Warden is directed to formulate an action plan to be taken in order to meet grave situation of elephant menace and to cigrculate the same to all the forest divisions in the state."

"ಒಂದು ಕ್ರಿಯಾ ಯೋಜನೆಯನ್ನು ಮಂಡಿಸಲಾಗುವುದು ಮತ್ತು ಆನೆಗಳ ಹಾವಳಿಯಿಂದ ಅಪಾಯಕ್ಕೊಳಗಾಗುವ ಜನರು ಎದುರಿಸಬೇಕಾದ ಅಪಾಯಗಳನ್ನು ಮತ್ತು ಸಾವನ್ನು ಇಲ್ಲದಾಗಿಸಲು ಸಕಾಲದಲ್ಲಿ ಕ್ರಮ ತೆಗದುಕೊಳ್ಳಲಾಗುವುದು" ಎಂಬ ಚೀಫ್ ವೈಲ್ಡ್ ಲೈಫ್ ವಾರ್ಡನ್‌ರ ಹೇಳಿಕೆಯನ್ನು ದಾಖಲಿಸಲಾಗಿದೆ.

ಆನೆಯಿಂದಾಗುತ್ತಿರುವ ಹಿಂಸೆಯ ಬಗ್ಗೆ ಚೀಫ್ ವೈಲ್ಡ್ ಲೈಫ್ ವಾರ್ಡನ್ ಅಥವಾ ತತ್ಸಮ ಅಧಿಕಾರಿಗಳಿಗೆ ಯಾರಾದರೂ ಪುಕಾರು ಕೊಟ್ಟರೆ ಕಾನೂನು ರೀತ್ಯಾ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಅದ್ದರಿಂದ ಆನೆ ಧಾಳಿಯಿಂದ ಉದ್ಭವಿಸಬಹುದಾದ ಗಂಭೀರ ಪರಿಸ್ಥಿತಿಯನ್ನು ನಿಭಾಯಿಸಲು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಒಂದು ಕ್ರಿಯಾಯೋಜನೆಯನ್ನು ಚೀಫ್ ವೈಲ್ಡ್ ಲೈಫ್ ವಾರ್ಡನ್ ಸಿದ್ಧಗೊಳಿಸಬೇಕು ಮತ್ತು ಅದನ್ನು ರಾಜ್ಯದ ಎಲ್ಲಾ ಅರಣ್ಯ ವಿಭಾಗಗಳಿಗೆ ಕಳುಹಿಸಿಕೊಡಬೇಕು."

ಕೊಡಗಿನ ಶ್ರೀ ಸಿ.ಎ.ಸುಬ್ಬಯ್ಯ ಮತ್ತಿತರರ ಮೊಕದ್ದಮೆಗೆ ಸಂಬಂಧಿಸಿದಂತೆ ನ್ಯಾಯಾಲಯ ಈ ಕೆಳಗಿನಂತೆ ಆದೇಶ ನೀಡಿತು.

In C.A.Subbaiah's case one of the two directions issued in their case is-

"b) The petitioners are at liberty to make a representation to the respondent-authorities including the Chief Wildlife Warden, bringing to their notice the specific grievances of the people of Kodagu District vis-à-vis man-elephant conflict. If such a representation is made,the respondent-authorities to consider the same in the light of the directions issued in W.P.No.14029/ 2008, the recommendations of the task force committee and in accordance with law and take all necessary steps to redress the grievances of the petitioners."

ಉಚ್ಛ ನ್ಯಾಯಾಲಯದ ತೀರ್ಪಿನಲ್ಲಿರುವ ಈ ಅಂಶವನ್ನು ಸರಕಾರ ಅನುಷ್ಠಾನಕ್ಕೆ ತಂದಿಲ್ಲ, ಮೇಲೆ ಹೇಳಿದ ರೀತಿಯ ಯಾವ ಯೋಜನೆಯನ್ನೂ ಸರಕಾರ ರೂಪಿಸಿಲ್ಲ. ಆದ್ದರಿಂದಲೇ ಇಂದಿಗೂ ವನ್ಯ ಜೀವಿಗಳಿಂದ ಧಾಳಿ ಮತ್ತು ನಾಶ ನಷ್ಟಗಳು ಉಂಟಾಗುತ್ತಿವೆ.

ಉಚ್ಛ ನ್ಯಾಯಾಲಯದ ತೀರ್ಪಿನಲ್ಲಿರುವ ಈ ಜನಪರ ಅಂಶಗಳಿಗನುಗುಣವಾಗಿ ಕ್ರಿಯಾಯೋಜನೆ ರೂಪಿಸಿ ಜನ ಸಮಕ್ಷಮ ಮಂಡಿಸಿ ಅವರೊಂದಿಗೆ ಚರ್ಚಿಸಿ ಅವರ ಅಭಿಪ್ರಾಯಗಳನ್ನೂ ಗಣನೆಗೆ ತೆಗೆದುಕೊಂಡು ಅದನ್ನು ಅಂತಿಮಗೊಳಿಸಿ ಅದನ್ನು ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತರಬೇಕು.

ಈ ಯೋಜನೆಯ ರೂಪೀಕರಣಕ್ಕೆ ನಮ್ಮ ಜಿಲ್ಲೆಯ ಶಾಸಕರುಗಳು ಪ್ರಾಮಾಣಿಕವಾಗಿ ಶ್ರಮಿಸಬೇಕು. ಮತ್ತು ಕಸ್ತೂರಿರಂಗನ್ ಸಮಿತಿಯ ವರದಿಯನ್ನು ಕೇಂದ್ರ ಸರಕಾರ ತಿರಸ್ಕರಿಸಬೇಕು.

ಇದರೊಂದಿಗೆ ಸರಕಾರ ಈ ಕೆಳಗಿನ ಬೇಡಿಕೆಗಳನ್ನು ಈಡೇರಿಸಲು ಗಮನ ಕೊಡಬೇಕು.

1. ಕಾಡಾನೆ ಧಾಳಿಯಿಂದ ಮರಣಹೊಂದಿದವರ ಕುಟುಂಬಕ್ಕೆ 50 ಲಕ್ಷ ರೂ.ಪರಿಹಾರ ಕೊಡಬೇಕು ಮತ್ತು ಅಂತಹವರ ಕುಟುಂಬದವರಿಗೆ ಸರಕಾರೀ ಉದ್ಯೋಗ ಕೊಡಬೇಕು.
2. ಆನೆ ಧಾಳಿಯಿಂದ ಅಂಗವಿಕಲರಾದವರಿಗೆ 20 ಲಕ್ಷ ಪರಿಹಾರ ಕೊಡಬೇಕು.
3. ತೋಟಗಳಲ್ಲಿ ಕಾರ್ಮಿಕರು ಕೆಲಸ ಮಾಡುವ ಸಂದರ್ಭದಲ್ಲಿ ಅವರ ರಕ್ಷಣೆಗೆ ಅರಣ್ಯ ಇಲಾಖೆಯ ಗನ್ ಮ್ಯಾನ್‌ಗಳನ್ನು ನೇಮಿಸಬೇಕು.
4. ಆನೆ ಹಾವಳಿಯಿಂದ ಬಾಧಿತ ಪ್ರದೇಶಗಳಲ್ಲಿ ಶಾಲಾ ಮಕ್ಕಳನ್ನು ಶಾಲೆಗೆ ಕರೆದೊಯ್ಯಲು ಮನೆಗೆ ಮರಳಿ ಕರೆತರಲು ಅರಣ್ಯ ಇಲಾಖೆ ವಾಹನ ವ್ಯವಸ್ಥೆ ಮಾಡಬೇಕು.
5. ಆನೆ ಧಾಳಿಯಿಂದ ತೋಟಗಳಲ್ಲಿ ಕಾಫಿ ಗಿಡ ಹಾಳಾದರೆ ಸರಕಾರ ಒಂದು ಗಿಡಕ್ಕೆ 25,000 ರೂ. (ಇಪ್ಪತ್ತೈದು ಸಾವಿರ ರೂ.) ಪರಿಹಾರ ಕೊಡಬೇಕು. ಭತ್ತದ ಬೆಳೆ ಹಾಳಾದರೆ ಎಕರೆಯೊಂದಕ್ಕೆ 60,000 ರೂ. ಕೊಡಬೇಕು. ಬಾಳೆಯನ್ನು ನಾಶ ಮಾಡಿದರೆ ಒಂದು ಎಕರೆಗೆ 50,000 ರೂ ಕೊಡಬೇಕು. ಸಿಲ್ವರ್ ಮರಕ್ಕೆ 15,000 ರೂ., ತೆಂಗಿಗೆ 25,000 ರೂ., ಅಡಿಕೆಗೆ 15,000 ರೂ. ಕೊಡಬೇಕು.

ಮತ್ತು ಅರಣ್ಯ ಇಲಾಖೆಗೆ ಕೆಲಸಕ್ಕೆ ತೆಗೆದುಕೊಳ್ಳುವಾಗ ಕೊಡಗಿನವರನ್ನೇ ತೆಗೆದುಕೊಳ್ಳಬೇಕು, ಅನುಭವವಿಲ್ಲದವರನ್ನು ನೇಮಿಸುವುದರಿಂದ ಪ್ರಯೋಜನವಿರುವುದಿಲ್ಲ.

ರಾಜ್ಯ ಸರಕಾರ ಹುಲಿಗಳನ್ನು ಹಿಡಿಯಲು ತಕ್ಷಣವೇ ಪರಿಣಾಮಕಾರಿಯಾದ ಕ್ರಮಗಳನ್ನು ತೆಗೆದುಕೊಳ್ಳುವುದರೊಂದಿಗೇ ವನ್ಯ ಮೃಗಗಳ ನಿರಂತರ ಧಾಳಿಯಿಂದ ಕೊಡಗಿನ ರೈತರನ್ನು ರಕ್ಷಿಸಲು ನ್ಯಾಯಾಲಯದ ತೀರ್ಪಿನ ಮೇಲುದ್ಧರಿಸಿದ ಅಂಶವನ್ನು ಅನುಷ್ಠಾನಕ್ಕೆ ತರುವ ನಿಟ್ಟಿನಲ್ಲಿ ಜನರ ಸಕ್ರಿಯ ಸಹಾಯದೊಂದಿಗೆ ಕ್ರಿಯಾ ಯೋಜನೆ ರೂಪಿಸಿ ಅನುಷ್ಠಾನಕ್ಕೆ ತರಬೇಕು.

ಈ ಸಮಸ್ಯೆಯ ಬಗ್ಗೆ ಮಲೆನಾಡಿನಲ್ಲಿ ವ್ಯಾಪಕ ಆಕ್ರೋಶ ಬೆಳೆಯುತ್ತಿದೆ. ಸರಕಾರ ಇದರತ್ತ ಗಮನ ಕೊಡದೇ ಜನರ ಗಮನವನ್ನು ಬೇರೆಡೆಗೆ ತಿರುಗಿಸಲು ಯತ್ನಿಸುತ್ತಿದೆ. ಇದರ ಸಮಸ್ಯೆಯ ಬಗ್ಗೆ ವ್ಯಾಪಕ ಜನರ ಚಳುವಳಿ ಬೆಳೆದು ಬರಬೇಕು. ■



ಚುನಾವಣಾ ಆಯುಕ್ತರ ನೇಮಕಕ್ಕೆ ಇದೆಂತಾ ಮೌಲ್ಯಮಾಪನ...ಏಕೆ ಈ ಮಿಂಚಿನ ಓಟ?

ಇದು ಅಮೃತ ಕಾಲ

–ಮೋದಿ ಸರಕಾರಕ್ಕೆ ಸುಪ್ರಿಂ ಕೋರ್ಟ್ ತರಾಟೆ

ಚುನಾವಣಾ ಆಯುಕ್ತರ ಹುದ್ದೆ ಮೇ ತಿಂಗಳಿಂದ ನವಂಬರ್ 18ರ ವರೆಗೆ ಖಾಲಿಯಿತ್ತು.... ಈಗ ಅತ್ಯಂತ ಕಡಿಮೆ ಅವಧಿಯಲ್ಲಿ ಎಲ್ಲವನ್ನೂ ಮಾಡಬೇಕು ಎಂದು ಸರಕಾರಕ್ಕೆ ಅನ್ನಿಸಿದ್ದು ಏಕೆ? ..ಈ ಸೂಪರ್ ಫಾಸ್ಟ್ ವ್ಯವಸ್ಥೆ ಏಕೆ ಅಗತ್ಯವೆನಿಸಿತು?...ಅದೇ ದಿನ ನೋಟಿಫಿಕೇಷನ್, ಅದೇ ದಿನ ಅರ್ಜಿ, ಅದೇ ದಿನ ಸ್ವೀಕಾರ ಅದೇ ದಿನ ನೇಮಕ. ಸಂಬಂಧಪಟ್ಟ ಕಡತ 24 ಗಂಟೆಗಳೂ ಚಲಿಸಲಿಲ್ಲ..ನಿಜಕ್ಕೂ ಮಿಂಚಿನ ಓಟ. ಯಾವ ರೀತಿಯ ಮೌಲ್ಯಮಾಪನ ಇತ್ತು? – ಇದು ಸಂಸತ್ತಿನಲ್ಲಿ ಪ್ರತಿಪಕ್ಷದ ಸದಸ್ಯರೊಬ್ಬರು ಸರಕಾರಕ್ಕೆ ಕೇಳಿದ ಪ್ರಶ್ನೆಯಲ್ಲ. ಸುಪ್ರಿಂ ಕೋರ್ಟಿನ ಸಂವಿಧಾನ ಪೀಠ ಕೇಂದ್ರ ಸರಕಾರದ ಅಟಾರ್ನಿ ಜನರಲ್‌ಗೆ ಕೇಳಿದ ಪ್ರಶ್ನೆ.

"ನವಂಬರ್ 18 ರಂದು ನಾವು ವಿಚಾರಣೆ ನಡೆಸುತ್ತೇವೆ. ಈ ಕಡತ ಅದೇ ದಿನ ಚಲಿಸುತ್ತದೆ. ಕಾನೂನು ಮಂತ್ರಿಗಳು ಶಾರ್ಟ್‌ಲಿಸ್ಟ್ ಮಾಡಿದ ನಾಲ್ಕು ಹೆಸರುಗಳನ್ನು ಕಳಿಸುತ್ತಾರೆ. ನಂತರ ಪ್ರಧಾನ ಮಂತ್ರಿಗಳು ಬರುತ್ತಾರೆ, ಅದೇ ದಿನ ಅವರ ಹೆಸರನ್ನು ಶಿಫಾರಸು ಮಾಡುತ್ತಾರೆ. ಇಂತಹ ತರಾತುರಿ ಏಕೆ?" ಎಂದು ನ್ಯಾಯಮೂರ್ತಿಗಳು ಪ್ರಶ್ನಿಸಿದ್ದಾರೆ.

ಹಾಗಾದ್ರೆ ತ್ವರಿತವಾಗಿ ನೇಮಕ ಮಾಡುವುದು ತಪ್ಪೇ ಎಂದು ದೇಶದ ಅಟಾರ್ನಿ ಜನರಲ್(ಮುಗ್ಧರಾಗಿ?) ಕೇಳಿದರಂತೆ. ಸ್ವಯಂ ನಿವೃತ್ತಿಯ ಮರುದಿನವೇ ಚುನಾವಣಾ ಆಯುಕ್ತರಾಗಿ ನೇಮಕ–ಹೀಗೆ ನಡೆಯುತ್ತದೆಯೇ ಎಂದು ನ್ಯಾಯಮೂರ್ತಿಗಳು ದೇಶದ ಅಟಾರ್ನಿ ಜನರಲ್‌ರವರನ್ನು ಕೇಳಬೇಕಾಗಿ ಬಂತು! ಬಹುಶಃ ಅಮೃತ ಕಾಲದಲ್ಲಿ ಹೀಗೆಯೇ ಏನು ಎಂದು ಕೇಳಿದ್ದರೆ ಇನ್ನೂ ಸೂಕ್ತವಾಗಿರುತ್ತಿತ್ತೋ ಏನೋ!


ಕೆಲವೇ ದಿನಗಳ ಹಿಂದೆ ದೇಶದ ಮತದಾರರು ಮುಖ್ಯ ಚುನಾವಣಾ ಆಯುಕ್ತರನ್ನೂ ಹೀಗೇ ಕೇಳಬೇಕಾದ ಸಂದರ್ಭ ಬಂದಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಡಿಸೆಂಬರ್ 2022ರಲ್ಲಿ ನಡೆಯಬೇಕಾಗಿರುವ ಎರಡು ರಾಜ್ಯಗಳ ವಿಧಾನಸಭೆ ಚುನಾವಣೆಗಳ ವೇಳಾಪಟ್ಟಿಯನ್ನು ಅಕ್ಟೋಬರ್ 14ರಂದು ಪ್ರಕಟಿಸುವುದಾಗಿ ವರದಿಯಾಗಿತ್ತು. ಆದರೆ ಅಂದು ಮುಖ್ಯ ಚುನಾವಣಾ ಆಯುಕ್ತರು ಹಿಮಾಚಲ ಪ್ರದೇಶದ ಚುನಾವಣಾ ವೇಳಾಪಟ್ಟಿಯನ್ನಷ್ಟೇ ಪ್ರಕಟಿಸಿದರು. ಗುಜರಾತಿನ ವೇಳಾಪಟ್ಟಿಯನ್ನು ಪ್ರಕಟಿಸಿದ್ದು 20 ದಿನಗಳ ನಂತರವೇ. ಸಹಜವಾಗಿಯೇ ಗುಜರಾತಿನಲ್ಲಿ ಮತದಾನ ಪೂರ್ಣಗೊಳ್ಳದೆ ಹಿಮಾಚಲ ಪ್ರದೇಶದ ಫಲಿತಾಂಶ ಪ್ರಕಟಿಸುವಂತಿಲ್ಲ. ಆದ್ದರಿಂದ ಎರಡೂ ಚುನಾವಣೆಗಳ ಮತಗಣನೆ ಡಿ.8 ರಂದೇ ನಡೆಯಲಿದೆ. ಹೀಗಿರುವಾಗ ಈ 20 ದಿನಗಳ ಅಂತರ ಏಕೆ ಬಂತು ಎಂಬುದೇ ಆ ಪ್ರಶ್ನೆ. ನಿಜ, ಅದು ಅಮೃತ ಕಾಲದಲ್ಲಿ ಅಪ್ರಸ್ತುತವಾದ ಪ್ರಶ್ನೆಯಾಗಿತ್ತು. ಅಲ್ಲದೆ ಆ ಇಪ್ಪತ್ತು ದಿನಗಳಲ್ಲೇ 7000 ಕೋಟಿ ರೂ.ಗಳ ಉದ್ಘಾಟನೆಗಳ ಉತ್ಸವದಲ್ಲಿ ಇದಕ್ಕೆ ಉತ್ತರವೂ ಸಿಕ್ಕಿದೆ ಎಂಬುದು ಬೇರೆ ಮಾತು.

ಈ ಹಿನ್ನೆಲೆಯಲ್ಲಿ ಚುನಾವಣಾ ಆಯೋಗದ ಕಾರ್ಯನಿರ್ವಹಣೆಯ ಪ್ರಶ್ನೆ ಎದ್ದು ಬಂದಿದೆ. ಚುನಾವಣಾ ಆಯುಕ್ತರ ನೇಮಕ ಬಹಳ ಗಂಭೀರ ವಿಚಾರ, ಅವರ ನೇಮಕ ಪಾರದರ್ಶಕವಾಗಿರಬೇಕು, ಅವರ ಕಾರ್ಯನಿರ್ವಹಣೆಯಲ್ಲಿ ಸ್ವಾತಂತ್ರ್ಯವನ್ನು ಖಚಿತಪಡಿಸಬೇಕು ಎನ್ನುವ 2021ರ ಅರ್ಜಿಗಳ ವಿಚಾರಣೆಯನ್ನು ಸಂವಿಧಾನ ಪೀಠ ಎತ್ತಿಕೊಂಡ ಮರುದಿನವೇ ಆರು ತಿಂಗಳಿಂದ ಖಾಲಿ ಬಿಟ್ಟಿದ್ದ ಚುನಾವಣಾ ಆಯುಕ್ತರ ಹುದ್ದೆಗೆ ಕೇಂದ್ರ ಸರಕಾರ ತರಾತುರಿಯಿಂದ ಹಿಂದಿನ ದಿನವಷ್ಟೇ, ಸ್ವಯಂ ನಿವೃತ್ತಿ ತೆಗೆದುಕೊಂಡ ಭಾರೀ ಕೈಗಾರಿಕಾ ಇಲಾಖೆಯ ಕಾರ್ಯದರ್ಶಿ ಅರುಣ್ ಗೋಯಲ್ ರನ್ನು ನೇಮಿಸಿತು.. ಅವರು ತಮ್ಮ ಹುದ್ದೆಯಿಂದ ಮುಂದಿನ ತಿಂಗಳೇ ನಿವೃತ್ತರಾಗಬೇಕಿತ್ತು ಎಂಬದೂ ಗಮನಾರ್ಹ.

ಇದನ್ನು ಸಂವಿಧಾನ ಪೀಠದ ಗಮನಕ್ಕೆ ತಂದಾಗ ಪೀಠ ಅವರ ನೇಮಕ ಕುರಿತ ಕಡತವನ್ನು ತನಗೆ ಸಲ್ಲಿಸಬೇಕು ಎಂದು ನ್ಯಾಯಪೀಠ ಸರಕಾರಕ್ಕೆ ಹೇಳಿತು. ಅದನ್ನು ಪರಿಶೀಲಿಸಿದ ನಂತರ ನ್ಯಾಯಪೀಠ ಈ ನೇಮಕದ 'ಮಿಂಚಿನ ವೇಗ'ವನ್ನು ಖಾರವಾಗಿ ಪ್ರಶ್ನಿಸಿದೆ.

ಸಂವಿಧಾನ ಚುನಾವಣಾ ಆಯುಕ್ತರುಗಳ ಅಧಿಕಾರಾವಧಿ 6 ವರ್ಷಗಳು ಎಂದು ನಿಗದಿಮಾಡಿದೆ. 1991ರಿಂದಲೂ ಇದನ್ನು ಪಾಲಿಸಿಕೊಂಡು ಬರಲಾಗಿದೆ. ಆದರೆ 2004ರಿಂದೀಚೆಗೆ ಯಾವ ಆಯುಕ್ತರ ಅಧಿಕಾರಾವಧಿಯೂ ಇದರ ಹತ್ತಿರಕ್ಕೂ ಬಂದಿಲ್ಲ ಎಂದು ಗಮನಿಸಿದ ನ್ಯಾಯ ಪೀಠ ಸರಕಾರಕ್ಕೆ ಇದು ತಿಳಿದಿರದ ವಿಷಯವೇನಲ್ಲ ಎಂದೂ ಟಿಪ್ಪಣಿ ಮಾಡಿತು. ಹಿಂದಿನ ಯುಪಿಎ ಸರಕಾರ 8 ವರ್ಷಗಳಲ್ಲಿ ಆರು ಮುಖ್ಯ ಚುನಾವಣಾ ಆಯುಕ್ತರನ್ನು ನೇಮಿಸಿದ್ದರೆ, ಪ್ರಸಕ್ತ ಸರಕಾರ ಏಳು ವರ್ಷಗಳಲ್ಲಿ ಎಂಟು ಮುಖ್ಯ ಚುನಾವಣಾ ಆಯುಕ್ತರನ್ನು ನೇಮಿಸಿದೆ. ಹೀಗೆ ಕಾರ್ಯಾವಧಿಯನ್ನು ವಿಪರೀತವಾಗಿ ಮೊಟಕುಗೊಳಿಸುವುದೆಂದರೆ ಚುನಾವಣಾ ಆಯುಕ್ತರ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಧ್ವಂಸ ಮಾಡಿದಂತೆಯೇ ಎಂದು ನ್ಯಾಯಪೀಠ ಅಭಿಪ್ರಾಯ ಪಟ್ಟಿತು.



ವ್ಯಂಗ್ಯಚಿತ್ರ: ಪಂಜು ಗಂಗೊಳ್ಳಿ, ಕನ್ನಡ ಒನ್ ನ್ಯೂಸ್

ಚುನಾವಣಾ ಆಯುಕ್ತರುಗಳು ಹೌದಪ್ಪಗಳು ಆಗಬಾರದು ಎಂದೂ ಈ ಸಂವಿಧಾನ ಪೀಠದಲ್ಲಿರುವ ನ್ಯಾಯಮೂರ್ತಿಗಳೊಬ್ಬರು ನೇರವಾಗಿಯೇ ಹೇಳಿದರೆಂದೂ ವರದಿಯಾಗಿದೆ.

ಬಹುಶಃ ವಿಶೇಷವಾಗಿ ಅಮೃತಕಾಲದಲ್ಲಿ ಇದು ಎಲ್ಲ ಸಾಂವಿಧಾನಿಕ ಹುದ್ದೆಗಳಿಗೆ ಅನ್ವಯವಾಗಬೇಕಾಗಿದೆ.

"ನಾನು ಮಾಡಿರುವ ಈ ಗುಜರಾತ"

–ಕೈಗಾರಿಕಾ ಸೂಚ್ಯಂಕಗಳಲ್ಲಿ ಮುಂದೆ, ಸಾಮಾಜಿಕ ಮತ್ತು ಪರಿಸರ ಸೂಚ್ಯಂಕಗಳಲ್ಲಿ ಹಿಂದೆ!

"ಆ ಗುಜರಾತ್ ಮೈ ಬನಾವ್ಯೂ ಛೆ" ಅಂದರೆ ಈ ಗುಜರಾತ್ ನಾನು ಮಾಡಿರುವಂತದ್ದು–ಇದು ಈ ಬಾರಿಯ ಗುಜರಾತ್ ವಿಧಾನಸಭಾ ಚುನಾವಣೆಗಳಿಗೆ ನರೇಂದ್ರ ಮೋದಿಯವರು ಕೊಟ್ಟಿರುವ ಘೋಷಣೆಯಂತೆ. ಅವರು ಒಂದು ಪರಿಶಿಷ್ಟ ಬುಡಕಟ್ಟಿಗೆ ಮೀಸಲಾದ ವಿಧಾನಸಭಾ ಕ್ಷೇತ್ರದಿಂದ ಬಿಜೆಪಿಯ ಪ್ರಚಾರವನ್ನು ಆರಂಭಿಸುತ್ತ ಈ ಘೋಷಣೆಯನ್ನು ನೀಡಿದರು ಎಂದು ವರದಿಯಾಗಿದೆ. ಈ ನಡುವೆ ಗುಜರಾತಿನ 'ಅಭಿವೃದ್ಧಿ'ಯ ಹಲವಾರು ಅಂಶಗಳು ಬೆಳಕಿಗೆ ಬರುತ್ತಿವೆ.

ಮೊದಲನೆಯದಾಗಿ ಅಂಕಿ–ಅಂಶಗಳು.

ತಲಾ ರಾಜ್ಯ ಆಂತರಿಕ ಉತ್ಪನ್ನ(ಎನ್‌ಎಸ್‌ಡಿಪಿ)ದಲ್ಲಿ ಇದು 27 ರಾಜ್ಯಗಳಲ್ಲಿ 6ನೇ ಸ್ಥಾನದಲ್ಲಿದೆ, ಮತ್ತು ಕೈಗಾರಿಕಾ ಮೌಲ್ಯ ಸೇರ್ಪಡೆಯ ಶೇಕಡಾವಾರಿನಲ್ಲಿ 30ರಲ್ಲಿ 4ನೇ ಸ್ಥಾನದಲ್ಲಿದೆ ಮತ್ತು ಕೈಗಾರಿಕಾ ಉತ್ಪಾದನೆಯಲ್ಲಿ 2ನೇ ಸ್ಥಾನದಲ್ಲಿದೆ. ಆದರೆ, ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ 30ರಲ್ಲಿ 16ನೇ ಸ್ಥಾನ ಮತ್ತು ಸುಮಾರಾಗಿ ಎಲ್ಲ ಸಾಮಾಜಿಕ ಸೂಚ್ಯಂಕಗಳಲ್ಲಿ ಅದರ ಸ್ಥಾನ 30 ರಾಜ್ಯಗಳಲ್ಲಿ 14 ರಿಂದ 29 ರ ನಡುವೆ ಇದೆ. (ದಿ ಹಿಂದು, ನವಂಬರ್ 14)

ಶಾಲೆಗೆ ಹೋದ ಮಹಿಳೆಯರ ಪ್ರಮಾಣ(30ರಲ್ಲಿ 19ನೇ ಸ್ಥಾನ), 18 ವರ್ಷದ ಮೊದಲು ಮದುವೆಯಾದ ಮಹಿಳೆಯರ ಪ್ರಮಾಣ(20), ಹಸುಳೆಗಳ ಮರಣ ದರ(19), ಮಕ್ಕಳ ಕುಂಠಿತ ಬೆಳವಣಿಗೆ(26), ಮಕ್ಕಳಲ್ಲಿ ಕುಪೋಷಣೆ(29), ಕಡಿಮೆ ತೂಕದ ಮಕ್ಕಳು(29), ಆರೋಗ್ಯವಿಮೆ ಹೊಂದಿರುವವರು(14) ಮತ್ತು ಉತ್ತಮಪಡಿಸಿದ ನೈರ್ಮಲ್ಯ ಸೌಕರ್ಯ ಬಳಸುವವರು(18).

ಉನ್ನತ ಶಿಕ್ಷಣದಲ್ಲಿ ದಾಖಲಾತಿ ಅನುಪಾತದಲ್ಲಿ 30ರಲ್ಲಿ 23 ನೇಸ್ಥಾನ,


ಪ್ರಾಥಮಿಕ ಶಿಕ್ಷಣದಲ್ಲಿ 21, ಉನ್ನತ ಮಾಧ್ಯಮಿಕ ಮಟ್ಟದಲ್ಲಿ 24 ಮತ್ತು ಮಾಧ್ಯಮಿಕ ಮಟ್ಟದಲ್ಲಿ ಶಾಲೆ ಬಿಡುವವರ ಪ್ರಮಾಣದಲ್ಲಿಯೂ 24.

ಗಮನಾರ್ಹ ಸಂಗತಿಯೆಂದರೆ ಸಾಮಾಜಿಕ ಸೂಚಕಗಳಲ್ಲಿ ಸುಧಾರಣೆ ಕಾಣುತ್ತಿಲ್ಲ, ಭಾರತದ ಇತರ ರಾಜ್ಯಗಳ ಹೋಲಿಕೆಯಲ್ಲಂತೂ 2005–06ಕ್ಕೆ ಹೋಲಿಸಿದರೆ 2019–20ರಲ್ಲಿ ಪರಿಸ್ಥಿತಿ ಇನ್ನಷ್ಟು ಕೆಟ್ಟಿದೆ.

ಪರಿಸರ ಸಂಬಂಧಿ ಸೂಚ್ಯಂಕಗಳಲ್ಲಂತೂ ಈ ಮಾದರಿ ರಾಜ್ಯದ ಸ್ಥಾನ 30ರಲ್ಲಿ 24ರಿಂದ 28ರ ನಡುವೆಯೇ ಇದೆ.

ಇಲ್ಲಿ ಇದಕ್ಕೆಲ್ಲ ಅದು ಕಾಂಗ್ರೆಸನ್ನು ಅಥವಾ ನೆಹರೂರವರನ್ನು ದೂರುವಂತಿಲ್ಲ, ಏಕೆಂದರೆ 1995ರಿಂದ ಸತತವಾಗಿ ಆರು ಚುನಾವಣೆಗಳಲ್ಲಿ ಬಹುಮತ ಪಡೆದು ಸರಕಾರ ರಚಿಸಿರುವುದು ಬಿಜೆಪಿಯೇ.

ಆದರೂ ಸುಮಾರು ಮೂರು ದಶಕಗಳ ಆಳ್ವಿಕೆಯ ನಂತರವೂ ದೇಶದ ಪ್ರಧಾನಿ ಮತ್ತು ಗೃಹಮಂತ್ರಿಗಳೇ ಈಗಲೂ ಮುಖ್ಯ ಪ್ರಚಾರಕರು ಎಂಬುದು ಪರಿಸ್ಥಿತಿ ಸಂತೋಷಜನಕವಾಗಿಲ್ಲ ಎಂಬುದನ್ನು ತೋರಿಸುತ್ತದೆ ಎನ್ನುತ್ತಾರೆ ರಾಜಕೀಯ ವೀಕ್ಷಕರು. ಈ ಬಾರಿಯಂತೂ ಪ್ರಧಾನಿಗಳು ಪ್ರಚಾರ ನಡೆಸುವ ಕೈಗಾರಿಕಾ ಪ್ರದೇಶಗಳಲ್ಲಿ ಇರುವ ಕೈಗಾರಿಕಾ ಘಟಕಗಳಿಗೆ ಕಾರ್ಮಿಕ ಇಲಾಖೆಯಿಂದ ಅವರ ಕಾರ್ಮಿಕರು ಮತದಾನದಲ್ಲಿ ಭಾಗವಹಿಸುವಂತೆ ಮಾಡಲು ಕರೆಗಳು ಹೋಗಿವೆಯಂತೆ. ರಾಜ್ಯ ಸಾರಿಗೆಯ ಬಸ್ ಡಿಪೋಗಳಲ್ಲಿ ಪ್ರಧಾನಿಗಳ ಸಭೆಯಿಂದಾಗಿ ಎಂದಿನ ರೂಟ್‌ಗಳಲ್ಲಿ ಬಸ್ಸುಗಳು ಇರುವುದಿಲ್ಲ ಎಂದು ಬೋರ್ಡುಗಳು ಕಾಣುತ್ತಿವೆಯಂತೆ.



ವ್ಯಂಗ್ಯಚಿತ್ರ: ಸತೀಶ ಆಚಾರ್ಯ, ಮೊಲಿಟಿಕ್ಸ್.ಇನ್


ಮೋದಿಯವರ ಪ್ರತಿಷ್ಠೆಯ ಮತ್ತು ಪ್ರಮುಖ ಪ್ರತಿಸ್ಪರ್ಧಿ ಕಾಂಗ್ರೆಸಿನ ಮುಂದುವರೆಯುತ್ತಿರುವ ದೌರ್ಬಲ್ಯಗಳ ಹೊರತಾಗಿಯೂ 2002ರಿಂದ ಬಿಜೆಪಿಯ ಸೀಟುಗಳ ಸಂಖ್ಯೆಯಲ್ಲಿ ಸತತ ಇಳಿಕೆ ಕಂಡು ಬಂದಿರುವುದು ಮತ್ತೊಂದು ಗಮನಾರ್ಹ ಸಂಗತಿ. 2002ರ ಕೋಮು ಹತ್ಯಾಕಾಂಡದ ಹಿನ್ನೆಲೆಯಲ್ಲಿ ನಡೆದ ಚುನಾವಣೆಗಳಲ್ಲಿ ಬಿಜೆಪಿಗೆ 182ರಲ್ಲಿ 127 ಸೀಟುಗಳು ದೊರೆತಿದ್ದವು. ನಂತರ 2007ರಲ್ಲಿ 117, 2012ರಲ್ಲಿ 115ಕ್ಕೆ ಮತ್ತು 2017ರಲ್ಲಂತೂ 99ಕ್ಕೆ ಇಳಿಯಿತು. ನಿಜ, ನಂತರ ನಡೆದ ಲೋಕಸಭಾ ಚುನಾವಣೆಗಳಲ್ಲಿ ಎಲ್ಲ ಸ್ಥಾನಗಳಲ್ಲೂ ಅದೇ ಗೆದ್ದಿತು.




ವ್ಯಂಗ್ಯಚಿತ್ರ: ಸಜಿತ್‌ಕುಮಾರ್, ಡೆಕ್ಕನ್ ಹೆರಾಲ್ಡ್

ಮತ್ತೊಂದು ಉದ್ಯೋಗ ಮೇಳ

ಗುಜರಾತಿನಲ್ಲಿ ಮಾದರಿ ನೀತಿ ಸಂಹಿತೆ ಜಾರಿಯಾದ ಮೇಲೆ ನವಂಬರ್ 22ರಂದು ಪ್ರಧಾನ ಮಂತ್ರಿಗಳು ದಿಲ್ಲಿಯಿಂದ ಇನ್ನೊಂದು 'ರೋಜ್‌ಗಾರ್ ಮೇಲಾ'ದಲ್ಲಿ 71000 ನೇಮಕಾತಿ ಪತ್ರಗಳನ್ನು ವೀಡಿಯೋ ಕಾನ್ಫರೆನ್ಸ್ ಮೂಲಕ ಹಂಚಿದ್ದಾರೆ. ಇದಕ್ಕೆ ಮೊದಲು ಅಕ್ಟೋಬರಿನಲ್ಲಿ 75 ಸಾವಿರ ನೇಮಕಾತಿ ಪತ್ರಗಳನ್ನು ಹಂಚಿದ್ದರು.



ಸಟ್ಟಾಕೋರರ ಖಯಾಲಿ–ಬಡಾಯಿಗಳಿಗೆ ದುಡಿಯುವ ಜನರ ಬದುಕುಗಳು ಬಲಿ



ನವ ಉದಾರವಾದಿ ಬಂಡವಾಳಶಾಹಿಯ ಒಂದು ವಿಶಿಷ್ಟ ಲಕ್ಷಣವೆಂದರೆ ಬಹುಪಾಲು ದುಡಿಯುವ ಜನಸಮೂಹಗಳ ಜೀವನ ಪರಿಸ್ಥಿತಿಗಳನ್ನು ಹಿಡಿಯಷ್ಟು ಹಣಕಾಸು ಸಟ್ಟಾಕೋರರ ಖಯಾಲಿಗಳು ಮತ್ತು ಬಡಾಯಿಗಳು ನಿರ್ಧರಿಸುತ್ತವೆ. ಹಣದುಬ್ಬರದ ಏರುಗತಿ ಮತ್ತು ತದನಂತರದ ಪರಿಸ್ಥಿತಿಗಳು ಈ ಸಟ್ಟಾಕೋರರಲ್ಲಿ ಉಂಟು ಮಾಡುವ ಕಳವಳಗಳು ತೃತೀಯ ಜಗತ್ತಿನ ದುಡಿಯುವ ಜನರಿಗೆ ತೀವ್ರ ಸಂಕಷ್ಟಗಳನ್ನು ತರುತ್ತವೆ. ಈ ದೇಶಗಳ ಪಾವತಿಶೇಷದ ತೊಂದರೆಗಳಿಂದಾಗಿ ಈ ದೇಶಗಳ ಮೇಲೆ ಕರಾಳ ಮಿತವ್ಯಯದ ಕ್ರಮಗಳನ್ನು ಹೇರಲಾಗುತ್ತದೆ. ಇದೀಗ ನವ ಉದಾರವಾದದ ಉಬ್ಬರದಿಂದ ಯಾವುದೇ ಪ್ರಯೋಜನಗಳನ್ನು ಪಡೆಯದ ಜನರೇ ಅದರ ಅವನತಿಯ ಬಲಿಪಶುಗಳಾಗುವ ಕಠೋರ ವ್ಯಂಗ್ಯ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ. ನಾಗರಾಜ

ಪ್ರಸ್ತುತ ವಿಶ್ವ ಆರ್ಥಿಕ ಪರಿಸ್ಥಿತಿಯ ಎರಡು ಲಕ್ಷಣಗಳನ್ನು ಕಾಣಬಹುದು. ಅವು ಪ್ರಸ್ತುತ ಪರಿಸ್ಥಿತಿಯನ್ನು ನಿರೂಪಿಸುವುದರೊಂದಿಗೆ ಭವಿಷ್ಯದ ಮುನ್ಸೂಚನೆಯನ್ನೂ ಕೊಡುತ್ತವೆ. ಇವುಗಳಲ್ಲಿ ಮೊದಲನೆಯದು, ವ್ಯಾಪಕವಾದ ಎಡೆಬಿಡದ ಹಣದುಬ್ಬರಕ್ಕೆ ಪ್ರತಿಕ್ರಿಯೆಯಾಗಿ ವಿಶ್ವಾದ್ಯಂತ ಬಡ್ಡಿದರಗಳಲ್ಲಿ ಹೆಚ್ಚಳವಾಗಿರುವುದು. ಈ ಬಗ್ಗೆ ಬಹಳಷ್ಟು ಚರ್ಚೆ ನಡೆದಿದೆ. ಇದು ಖಂಡಿತವಾಗಿಯೂ ಹಿಂಜರಿತ ಮತ್ತು ನಿರುದ್ಯೋಗವನ್ನು ಉಂಟುಮಾಡುತ್ತದೆ, ಹಾಗಾಗುವುದಿಲ್ಲ ಎಂದು ಎಷ್ಟೇ ಹೇಳಿಕೊಂಡರೂ, ಅದೇ ಅದರ ಹಿಂದಿನ ನಿಜವಾದ ಉದ್ದೇಶ ತಾನೇ?

ಹೆಚ್ಚೇನೂ ಚರ್ಚೆಯಾಗದ ಎರಡನೆಯ ಲಕ್ಷಣವೆಂದರೆ, ಪ್ರಪಂಚದ ಬೇರೆಡೆಗಳಿಂದ ಅಮೆರಿಕ ಸಂಯುಕ್ತ ಸಂಸ್ಥಾನದತ್ತ ಹಣಕಾಸಿನ ಹೊರಹರಿವು; ವಾಸ್ತವಿಕವಾಗಿ ರಷ್ಯಾದ ರೂಬಲ್ ಬಿಟ್ಟು ಇತರೆಲ್ಲ ಕರೆನ್ಸಿಗಳಿಗೆ ಎದುರಾಗಿ ಡಾಲರ್ ಅನ್ನು ಬಲಪಡಿಸಲು ಕೊಡುಗೆ ನೀಡುತ್ತಿದೆ. ರೂಬಲ್ ಇದಕ್ಕೆ ಹೊರತಾಗಿರುವುದು ಒಂದು ವಿಡಂಬನೆಯೇ ಸರಿ. ಯೂರೋ ಮತ್ತು ಪೌಂಡ್–ಸ್ಟರ್ಲಿಂಗ್ ಸೇರಿದಂತೆ ಎಲ್ಲಾ ಪ್ರಮುಖ ಕರೆನ್ಸಿಗಳು ಡಾಲರ್ ಎದುರು ದುರ್ಬಲಗೊಳ್ಳುತ್ತಿವೆಯಾದರೂ, ವಿಶೇಷವಾಗಿ ನಮಗೆ ಇಲ್ಲಿ ಕಾಳಜಿ ಉಂಟುಮಾಡುವ ವಿಷಯವೆಂದರೆ ಮೂರನೇ ವಿಶ್ವದ ಕರೆನ್ಸಿಗಳು ದುರ್ಬಲಗೊಳ್ಳುತ್ತಿರುವುದು. ಇದರಲ್ಲಿ ರೂಪಾಯಿ ಒಂದು ಪ್ರಧಾನ ಉದಾಹರಣೆಯಾಗಿದೆ.

ಪ್ರಸಕ್ತ ಕ್ಯಾಲೆಂಡರ್ ವರ್ಷದಲ್ಲಿ ಅಂದಾಜು 200 ಶತಕೋಟಿ ಡಾಲರ್ ಈಗಾಗಲೇ ಭಾರತದಿಂದ ಹೊರಹೋಗಿದೆ, ಇದು ಭಾರತದ ವಿನಿಮಯ ಮೀಸಲುಗಳ ಮೂರನೇ ಒಂದು ಭಾಗವಾಗಿದೆ. ಈ ಮೀಸಲುಗಳಲ್ಲಿ 100 ಶತಕೋಟಿ ಡಾಲರಿಗೂ ಹೆಚ್ಚು ಮೊತ್ತ ಡಾಲರ್ ಎದುರು ರೂಪಾಯಿಯನ್ನು ಗಟ್ಟಿಗೊಳಿಸುವ ಭಾರತೀಯ ರಿಸರ್ವ್ ಬ್ಯಾಂಕ್‌ನ ಪ್ರಯತ್ನದಲ್ಲಿ 100 ಶತಕೋಟಿಯಷ್ಟು ಕಡಿಮೆಯಾಗಿದೆ. ಆದಾಗ್ಯೂ ರೂಪಾಯಿ ಮೌಲ್ಯವು ಸುಮಾರು 10ಶೇ.ದಷ್ಟು ಕುಸಿದಿದೆ.

ಬಡ್ಡಿದರಗಳು ಮತ್ತು ಹಣದ ಹರಿವು

ರಾಷ್ಟ್ರಗಳಾದ್ಯಂತ ಹಣಕಾಸಿನ ಹರಿವುಗಳನ್ನು ಪ್ರಾಥಮಿಕವಾಗಿ ಬಡ್ಡಿದರದ ವ್ಯತ್ಯಾಸಗಳು ನಿರ್ಧರಿಸುತ್ತವೆ ಎಂಬ ನಂಬಿಕೆ ಇದೆ, ಅಂದರೆ ಅಮೆರಿಕಾದ ಪ್ರಸ್ತುತ ಒಳಹರಿವು ಅದು ಇತರ ದೇಶಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ತನ್ನ ಬಡ್ಡಿದರಗಳನ್ನು ಹೆಚ್ಚಿಸಿದ ಪರಿಣಾಮವಾಗಿದೆ. ಇದರರ್ಥ ಇತರ ದೇಶಗಳು ತಮ್ಮ ಬಡ್ಡಿದರಗಳನ್ನು ಅಮೆರಿಕ ಮಾಡಿದಷ್ಟು ಹೆಚ್ಚಿಸಿದಾಗ, ಅವು ಇನ್ನು ಮುಂದೆ ಅಂತಹ ಬಂಡವಾಳದ ಹೊರಹರಿವುಗಳನ್ನು ಎದುರಿಸ ಬೇಕಾಗುವುದಿಲ್ಲ ಎಂದಾಗುತ್ತದೆ. ಆದರೆ ಇದು ನಿಜವಲ್ಲ. ಬಡ್ಡಿದರದ ವ್ಯತ್ಯಾಸಗಳು ನಿಸ್ಸಂದೇಹವಾಗಿ ಹಣಕಾಸಿನ ಹರಿವಿನ ಮೇಲೆ ಪರಿಣಾಮ ಬೀರುತ್ತವೆಯಾದರೂ, ಅಂತಹ ಹರಿವಿನ ಮೇಲೆ ಪ್ರಭಾವ ಬೀರುವ ಇನ್ನೂ ಹೆಚ್ಚು ಮೂಲಭೂತ ಅಂಶವಿದೆ. ಅದೆಂದರೆ, ಹಣಕಾಸುದಾರರ ನಡುವೆ ಭಾವೋನ್ಮಾದದ ಸ್ಥಿತಿ. ಅವರ ನಿರೀಕ್ಷೆಗಳು ಉತ್ಸಾಹಭರಿತವಾದಾಗ, ಅವರು ಅಂಚಿನಲ್ಲಿರುವ ದೇಶಗಳಿಗೆ ತೆರಳುತ್ತಾರೆ (ಎಲ್ಲಾ ಅಲ್ಲ, ಕೆಲವು ದೇಶಗಳಿಗೆ) ಆದರೆ ಅವರ ನಿರೀಕ್ಷೆಗಳು ಮಬ್ಬಾದಾಗ ಅವರು ತಮ್ಮ ನೆಲೆಯಾದ ಅಮೆರಿಕಾಗೆ ಮರಳುವುದಕ್ಕೆ ಆದ್ಯತೆ ನೀಡುತ್ತಾರೆ. ಇಲ್ಲಿ ಅವರ ಆನಂದಾತಿರೇಕ ಅಥವಾ ಖಿನ್ನತೆಯ ಮೇಲೆ ಪರಿಣಾಮ ಬೀರುವ ಒಂದು ನಿರ್ಣಾಯಕ ಅಂಶವೆಂದರೆ ಅಮೆರಿಕದ ಬಡ್ಡಿದರಗಳ ಮಟ್ಟ.

ಅಮೇರಿಕನ್ ಬಡ್ಡಿದರಗಳು ಕೆಳಮಟ್ಟದಲ್ಲಿರುವಾಗ, ಅದರಿಂದಾಗಿಯೇ ಸಂಪೂರ್ಣ ವ್ಯವಸ್ಥೆ ಅಗ್ಗದ ಹಣದ ಲಭ್ಯತೆಯಿಂದ ತುಂಬಿ ತುಳುಕುತ್ತದೆ, ಅದು ಲಾಭದಾಯಕ ಹೂಡಿಕೆಗಾಗಿ ಅವಕಾಶಗಳನ್ನು ಹುಡುಕುತ್ತಾ ಪ್ರಪಂಚದಾದ್ಯಂತ ಹೋಗುತ್ತದೆ; ಆದರೆ ಅಮೆರಿಕ ತನ್ನ ಬಡ್ಡಿದರಗಳನ್ನು ಹೆಚ್ಚಿಸಿದಾಗ, ಹಣದ ಹರಿವು ಕಠಿಣಗೊಳ್ಳುತ್ತದೆ ಮತ್ತು ವಿಶ್ವ ಆರ್ಥಿಕ ಹಿಂಜರಿತದ ಭಯ ಉಂಟಾಗುತ್ತದೆ. ಆಗ ಹಣಕಾಸು ತನ್ನ ಮೂಲ ನೆಲೆಗೆ ಹಿಂತಿರುಗುತ್ತದೆ. ಅಮೆರಿಕದ ಬಡ್ಡಿದರವು ಶೂನ್ಯಕ್ಕೆ ಹತ್ತಿರದಲ್ಲಿದೆ ಮತ್ತು ಭಾರತದಲ್ಲಿ ಶೇ,3 ರಷ್ಟಿರುತ್ತದೆ ಎಂದಿಟ್ಟುಕೊಳ್ಳೋಣ. ಭಾರತಕ್ಕೆ ಹಣಕಾಸಿನ ಹರಿವು, ಅಮೆರಿಕದ ಬಡ್ಡಿದರವು ಶೇ.6 ರ ಸಮೀಪ ಮತ್ತು ಭಾರತದ್ದು ಶೇ.9 ರ ಸಮೀಪವಿರುವಾಗ ಭಾರತಕ್ಕೆ ಬರುವ ಹಣಕಾಸಿನ ಹರಿವಿಗಿಂತ ಹೆಚ್ಚಿರುತ್ತದೆ. ಎರಡೂ ಸಂದರ್ಭಗಳಲ್ಲಿ ಬಡ್ಡಿದರಗಳ ವ್ಯತ್ಯಾಸವು ಒಂದೇ ಆಗಿದ್ದರೂ ಸಹ.

ಹಣಕಾಸು ವಲಯಗಳಲ್ಲಿ ವಿಶ್ವ ಆರ್ಥಿಕ ಹಿಂಜರಿತ ಉಂಟಾದರೆ ಏನಾಗಬಹುದು ಎಂಬಿತ್ಯಾದಿ ಯಾವುದೇ ಕಳವಳ, ಹಣಕಾಸನ್ನು ತನ್ನ ತವರು ನೆಲೆಯಾದ ಅಮೆರಿಕದತ್ತ ಅಟ್ಟುತ್ತದೆ ಎಂಬ ಅಂಶ 2008 ರ ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ಕಾಣಬಂತು. ಅಮೆರಿಕ ಆ ಬಿಕ್ಕಟ್ಟಿನ ಕೇಂದ್ರಬಿಂದುವಾಗಿತ್ತು, ಅದರ ಹಣಕಾಸಿನ ವ್ಯವಸ್ಥೆಯು "ವಿಷಕಾರಿ" ಸ್ವತ್ತುಗಳಿಂದ ತುಂಬಿತ್ತು, ಅಂದರೆ ಮರುಪಾವತಿಸಲು ಸಾಧ್ಯವಾಗದ ಸಾಲಗಾರರಿಗೆ ಕೊಡಮಾಡಿದ ಸಾಲಗಳನ್ನು ಹೊಂದಿತ್ತು. ಆದಾಗ್ಯೂ ಹಣಕಾಸು ಬಿಕ್ಕಟ್ಟು, ಅಮೆರಿಕದಿಂದ ಹೊರಕ್ಕೆ ಹಣಕಾಸು ಹರಿದು ಹೋಗಲು ಕಾರಣವಾಗುವ ಬದಲು, ತಕ್ಷಣವೇ ಜಗತ್ತಿನ ಎಲ್ಲೆಡೆಗಳಿಂದ ಹಣಕಾಸು ಮರಳಿ ಅಮೆರಿಕಾಗೆ ಹರಿದು ಹೋಗಲು ಕಾರಣವಾಯಿತು. ಭಾರತದಂತಹ ಯಾವುದೇ 'ವಿಷಕಾರಿ' ಆಸ್ತಿಗಳಿಗೆ ತೆರೆದುಕೊಂಡಿರದ ದೇಶಗಳಿಂದಲೂ ಹರಿದು ಹೋಯಿತು.

ವಿಶ್ವ ಬಂಡವಾಳಶಾಹಿಯ ಸಂಪೂರ್ಣವಾಗಿ ಹೊಸದಾದ ಹಂತ

ಅಮೆರಿಕದಲ್ಲಿ ಡಾಲರ್‌ಅನ್ನು ಬಲಪಡಿಸುವ, ಪ್ರಸ್ತುತ ಹಣಕಾಸಿನ ಒಳಹರಿವಿಗೆ ಪ್ರಧಾನ ಕಾರಣ ಸಹಜವಾಗಿಯೇ ಅಮೆರಿಕದ ಬಡ್ಡಿದರಗಳ ಏರಿಕೆಯಲ್ಲಿ ಅಡಗಿದೆ. ಆದರೆ ಈ ಏರಿಕೆಯು ಅಷ್ಟೊಂದು ಮುಖ್ಯವಾಗುವುದಿಲ್ಲ. ಏಕೆಂದರೆ ಇದು ಆರ್ಥಿಕ ನಿಯೋಜನೆಗಾಗಿ ಅಮೆರಿಕವನ್ನು ಹೆಚ್ಚು ಲಾಭದಾಯಕ ತಾಣವನ್ನಾಗಿ ಮಾಡುತ್ತದೆ; ಅದಕ್ಕಿಂತ ಮುಖ್ಯವಾದುದೆಂದರೆ, ಇದು ವಿಶ್ವ ಆರ್ಥಿಕಹಿಂಜರಿತದ ಅವಧಿಯ ಮುನ್ಸೂಚನೆಯಾಗಿರಬಹುದು ಎಂಬುದು ಹಣಕಾಸು ಬಂಡವಾಳವನ್ನು ಕಳವಳಕ್ಕೆ ಈಡು ಮಾಡುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ವಿಶ್ವ ಬಂಡವಾಳಶಾಹಿಯು ಸಂಪೂರ್ಣವಾಗಿ ಹೊಸ ಹಂತವೊಂದನ್ನು ಪ್ರವೇಶಿಸುತ್ತಿದೆ, ಇದರಲ್ಲಿ ಮೂರನೇ ವಿಶ್ವದ ಅರ್ಥವ್ಯವಸ್ಥೆಗಳು ತಮ್ಮ ಬಡ್ಡಿದರಗಳನ್ನು ಅಮೇರಿಕನ್ ದರಗಳ ಜೊತೆ–ಜೊತೆಯಲ್ಲಿ ಹೆಚ್ಚಿಸಿದರೂ ಸಹ, ಹಣಕಾಸಿನ ನಿರಂತರ ಹೊರಹರಿವನ್ನು ಕಾಣಬೇಕಾಗುತ್ತದೆ.

ಇದು ಸಮೀಪಿಸುತ್ತಿರುವ ಬಿಕ್ಕಟ್ಟು ಈ ದೇಶಗಳನ್ನು ಇನ್ನಷ್ಟು ತೀವ್ರವಾಗಿ ತಟ್ಟುವಂತೆ ಮಾಡುತ್ತದೆ. ಅವು ಏರಿದ ಆಂತರಿಕ ಮತ್ತು ವಿದೇಶಿ ಬಡ್ಡಿದರಗಳು ಉಂಟುಮಾಡುವ ಹಿಂಜರಿತದ ಪರಿಣಾಮಗಳಿಂದ ಬಳಲುತ್ತವೆಯಷ್ಟೇ ಅಲ್ಲ, ಅವರ ಸಾಲದ ಮರುಹೊಂದಿಕೆಯು ಹೆಚ್ಚು ದುಬಾರಿಯಾಗುತ್ತದೆ ಮತ್ತು ಪಾವತಿಶೇಷ(ಬ್ಯಾಲನ್ಸ್ ಆಫ್ ಪೇಮೆಂಟ್ಸ್)ದಲ್ಲಿ ಅವರ ಚಾಲ್ತಿ ಖಾತೆಯ ಕೊರತೆಯನ್ನು ತುಂಬುವುದು ಹೆಚ್ಚು ಕಷ್ಟಕರವಾಗುತ್ತದೆ. ಇವೆಲ್ಲವೂ ಈ ದೇಶಗಳು ಅನಿವಾರ್ಯವಾಗಿ 'ಸಹಾಯ' ಕೇಳಲು ಐಎಂಎಫ್ ಮತ್ತು ವಿಶ್ವಬ್ಯಾಂಕ್ ನಂತಹ ಅಂತರರಾಷ್ಟ್ರೀಯ ಹಣಕಾಸು ಬಂಡವಾಳದ ಕಾವಲುಭಟರ ಬಳಿಗೆ ಹೋಗುವಂತೆ ಮಾಡುತ್ತವೆ ಮತ್ತು ಅವರ ಕಠಿಣವಾದ "ಮಿತವ್ಯಯ" ಕ್ರಮಗಳಿಗೆ ಅವನ್ನು ಈಡು ಮಾಡುತ್ತವೆ.

ವಿಶ್ವ ಬಂಡವಾಳಶಾಹಿಯ ಈ ಹೊಸ ಹಂತವು ಭಾರತದಂತಹ, ಇತರ ಮೂರನೇ ವಿಶ್ವದ ದೇಶಗಳಂತೆ ವಿದೇಶಿ ಸಾಲದಾತರಿಗೆ ಹೆಚ್ಚಿನ ಮಟ್ಟದಲ್ಲಿ ಸಾಲಗ್ರಸ್ತವಾಗಿರದ ದೇಶಗಳನ್ನು ಕೂಡ ಪ್ರತಿಕೂಲವಾಗಿ ತಟ್ಟುತ್ತದೆ. ಭಾರತಕ್ಕೆ ಇಲ್ಲಿಯವರೆಗೆ ನವ ಉದಾರವಾದಿ ವ್ಯವಸ್ಥೆಯಲ್ಲಿ ತನ್ನ ಚಾಲ್ತಿಖಾತೆ ಕೊರತೆಯನ್ನು ನಿರ್ವಹಿಸಲು ಬಾಹ್ಯ ಹಣಕಾಸು ಸುಲಭವಾಗಿ ಲಭ್ಯವಾಗಿತ್ತು. "ಉದಾರೀಕರಣ"ವನ್ನು ಆರಂಭಿಸಿದ ತಕ್ಷಣದ ಅವಧಿಯಲ್ಲಿ ಇದು ಸಾಧ್ಯವಾದದ್ದು, ಅದುವರೆಗೆ ಹಣಕಾಸಿನ ಒಳಹರಿವಿಗೆ "ಮುಚ್ಚಿದ್ದ" ದೇಶದ ಅರ್ಥವ್ಯವಸ್ಥೆ ಜಾಗತೀಕರಣದೊಂದಿಗೆ ತೆರೆದುಕೊಂಡಾಗ ಅದು ಒದಗಿಸಿದ ವಿವಿಧ ಅವಕಾಶಗಳನ್ನು ಪಡೆಯಲು ಜಾಗತಿಕ ಹಣಕಾಸು ಆತುರದಿಂದಿತ್ತು ಎಂಬ ಕಾರಣದಿಂದಾಗಿ. ತರುವಾಯ, ಹಣಕಾಸು ಬಿಕ್ಕಟ್ಟಿನಿಂದ ಉಂಟಾದ ಆರ್ಥಿಕ ಹಿಂಜರಿತದಿಂದ ಚೇತರಿಸಿಕೊಳ್ಳಲು ಅಮೆರಿಕದ ಬಡ್ಡಿದರಗಳನ್ನು ಶೂನ್ಯಕ್ಕೆ ಇಳಿಸಿದಾಗ, ಹಣಕಾಸು, ಭಾರತ ಮತ್ತು ಇತರ ಮೂರನೇ ಪ್ರಪಂಚದ ದೇಶಗಳಿಗೆ, ಅವು ನೀಡುವ ಹೆಚ್ಚಿನ ಪ್ರತಿಫಲದಿಂದಾಗಿ ಹರಿದು ಬಂದದ್ದರಲ್ಲಿ ಆಶ್ಚರ್ಯವೇನಿಲ್ಲ.



ಇದರ ಪರಿಣಾಮವಾಗಿ, ಹಿಂದಿನ 'ನಿಯಂತ್ರಣ'ಗಳ ಅವಧಿಗೆ ಹೋಲಿಸಿದರೆ ಈ ಶತಮಾನದ ಆರಂಭದಲ್ಲಿ ಕಂಡ ಭಾರತದ ಜಿಡಿಪಿ ಬೆಳವಣಿಗೆಯ ದರಗಳಲ್ಲಿನ ಏರಿಕೆಯನ್ನು ಪಾವತಿ ಶೇಷದ ಕಡೆಯಿಂದ ಯಾವುದೇ ನಿರ್ಬಂಧಗಳು ಉಂಟಾಗದೆ ಉಳಿಸಿಕೊಳ್ಳಲು ಸಾಧ್ಯವಾಯಿತು. ವಾಸ್ತವವಾಗಿ 2002 ಮತ್ತು 2012 ರ ನಡುವೆ ಸುಮಾರು ಒಂದು ದಶಕದವರೆಗೆ, ದೇಶವು ಜಿಡಿಪಿ ಬೆಳವಣಿಗೆ ದರದಲ್ಲಿ ಅಭೂತಪೂರ್ವ ಏರಿಕೆಯನ್ನು ಅನುಭವಿಸುತ್ತಿದ್ದಾಗಲೂ ಡಾಲರ್‌ಗೆ ಹೋಲಿಸಿದರೆ ರೂಪಾಯಿಯ ವಿನಿಮಯ ಮೌಲ್ಯವು ಗಮನಾರ್ಹವಾಗಿ ಸ್ಥಿರವಾಗಿತ್ತು. ಈ ಏರಿಕೆಯು ದುಡಿಯುವಜನರ ಜೀವನ ಪರಿಸ್ಥಿತಿಗಳಲ್ಲಿ ಯಾವುದೇ ಸುಧಾರಣೆಯನ್ನು ತರಲಿಲ್ಲ ಎಂಬುದು ಬೇರೆ ಮಾತು. ಆದರೆ ಅದರ ಪರಿಣಾಮಗಳನ್ನು ಯಾವುದೇ ಪಾವತಿಶೇಷದ ತೊಂದರೆಗಳು ನಿರ್ಬಂಧಿಸಲಿಲ್ಲ. ವಾಸ್ತವವಾಗಿ, ಇದಕ್ಕೆ ವಿರುದ್ಧವಾಗಿ, ಚಾಲ್ತಿಖಾತೆ ಕೊರತೆಗೆ ಸಾಪೇಕ್ಷವಾಗಿ ಹಣಕಾಸಿನ ಒಳಹರಿವಿನ ಪ್ರಮಾಣವು ಎಷ್ಟೊಂದು ದೊಡ್ಡ ಪ್ರಮಾಣದಲ್ಲಿತ್ತೆಂದರೆ ರೂಪಾಯಿ ಮೌಲ್ಯ ಏರಿಕೆಯನ್ನು ತಡೆಯಲು ಭಾರತೀಯ ರಿಸರ್ವ್ ಬ್ಯಾಂಕ್ ದೇಶದ ವಿದೇಶಿ ವಿನಿಮಯ ಸಂಗ್ರಹಕ್ಕೆ ಸೇರಿಸಬೇಕಾಗಿ ಬಂತು. ಅಂತಹ ಮೌಲ್ಯವರ್ಧನೆಯು ಸಂಪೂರ್ಣವಾಗಿ ಅನಪೇಕ್ಷಿತವಾದ "ಸಾಲ–ಹಣಕಾಸಿನಿಂದ ವಿಕೈಗಾರಿಕೀಕರಣ" ವನ್ನು ಉಂಟುಮಾಡಬಹುದಾಗಿತ್ತು. ಅಂದರೆ, ವಿದೇಶಿ ಹಣಕಾಸುದಾರರಿಗೆ ದೇಶದ ಬಾಹ್ಯ ಋಣಭಾರವು ಹೆಚ್ಚುತ್ತಿರುವಂತೆಯೇ, ರೂಪಾಯಿ ಮೌಲ್ಯವರ್ಧನೆಯ ಕಾರಣದಿಂದಾಗಿ ದೇಶೀಯ ಉತ್ಪಾದಕರು ವಿದೇಶಿ ಪೂರೈಕೆದಾರರಿಂದ ಸ್ಪರ್ಧೆ ಎದುರಿಸಲಾಗದ ಸ್ಥಿತಿ ಉಂಟಾಗುತ್ತಿತ್ತು.

ನವ ಉದಾರವಾದದ ಆ ಹಂತ ಈಗ ಮುಗಿದಿದೆ. ದೇಶದೊಳಗೆ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಅಸಮಾನತೆಗಳ ಬೃಹತ್ ಬೆಳವಣಿಗೆಯಿಂದ ಉಂಟಾಗುವ ಬೇಡಿಕೆಯ ನಿರ್ಬಂಧದಿಂದಾಗಿ ಭಾರತವು ಇನ್ನು ಮುಂದೆ ಆ ಪ್ರಮಾಣದ ಜಿಡಿಪಿ ಬೆಳವಣಿಗೆಯನ್ನು ಅನುಭವಿಸುವುದಿಲ್ಲ; ಇದು ಈಗಾಗಲೇ ಸ್ವಲ್ಪ ಸಮಯದಿಂದ ಸ್ಪಷ್ಟವಾಗಿದೆ. ಆದರೆ ಅದಷ್ಟೇ ಅಲ್ಲ, ಈ ಜಿಡಿಪಿ ಬೆಳವಣಿಗೆಯ ಈ ಕಡಿಮೆ ದರವೂ ಸಹ ಬೇಡಿಕೆ–ನಿರ್ಬಂಧದ ಕಾರಣದಿಂದಾಗಿ ಪಾವತಿ ಶೇಷದ ತೊಂದರೆಗಳಿಂದಾಗಿ ಸುಸ್ಥಿರವಾಗಿರುವುದಿಲ್ಲ.

ಶ್ರೀಲಂಕಾದ ಜ್ವಲಂತ ಉದಾಹರಣೆ

ಪಾವತಿ ಶೇಷದ ತೊಂದರೆಗಳು ಎಂತಹ ಅಸಾಧಾರಣ ವೇಗದಿಂದ ಒಂದು ದೇಶವನ್ನು ಮೊಣಕಾಲೂರುವಂತೆ ಮಾಡಬಹುದು ಎಂಬುದಕ್ಕೆ ಭಾರತದ ನೆರೆಹೊರೆಯಲ್ಲಿಯೇ, ಶ್ರೀಲಂಕಾ ಒಂದು ಜ್ವಲಂತ ಉದಾಹರಣೆಯನ್ನು ನೀಡುತ್ತಿದೆ. ಇತ್ತೀಚೆಗಷ್ಟೇ ಕಡಿಮೆ ಆದಾಯದ ಸ್ಥಿತಿಯಿಂದ ಬಡ್ತಿ ಪಡೆದು "ಮಧ್ಯಮ ಆದಾಯದ ದೇಶ" ಎಂದು ಪರಿಗಣಿಸಲ್ಪಟ್ಟ ಅದರ ಅರ್ಥವ್ಯವಸ್ಥೆಯನ್ನು ಈಗ ಹೆಚ್ಚುತ್ತಿರುವ ವಿದೇಶಿ

ಪುಟ 14 ಕ್ಕೆ

ರಾಷ್ಟ್ರೀಯ ಶಿಕ್ಷಣ ನೀತಿಯ ನಿಜ ಉದ್ದೇಶವನ್ನು ಬಯಲಿಗೆ ತಂದಿರುವ ಯುಜಿಸಿ ಅಧ್ಯಕ್ಷರ 'ಪ್ರಜಾಪ್ರಭುತ್ವದ ತಾಯಿ' ಉಪನ್ಯಾಸ ನಿರ್ದೇಶನ

"ವರ್ಣಾಶ್ರಮ ಮತ್ತು ಜಾತಿ ಶ್ರೇಣೀಕರಣದ ವಾಸ್ತವತೆಯ ನಿರಾಕರಣೆ ಶೋಭೆ ತರುವಂತದ್ದಲ್ಲ"

ನವೆಂಬರ್ 26 ರಂದು ಸಂವಿಧಾನದ ದಿನದಂದು ಭಾರತವನ್ನು "ಪ್ರಜಾಪ್ರಭುತ್ವದ ತಾಯಿ" ಎಂದು ಆಚರಿಸಲು ಭಾರತೀಯ ತತ್ವಶಾಸ್ತ್ರದಲ್ಲಿ "ಆದರ್ಶ ರಾಜ" ಮುಂತಾದ ವಿಷಯಗಳ ಕುರಿತು, 'ಖಾಪ್ ಪಂಚಾಯತ್'ಗಳು ಮತ್ತು ಅವುಗಳ "ಪ್ರಜಾಪ್ರಭುತ್ವ ಸಂಪ್ರದಾಯಗಳು" ಕುರಿತಂತೆ ಉಪನ್ಯಾಸಗಳನ್ನು ಏರ್ಪಡಿಸಲು ತಮ್ಮ ರಾಜ್ಯಗಳಲ್ಲಿನ ವಿಶ್ವವಿದ್ಯಾನಿಲಯಗಳನ್ನು "ಪ್ರೋತ್ಸಾಹಿಸಲು" ಎಲ್ಲಾ ರಾಜ್ಯಪಾಲರಿಗೆ ಯುಜಿಸಿ ಅಧ್ಯಕ ಎಂ. ಜಗದೀಶ್ ಕುಮಾರ್ ಪತ್ರ ಬರೆದಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ವಿರೋಧಿಸಿದೆ. ಇದನ್ನು ಬಲವಾಗಿ ತಿರಸ್ಕರಿಸುವುದಾಗಿ ಹೇಳಿರುವ ಅದು ಈ ಸಲಹಾ–ನಿರ್ದೇಶನವನ್ನು ತಕ್ಷಣವೇ ಹಿಂಪಡೆಯಬೇಕು ಎಂದು ಆಗ್ರಹಿಸಿದೆ.

ಇದು ನಮ್ಮ ಸಂವಿಧಾನದ ಚೌಕಟ್ಟಿನ ನೇರ ಉಲ್ಲಂಘನೆಯಾಗಿದೆ. ಹಾಗೆಯೇ ಸಂಸತ್ತು ಜಾರಿಗೊಳಿಸಿದ ಯುಜಿಸಿ ಕಾಯಿದೆಯ ಶಾಸನಬದ್ಧ ನಿಬಂಧನೆಗಳನ್ನು ಕೂಡ ಇದು ಅತಿಕ್ರಮಿಸಿದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ. ಯುಜಿಸಿ ದೇಶಾದ್ಯಂತ 90 ವಿಶ್ವವಿದ್ಯಾಲಯಗಳಲ್ಲಿ 90 ಉಪನ್ಯಾಸಗಳನ್ನು ಯೋಜಿಸಿರುವುದಾಗಿ ವರದಿಯಾಗಿದೆ.

ಪ್ರಾಚೀನ ಭಾರತವು ವಿಶಿಷ್ಟವಾಗಿದೆ, ಏಕೆಂದರೆ ಯಾವುದೇ ನಿರಂಕುಶಾಧಿಕಾರ ಅಥವಾ ಶ್ರೀಮಂತ ವರ್ಗದ ದರಬಾರು ಆಗ ಇರಲಿಲ್ಲ ಎಂಬ ಯುಜಿಸಿ ಅಧ್ಯಕ್ಷರ ದಾವೆ ಹಾಸ್ಯಾಸ್ಪದವಾಗಿದೆ. ಹೀಗೆ ದಾವೆ ಹೂಡುವುದು ನಮ್ಮ ಆಧುನಿಕ ಪ್ರಜಾಪ್ರಭುತ್ವದ ವಿಕಾಸದಲ್ಲಿ ಒಂದು ಪ್ರಮುಖ ಸವಾಲಾಗಿರುವ ವರ್ಣಾಶ್ರಮ ಮತ್ತು ಜಾತಿ–ಆಧಾರಿತ ಸಾಮಾಜಿಕ ಶ್ರೇಣೀಕರಣವಿದೆ ಎಂಬ ವಾಸ್ತವತೆಯ ನಿರಾಕರಣೆಯಾಗಿದ್ದು, ಇದು ಯುಜಿಸಿಯ ಅಧ್ಯಕ್ಷ ಹುದ್ದೆಯಲ್ಲಿರುವವರಿಗೆ ಶೋಭೆ ತರುವಂತದ್ದಲ್ಲ.

ಉನ್ನತ ಶಿಕ್ಷಣದ ಕ್ಷೇತ್ರದಲ್ಲಿ ಚುನಾಯಿತ ರಾಜ್ಯ ಸರ್ಕಾರಗಳೊಂದಿಗೆ ಪ್ರಜಾಸತ್ತಾತ್ಮಕ ಸಮಾಲೋಚನೆ ನಡೆಸಬೇಕಾದ ಸಾಂವಿಧಾನಿಕ ಅಗತ್ಯವನ್ನು ಯುಜಿಸಿ ಅಧ್ಯಕ್ಷರು ನಿರಾಕರಿಸುತ್ತಾರೆ ಮತ್ತು ಈ ಕಾರ್ಯಸೂಚಿಯನ್ನು ಅನುಸರಿಸಲು ಚುನಾಯಿತರಲ್ಲದ, ಆರೆಸ್ಸೆಸ್–ಬಿಜೆಪಿಯಿಂದ ನೇಮಕಗೊಂಡ ರಾಜ್ಯಪಾಲರನ್ನು ಅವರು ನೇರವಾಗಿ ಸಂಪರ್ಕಿಸಿದ್ದಾರೆ.

ಇದು ನಮ್ಮ ಸಂವಿಧಾನದ ತಳಹದಿಯನ್ನು ದುರ್ಬಲಗೊಳಿಸುತ್ತದಲ್ಲದೆ ವೈಜ್ಞಾನಿಕ ಮನೋಭಾವ ಮತ್ತು ವೈಚಾರಿಕತೆಯನ್ನು ನಾಶಮಾಡುವ ಸಾಧನವಾಗಿ ಶಿಕ್ಷಣವನ್ನು ಬಳಸುವುದೇ ರಾಷ್ಟ್ರೀಯ ಶಿಕ್ಷಣ ನೀತಿಯ ನಿಜವಾದ ಉದ್ದೇಶ ಎಂಬುದನ್ನು ಬಯಲಿಗೆಳೆದಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಕಸರತ್ತನ್ನು ತಕ್ಷಣವೇ ನಿಲ್ಲಿಸುವಂತೆ ಒತ್ತಾಯಿಸುವಲ್ಲಿ ಎಲ್ಲಾ ಪ್ರಜಾಸತ್ತಾತ್ಮಕ ಸಂಘಟನೆಗಳು ಮತ್ತು ವ್ಯಕ್ತಿಗಳು ಸೇರಿಕೊಳ್ಳಬೇಕು ಎಂದು ಆಗ್ರಹಪಡಿಸಿದೆ.

ಯುಜಿಸಿ ತನ್ನ ಸಾಂವಿಧಾನಿಕ ಕರ್ತವ್ಯವನ್ನು ನಿರ್ವಹಿಸಬೇಕು ಹಿಂದುತ್ವ ರಾಜಕೀಯದ ಸಾಧನವಾಗಬಾರದು–ಎಐಡಿಡಬ್ಲ್ಯುಎ

ಪ್ರಾಚೀನ ಭಾರತದ ಪ್ರಜಾಪ್ರಭುತ್ವ ಕುರಿತು ಸಂವಿಧಾನದ ದಿನ (ನವೆಂಬರ್ 26, 2022) ಉಪನ್ಯಾಸಗಳನ್ನು ಏರ್ಪಡಿಸಲು ಯುಜಿಸಿಯು ವಿಶ್ವವಿದ್ಯಾಲಯಗಳಿಗೆ ನಿರ್ದೇಶನ ನೀಡಿರುವುದನ್ನು ಹಿಂದಕ್ಕೆ ಪಡೆಯಬೇಕೆಂದು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ(ಎಐಡಿಡಬ್ಲ್ಯೂಎ)ಯು ಕೂಡ ಒತ್ತಾಯಿಸಿದೆ.

ಹೇಳಿಕೆಯನ್ನು ಬಿಡುಗಡೆಗೊಳಿಸಿರುವ ಎಐಡಿಡಬ್ಲ್ಯೂಎ ರಾಷ್ಟ್ರೀಯ ಅಧ್ಯಕ್ಷರಾದ ಮಾಲಿನಿ ಭಟ್ಟಾಚಾರ್ಯ, ವಿಶ್ವವಿದ್ಯಾಲಯ ಅನುದಾನ ಆಯೋಗವು (ಯುಜಿಸಿ) 45 ಕೇಂದ್ರೀಯ ವಿಶ್ವವಿದ್ಯಾಲಯಗಳಿಗೆ ಮತ್ತು 45 ಕಲ್ಪಿತ (ಡೀಮ್ಡ್) ವಿಶ್ವವಿದ್ಯಾಲಯಗಳಿಗೆ ನವೆಂಬರ್ 15, 2022 ರಂದು ಪತ್ರವನ್ನು ಬರೆದು ಸಂವಿಧಾನ ದಿನವಾದ 26.11.2022 ರಂದು ಸಂವಿಧಾನದ ಪ್ರಸ್ತಾವನೆ ಮತ್ತು ಮೂಲಭೂತ ಕರ್ತವ್ಯಗಳ ಅಧ್ಯಾಯವನ್ನು ಓದುವುದರೊಂದಿಗೇ "ಭಾರತ – ಪ್ರಜಾಪ್ರಭುತ್ವದ ತಾಯಿ" ಶೀರ್ಷಿಕೆಯ ಅಡಿಯಲ್ಲಿ 'ಭಾರತೀಯ ಪ್ರಜಾಪ್ರಭುತ್ವದ ಪ್ರಾಚೀನ ಮೂಲಗಳ ಕುರಿತು' ಉಪನ್ಯಾಸಗಳನ್ನು ಏರ್ಪಡಿಸಬೇಕೆಂದೂ ನಿರ್ದೇಶಿಸಿದೆ. ಈ ಸುತ್ತೋಲೆಯನ್ನು ಹಿಂಪಡೆಯಬೇಕೆಂದು ಅವರು ಆಗ್ರಹಿಸಿದ್ದಾರೆ.

ಈ ವಿಷಯ ಕುರಿತು ಒಂದು ಪರಿಕಲ್ಪನಾ ಟಿಪ್ಪಣಿಯನ್ನು ಯುಜಿಸಿ ವಿತರಿಸಿದ್ದು ಅದು 15 ವಿಷಯಗಳನ್ನು ಗುರುತಿಸಿದಂತೆ ಕಾಣುತ್ತದೆ. ಈ ಟಿಪ್ಪಣಿಯನ್ನು ಸಾರ್ವಜನಿಕವಾಗಿ ಪ್ರಕಟಿಸಿಲ್ಲವಾದರೂ, ಆ ವಿಷಯಗಳು ಮಹಿಳಾ ವಿರೋಧಿ ಪ್ರಾಚೀನ ಗ್ರಂಥಗಳು ಮತ್ತು ಆಚರಣೆಗಳನ್ನು ವೈಭವೀಕರಿಸುತ್ತವೆ ಎನ್ನುವುದನ್ನು ಹಲವಾರು ಮಾಧ್ಯಮ ವರದಿಗಳು ಮತ್ತು ಯುಜಿಸಿಯ ಅಧ್ಯಕ್ಷರ ಹೇಳಿಕೆಗಳು ಸ್ಪಷ್ಟಪಡಿಸುತ್ತವೆ.

ಖಾಪ್ ಪಂಚಾಯತುಗಳು, ಪಾಳೇಗಾರಿ ಮತ್ತು ಸರ್ವಾಧಿಕಾರಿ ರಾಜಪ್ರಭುತ್ವಗಳು ಹಾಗೂ ಮನುಸ್ಮೃತಿಯಲ್ಲಿ ಉಲ್ಲೇಖಿಸಿರುವ ಮಹಿಳಾ ವಿರೋಧಿ ಸಂಪ್ರದಾಯಗಳು ಆ ಉಪನ್ಯಾಸಗಳ ವಿಷಯಗಳಾಗಿವೆ. ವಿಪರ್ಯಾಸವೆಂದರೆ ಮಹಿಳೆಯರಿಗೆ ಒಂದು ಘನತೆಯ ಹಾಗೂ ಸಭ್ಯ ಬದುಕಿನ ಹಕ್ಕುಗಳನ್ನು ಕಡೆಗಣಿಸುವ ರೀತಿಯಲ್ಲಿ ಸಂವಿಧಾನ ದಿನವನ್ನು ಆಚರಿಸಬೇಕು ಎಂದು ಯುಜಿಸಿಯು ವಿಶ್ವವಿದ್ಯಾಲಯಗಳನ್ನು ಕೇಳಿಕೊಂಡಿದೆ. ಸಂವಿಧಾನದ ಪ್ರಸ್ತಾವನೆಯನ್ನು ಓದಬೇಕು ಎನ್ನುವಾಗಲೇ ಪ್ರಾಚೀನ ಕಾಲದಿಂದಲೂ ಮಹಿಳೆಯರ ಮೇಲಿನ ದಾಳಿ ದಬ್ಬಾಳಿಕೆಗಳಿಗೆ ಬುನಾದಿ ಹಾಕುವ ಚಿಂತನೆ ಹಾಗೂ ಗ್ರಂಥಗಳನ್ನು ಅದು ಉತ್ತೇಜಿಸುತ್ತದೆ ಎಂದು ಎಐಡಿಡಬ್ಲ್ಯೂಎ ಪ್ರಕಟಣೆಯಲ್ಲಿ ಹೇಳಿದೆ.

ಎಐಡಿಡಬ್ಲ್ಯೂಎ ಪ್ರಧಾನ ಕಾರ್ಯದರ್ಶಿ ಮರಿಯಂ ಧವಳೆ ಅವರು, ವೈದಿಕ ಸಂಸ್ಕೃತಿಯ ಪಠ್ಯಗಳನ್ನು ತುರುಕುವ ಮತ್ತು ಹಿಂದುತ್ವ ಪಡೆಗಳ ಪುರುಷ–ಪ್ರಧಾನ ಮೌಲ್ಯಗಳಿಗೆ ಸರಿಹೊಂದುವಂತೆ ಶೈಕ್ಷಣಿಕ ಪಠ್ಯಗಳನ್ನು ಬದಲಾಯಿಸಲು ಯುಜಿಸಿ ಪ್ರಯತ್ನಿಸುತ್ತಿದೆ. ಈ ಮೂಲಕ ತಾನೊಂದು ಸ್ವಾಯತ್ತ ಸಂಸ್ಥೆಯಾಗಿದ್ದು ಆಧುನಿಕ ಶಿಕ್ಷಣದ ಮೌಲ್ಯಗಳಿಗೆ ಬದ್ಧವಾಗಿರಬೇಕಾದ ಸ್ವಾಯತ್ತ ಸಂಸ್ಥೆ ಅಲ್ಲ, ಬದಲಿಗೆ ಹಿಂದುತ್ವ ಪಡೆಗಳ ಕೈಗೊಂಬೆಯಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ತೋರಿಸುತ್ತಿದೆ. ವೈದಿಕ ಪ್ರಜಾಪ್ರಭುತ್ವ ಎಂಬುದೊಂದು ಆದರ್ಶ ರಾಜಕೀಯ ವ್ಯವಸ್ಥೆ ಎಂಬ ವಿಚಾರವನ್ನು ಮಾರುತ್ತಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ನಿರ್ದೇಶನವನ್ನು ಯುಜಿಸಿ ನೇರಾ ನೇರಾ ಅನುಸರಿಸುತ್ತಿದೆ. ಈ ಪರಿಕಲ್ಪನೆಯು ನಮ್ಮ ಸಂವಿಧಾನದ ಮೂಲ ಆಶಯ ಹಾಗೂ ತತ್ವಗಳಿಗೆ ಮೂಲತಃ ವಿರುದ್ಧವಾಗಿದೆ ಮತ್ತು ಹೊಸ ಶಿಕ್ಷಣ ನೀತಿ (ಎನ್.ಇ.ಪಿ. 2020)ಯ ಪ್ರತಿಗಾಮಿ ಹಾಗೂ ಮಹಿಳಾ ವಿರೋಧಿ ಮೌಲ್ಯಗಳನ್ನು ಉತ್ತೇಜಿಸುತ್ತದೆ ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ.

ವಿಶ್ವವಿದ್ಯಾಲಯಗಳಲ್ಲಿ ಹಿಂದುತ್ವ ನೀತಿಶಾಸ್ತ್ರವನ್ನು ಉತ್ತೇಜಿಸಲು ಎನ್.ಇ.ಪಿ. 2020 ತಳಪಾಯ ಹಾಕುತ್ತಿದೆ ಮತ್ತು ಪುರುಷ ಪ್ರಧಾನ ಸಂಪ್ರದಾಯಗಳನ್ನು ವೈಭವೀಕರಿಸಲು ಒತ್ತಾಸೆ ನೀಡುತ್ತದೆ. ಕಾನೂನುಬಾಹಿರ ಸಂಪ್ರದಾಯವಾದಿ ಸಾಮಾಜಿಕ ಸಂಸ್ಥೆಗಳಾದ ಖಾಪ್ ಪಂಚಾಯತುಗಳನ್ನು ನ್ಯಾಯಬದ್ಧಗೊಳಿಸುವ ಯತ್ನಗಳನ್ನು ಯುಜಿಸಿ ಅಧ್ಯಕ್ಷರ ಇತ್ತೀಚಿನ ಹೇಳಿಕೆಗಳು ಸಮರ್ಥಿಸುವಂತಿದೆ. ಅಂತಹ ಸಂಸ್ಥೆಗಳ ವಿರುದ್ಧ ಎಐಡಿಡಬ್ಲ್ಯುಎ ಅವಿರತವಾಗಿ ದೀರ್ಘ ಕಾಲದ ಹೋರಾಟಗಳನ್ನು ನಡೆಸುತ್ತ ಬಂದಿದೆ.

ಸಾಂವಿಧಾನಿಕ ಮೌಲ್ಯಗಳ ಆಧಾರದಲ್ಲಿ ರೂಪುಗೊಂಡಿರುವ ಆಧುನಿಕ ಶಿಕ್ಷಣವನ್ನು ಉತ್ತೇಜಿಸಬೇಕೆಂಬ ಸಾಂವಿಧಾನಿಕವಾಗಿ ನಿರ್ದೇಶಿಸಲ್ಪಟ್ಟಿರುವ ತನ್ನ ಕರ್ತವ್ಯವನ್ನು ಯುಜಿಸಿಯು ನಿರ್ವಹಿಸಬೇಕೆಂದು ಎಐಡಿಡಬ್ಲ್ಯುಎ ಒತ್ತಾಯಿಸಿದೆ. ಯುಜಿಸಿಯ ಸ್ವರೂಪವನ್ನು ಬದಲಾಯಿಸಿ ಅದನ್ನು ಸಂಪ್ರದಾಯವಾದಿ ಹಿಂದುತ್ವ ರಾಜಕೀಯದ ಸಾಧನವನ್ನಾಗಿ ಪರಿವರ್ತಿಸುವ ಎಲ್ಲಾ ಪ್ರಯತ್ನಗಳನ್ನು ವಿಶ್ವವಿದ್ಯಾಲಯಗಳ ಎಲ್ಲಾ ಸದಸ್ಯರುಗಳು ವಿರೋಧಿಸಬೇಕೆಂದು ಎಐಡಿಡಬ್ಲ್ಯುಎ ಮನವಿ ಮಾಡಿದೆ.

ಸಟ್ಟಾಕೋರರ ಖಯಾಲಿ.......

ಪುಟ 13 ರಿಂದ

ಸಾಲ ಮತ್ತು ವಿದೇಶಿ ವಿನಿಮಯದ ತೀವ್ರಕೊರತೆ ಆವರಿಸಿಕೊಂಡಿದೆ, ಅದನ್ನು 'ಮಿತವ್ಯಯ'ವೆಂಬ ಗುರುತರವಾದ ಶರತ್ತುಗಳನ್ನು ವಿಧಿಸುವ ಅಂತರರಾಷ್ಟ್ರೀಯ ಹಣಕಾಸು ನಿಧಿಯ ಮುಂದೆ ಭಿಕ್ಷಾಪಾತ್ರೆಯನ್ನು ಒಡ್ಡುವಂತೆ ಮಾಡಿದೆ. ಇವೆಲ್ಲ ತೃತೀಯಜಗತ್ತಿನ "ಸಿರಿಯಿಂದ ಚಿಂದಿಯತ್ತ" ಇಳಿಯುವ ಕಥೆಗಳು. ಇವಕ್ಕೆ ಮುಖ್ಯ ಕಾರಣ ಸ್ಥಳೀಯ ಭ್ರಷ್ಟಾಚಾರ ಮತ್ತು ರಾಜಪಕ್ಷೆಯಂತಹವರ ಕುಹಕಗಳು ಎಂದು ಸಾಮ್ರಾಜ್ಯಶಾಹಿ ಪ್ರಚಾರ ಮಾಡುತ್ತದೆ. ಈ ಕುಹಕಿಗಳು ಖಂಡಿತವಾಗಿಯೂ ತಮ್ಮ ಪಾತ್ರವನ್ನು ನಿರ್ವಹಿಸುತ್ತಾರೆ. ಆದರೆ ಅದರ ಮೇಲಷ್ಟೇ ಗಮನ ಕೇಂದ್ರೀಕರಿಸಿ, ನವ ಉದಾರವಾದವು ಉಂಟುಮಾಡಿರುವ ಸಂರಚನಾತ್ಮಕ ನಿಶ್ಶಕ್ತಿಗಳನ್ನು ಕಾಣದಿರುವುದು ಮೂರ್ಖತನದ ಪರಮಾವಧಿಯಾಗುತ್ತದೆ.

ನವ ಉದಾರವಾದಿ ಬಂಡವಾಳಶಾಹಿಯ ಒಂದು ವಿಶಿಷ್ಟ ಲಕ್ಷಣವೆಂದರೆ ಬಹುಪಾಲು ದುಡಿಯುವ ಜನಸಮೂಹಗಳ ಜೀವನ ಪರಿಸ್ಥಿತಿಗಳನ್ನು ಹಿಡಿಯಷ್ಟು ಹಣಕಾಸು ಸಟ್ಟಾಕೋರರ ಖಯಾಲಿಗಳು ಮತ್ತು ಬಡಾಯಿಗಳು ನಿರ್ಧರಿಸುತ್ತವೆ. ಹಣದುಬ್ಬರದ ಏರುಗತಿ ಮತ್ತು ತದನಂತರದ ಪರಿಸ್ಥಿತಿಗಳು ಈ ಸಟ್ಟಾಕೋರರಲ್ಲಿ ಉಂಟು ಮಾಡುವ ಕಳವಳಗಳು ತೃತೀಯಜಗತ್ತಿನ ದುಡಿಯುವಜನರಿಗೆ ತೀವ್ರ ಸಂಕಷ್ಟಗಳನ್ನು ತರುತ್ತವೆ. ಈ ದೇಶಗಳ ಪಾವತಿಶೇಷದ ತೊಂದರೆಗಳಿಂದಾಗಿ ಈ ದೇಶಗಳ ಮೇಲೆ ಕರಾಳ ಮಿತವ್ಯಯದ ಕ್ರಮಗಳನ್ನು ಹೇರಲಾಗುತ್ತದೆ. ಇದೀಗ ನವ ಉದಾರವಾದದ ಉಬ್ಬರದಿಂದ ಯಾವುದೇ ಪ್ರಯೋಜನಗಳನ್ನು ಪಡೆಯದ ಜನರೇ ಅದರ ಅವನತಿಯ ಬಲಿಪಶುಗಳಾಗುವ ಕಠೋರ ವ್ಯಂಗ್ಯ.

ಕಳಪೆ ಬೀಜ, ಕೀಟ ನಾಶಕ, ರಾಸಾಯನಿಕಗಳಿಂದ ಬೆಳೆ ಹಾಳು: ಪ್ರತಿಭಟನೆ

ಬಳ್ಳಾರಿ ಜಿಲ್ಲೆಯ ಕುರುಗೋಡು ತಾಲೂಕಿನಲ್ಲಿ ಕಳಪೆ ಬೀಜ ಕಳಪೆ ಗೊಬ್ಬರ ಕಳಪೆ ಕ್ರಿಮಿನಾಶಕ ರೈತರಿಗೆ ಮಾರಾಟ ಮಾಡುವವರ ವರ್ತಕರು ಜಾಲವನ್ನು ಕರ್ನಾಟಕ ಪ್ರಾಂತ ರೈತ ಸಂಘವು ಬಯಲಿಗೆಳೆದು ವರ್ತಕರಿಂದ ರೈತರಿಗಾದ ಬೆಳೆ ನಷ್ಟ ಪರಿಹಾರ ಕೊಡಬೇಕು ಎಂದು ತಹಶೀಲ್ದಾರರ ಕಛೇರಿಯಲ್ಲಿ ಬೇಡಿಕೆ ಇಡಲಾಯಿತು.

ಕಳೆದ ಎರಡು ವರ್ಷಗಳಿಂದ ಅತಿವೃಷ್ಟಿ ಅನಾವೃಷ್ಟಿ ಯಿಂದ ಈ ಭಾಗದ ರೈತರು ಬೆಳೆದ ಬೆಳೆಗಳಾದ ಮೆಣಸಿನಕಾಯಿ ಭತ್ತ ಹತ್ತಿ ಸಜ್ಜೆ ನವಣೆ ಜೋಳ ಇತರೆ ಬೆಳೆಗಳನ್ನು ನಾಟಿ ಮಾಡಿ ಪ್ರಕೃತಿ ವಿಕೋಪ ಒಂದು ಭಾಗವಾದರೆ ಇನ್ನೊಂದು ಭಾಗ ಕಳಪೆ ಗುಣಮಟ್ಟದ ಬೀಜ ಔಷಧಿ ಗೊಬ್ಬರ ಗಳನ್ನು ರೈತರಿಗೆ ಮಾರಾಟ ಮಾಡುವುದಲ್ಲದೇ ಇವುಗಳನ್ನು ನಿಗದಿತ ದರಕ್ಕಿಂತ ಹೆಚ್ಚಿನ ಧರಗಳಿಗೆ ಮಾರಾಟ ಮಾಡಿ ರೈತರನ್ನು ನಿರಂತರ ಸುಲಿಗೆ ಮಾಡುತ್ತಿದ್ದುದನ್ನು ಕಂಡ ರೈತ ಸಂಘವು ಎಲ್ಲಾ ರೈತರನ್ನು ಒಗ್ಗೂಡಿಸಿ ಬಳ್ಳಾರಿ ಮತ್ತು ಕಂಪ್ಲಿ ರಸ್ತೆಯನ್ನು ಒಂದು ಗಂಟೆಗಳ ಕಾಲ ರಸ್ತೆ ತಡೆ ಮಾಡಿದರೂ ಸಹ ಕೃಷಿ ಇಲಾಖೆ ಅಧಿಕಾರಿಗಳು ದೂರವಾಣಿ ಮುಖಾಂತರ ಹಾರಿಕೆ ಉತ್ತರ ನೀಡುವುದನ್ನು ಖಂಡಿಸಿ ನಂತರ 5 ಗಂಟೆ ಸುಮಾರಿಗೆ ತಹಶೀಲ್ದಾರ್ ಕಚೇರಿಗೆ ನೂರಾರು ರೈತರೊಂದಿಗೆ ಮುತ್ತಿಗೆ ಹಾಕಲಾಯಿತು ಆಗ ಮಾನ್ಯ ತಹಶೀಲ್ದಾರರಿಗೆ ವಿಷಯ ಮನವರಿಕೆ ಮಾಡಿ ಕೃಷಿ ಇಲಾಖೆ ಅಧಿಕಾರಿಗಳನ್ನು ಮತ್ತು ತೋಟಗಾರಿಕೆ ಇಲಾಖೆ ಅಧಿಕಾರಿಗಳನ್ನು ಸ್ಥಳಕ್ಕೆ ಕರೆಯುವಂತೆ ಒತ್ತಾಯಿಸಲಾಯಿತು ಆಗ ಕಾರ್ಯಪ್ರವೃತ್ತರಾದ ತಹಶೀಲ್ದಾರರು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು. ತೋಟಗಾರಿಕೆ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರನ್ನು ಎರಡು ಗಂಟೆಗಳ ನಂತರ ಕರೆಯಿಸಿದರು ಆಗ ರೈತ ಸಂಘವು ವರ್ತಕರನ್ನು ಸ್ಥಳಕ್ಕೆ ಕರೆಯುವಂತೆ ಒತ್ತಾಯಿಸಲಾಯಿತು ಆಗ ಅಧಿಕಾರಿಗಳು ಸಂಘದ ಮುಖಂಡರ ಜೊತೆ ಚರ್ಚಿಸಿ ಮನವಿ ಮಾಡಿಕೊಂಡರು ಈಗ ಸಮಯ ರಾತ್ರಿ 8 ಗಂಟೆ ಆಗಿರುವುದರಿಂದ ಈ ಜನಜಂಗುಳಿಯ ಮಧ್ಯೆ ಮಾರಾಟಗಾರರನ್ನು ಕರೆಯೀಯಿಸಿದರೆ ಪರಿಸ್ಥಿತಿ ಕೈ ಮೀರಬಹುದು ಎಂದು ತಹಶೀಲ್ದಾರರು ನಮ್ಮಲ್ಲಿ ಮನವಿ ಮಾಡಿ ಬೆಳಿಗ್ಗೆ 10 ಗಂಟೆಗೆ ಸಭೆ ಕರೆಯುತ್ತೇವೆ ಎಂದು ಹೇಳಿದರು ಆಗ ನಾವು ರೈತರಲ್ಲಿ ಮನವರಿಕೆ ಮಾಡಿ ಬೆಳಿಗ್ಗೆ 10 ಗಂಟೆಗೆ ಎಲ್ಲರೂ ಬರಬೇಕೆಂದು ಕಳಿಸಿದೆವು

ಮರುದಿನ ಬೆಳಗ್ಗೆ 10 ಗಂಟೆಗೆ ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ತೋಟಗಾರಿಕೆ ಇಲಾಖೆ ಅಧಿಕಾರಿಗಳು ಕೃಷಿ ಇಲಾಖೆ ಅಧಿಕಾರಿಗಳು ತಾಲೂಕಿನ ಗೊಬ್ಬರದಂಗಡಿ ಮಾಲೀಕರು ಮತ್ತು ರೈತರು ಹಾಗೂ ಸಂಘದ ಮುಖಂಡರು ಸಭೆ ಸೇರಲಾಯಿತು ಸಭೆಯಲ್ಲಿ ಗೊಬ್ಬರದಂಗಡಿ ಮಾಲೀಕರ ವಿರುದ್ಧ ಎಲ್ಲಾ ರೈತರು ಹರಿ ಹಾಯ್ದರು ರೈತರಿಗಾದ ನಷ್ಟವನ್ನು ತುಂಬಿಕೊಡಬೇಕೆಂದು ಗೊಬ್ಬರದಂಗಡಿ ಮಾಲೀಕರನ್ನು ಮತ್ತು ಅಧಿಕಾರಿಗಳನ್ನು ಒತ್ತಾಯಿಸಲಾಯಿತು ಆಗ ಆತಂಕದ ವಾತಾವರಣ ಸೃಷ್ಟಿಯಾಯಿತು. ಆಗ ಸಂಘದ ಮುಖಂಡರು ಪರಿಸ್ಥಿತಿಯನ್ನು ತಿಳಿಗೊಳಿಸಿ ಆದಿಕಾರಿಗಳಿಗೆ ಪರಿಹಾರ ಕೊಡದಿದ್ದರೆ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತದೆ. ಅದಕ್ಕೆ ತಾವೇ ಹೊಣೆಗಾರರು ನೀವಾಗುತ್ತೀರಿ ಎಂದು ಅಧಿಕಾರಿಗಳಿಗೆ ಹೇಳಲಾಯಿತು.

ಕಳಪೆ ಔಷದಿ ಸಂಪಡಿಸಿ ನಷ್ಟಕ್ಕೊಳಗಾದ ರೈತರಿಗೆ ಪ್ರತಿ ಎಕರೆಗೆ ಗರಿಷ್ಠ 1,20,000 ರೂಪಾಯಿಗಳುಕ. ಕನಿಷ್ಠ 50,000 ರೂಪಾಯಿಗಳ ಪರಿಹಾರವನ್ನು ಕಂಪನಿ ಅಥವಾ ಮಾರಾಟಗಾರರೇ ನೀಡಬೇಕೆಂದು ಒತ್ತಾಯಿಸಲಾಯಿತು.

ಕಮ್ಯೂನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳ 22ನೇ ಸಭೆ ಉಕ್ರೇನ್ ಸಂಘರ್ಷದ ಪರಿಹಾರಕ್ಕೆ ಪ್ರಯತ್ನಕ್ಕೆ ಕರೆ

ವಸಂತರಾಜ ಎನ್.ಕೆ.

ಜಗತ್ತಿನ 78 ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳು ಉಕ್ರೇನ್ ಸಂಘರ್ಷಕ್ಕೆ ಸಂವಾದ ಮತ್ತು ಮಾತುಕತೆಗಳ ಮೂಲಕ ರಚನಾತ್ಮಕ, ವಾಸ್ತವಿಕ ನೆಲೆಯ ಪರಿಹಾರ ಕಂಡುಕೊಳ್ಳಲು ಕರೆ ಕೊಟ್ಟಿವೆ. ಅಕ್ಟೋಬರ್ 28–29ರಂದು ಕ್ಯೂಬಾ ರಾಜಧಾನಿ ಹವಾನಾದಲ್ಲಿ 60 ದೇಶಗಳ 78 ಪಕ್ಷಗಳ 145 ಪ್ರತಿನಿಧಿಗಳ 22ನೇ ವಾರ್ಷಿಕ ಅಂತರ್ರಾಷ್ಟ್ರೀಯ ಸಭೆ ಸೇರಿದ್ದು ಉಕ್ರೇನ್ ಸಂಘರ್ಷದ ನಿಲುಗಡೆ ಅಲ್ಲದೆ ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿಯ ದಮನಕಾರಿ ಮತ್ತು ಶೋಷಕ ನೀತಿಗಳ ವಿರುದ್ಧ ಜಂಟಿ ಪ್ರಚಾರಾಂದೋಲನಗಳನ್ನು ನಡೆಸಲೂ ಕರೆ ಕೊಟ್ಟಿವೆ. ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳ ಅಂತರ್ರಾಷ್ಟ್ರೀಯ ಸಭೆ ಮೊದಲ ಬಾರಿಗೆ ಕ್ಯೂಬಾದಲ್ಲಿ ನಡೆಯುತ್ತಿದೆ. ಈ ಪಕ್ಷಗಳ ಕಾರ್ಯಕಾರಿ ಗುಂಪಿನ ಸಭೆ ಅಕ್ಟೋಬರ್ 27 ರಂದು ನಡೆದಿತ್ತು.

ಕಾರ್ಮಿಕರ, ರೈತರ, ಕೃಷಿಕೂಲಿಕಾರರ, ಮಹಿಳೆಯರ, ಯುವಜನರ, ವಿದ್ಯಾರ್ಥಿಗಳ ಹಾಗೂ ವಿವಿಧ ಅಂಚಿಗೆ ತಳ್ಳಲ್ಪಟ್ಟ ವಿಭಾಗಗಳ ಜನರ ಚಳುವಳಿಗಳನ್ನು ಸಂಘಟಿಸುವ ಅನುಭವಗಳನ್ನು ಹಂಚಿಕೊಳ್ಳುವುದು ಸಭೆಯ ಮುಖ್ಯ ಕಲಾಪವಾಗಿತ್ತು. ಈ ಜನವಿಭಾಗಗಳು ಎದುರಿಸುತ್ತಿರುವ ಸಮಸ್ಯೆಗಳ ಜಾಗತಿಕ ಆಯಾಮಗಳ ಕುರಿತು ವಿಚಾರ ವಿನಿಮಯ ನಡೆಯಿತು. 35 ಪಕ್ಷಗಳ ಕಾರ್ಯಕಾರಿ ಗುಂಪಿನ ಆಯ್ಕೆಯನ್ನು ಮಾಡಲಾಯಿತು. ಕಾರ್ಯಕಾರಿ ಗುಂಪಿನಲ್ಲಿ ಭಾರತದ ಸಿಪಿಐ(ಎಂ) ಮತ್ತು ಸಿಪಿಐ ಎರಡೂ ಪಕ್ಷಗಳು ಇವೆ. ಈ ಸಂಘಟನೆಗೆ ಸೇರುವ ಸ್ವಿಝರ್ಲ್ಯಾಂಡಿನ ಮೂರು ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳ ಕೋರಿಕೆಗೆ ಅಂಗೀಕಾರ ನೀಡಲಾಯಿತು. 23ನೇ ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳ ವಾರ್ಷಿಕ ಅಂತರ್ರಾಷ್ಟ್ರೀಯ ಸಭೆಯನ್ನು ಸಂಘಟಿಸುವ ತುರ್ಕಿಯಲ್ಲಿ ನಡೆಸುವ ಅಲ್ಲಿನ ಕಮ್ಯುನಿಸ್ಟ್ ಪಕ್ಷದ ಕೋರಿಕೆಯನ್ನು ಅಂಗೀಕರಿಸಲಾಯಿತು.



ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳ ಹೇಳಿಕೆಯ ಕರಡನ್ನು ಚರ್ಚಿಸಿ ಅಂತಿಮಗೊಳಿಸಿದ ಹೇಳಿಕೆಯನ್ನು ಅಂಗೀಕರಿಸಲಾಯಿತು. (ಹೇಳಿಕೆಯ ಆಯ್ದ ಭಾಗಗಳು ಬಾಕ್ಸ್‌ನಲ್ಲಿವೆ). ಸಾಮ್ರಾಜ್ಯಶಾಹಿಯ ದಾಳಿಗೆ ಒಳಗಾಗಿರುವ ಕ್ಯೂಬಾ ಮತ್ತಿತರ ದೇಶಗಳ ಮತ್ತು ಎಲ್ಲ ಹೋರಾಟದಲ್ಲಿರುವ ಜನಗಳಿಗೆ ಸೌಹಾರ್ದ ಬೆಂಬಲ; ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿ, ಫ್ಯಾಸಿಸಂ ಮತ್ತು ಯುದ್ಧ – ಇವುಗಳ ವಿರುದ್ಧ ಹಾಗೂ ಶಾಂತಿ, ಪರಿಸರ, ಕಾರ್ಮಿಕರ ಹಕ್ಕುಗಳ ಪರವಾಗಿ ಐಕ್ಯ ಹೋರಾಟ ಕ್ಕೆ ಹೇಳಿಕೆ ಕರೆ ನೀಡಿದೆ. ಈ ಹೋರಾಟದಲ್ಲಿ ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳ ಜತೆಗೆ ಸಾಮಾಜಿಕ ಮತ್ತು ಜನಪ್ರಿಯ ಚಳುವಳಿಗಳ ಜತೆ ಸಹಕಾರ ಮತ್ತು ಸಹಭಾಗಿತ್ವಕ್ಕೆ ಒತ್ತು ಕೊಡಲಾಗಿದೆ.

ಸಭೆಯಲ್ಲಿ ಮುಂದಿನ ಒಂದು ವರ್ಷದ ಜಂಟಿ ಕಾರ್ಯಾಚರಣೆಗೆ ಯೋಜನೆಯನ್ನೂ ರೂಪಿಸಲಾಯಿತು. ಉಕ್ರೇನ್ ಸಂಘರ್ಷದ ನಿಲುಗಡೆಗೆ ಪ್ರಯತ್ನ ಅಲ್ಲದೆ ಈ ಯೋಜನೆಯ ಕೆಲವು ಪ್ರಮುಖ ಅಂಶಗಳು ಹೀಗಿವೆ:

- ಮಾರ್ಕ್ಸ್‌ವಾದ–ಲೆನಿನ್‌ವಾದದ * ಸಾಮ್ರಾಜ್ಯಶಾಹಿ ಯುದ್ಧ, ಆಕ್ರಾಮಕ ಮಧ್ಯಪ್ರವೇಶಗಳು, ಅಣ್ವಸ್ತ್ರ ಮತ್ತಿತರ ಸಾಮೂಹಿಕ ನಾಶದ ಅಸ್ತ್ರಗಳು, ವಿದೇಶಿ ಮಿಲಿಟರಿ ನೆಲೆಗಳು, ನಾಟೋ, ಔಕಸ್ ಗಳಂತಹ ಸಾಮ್ರಾಜ್ಯಶಾಹಿ ಮಿಲಿಟರಿ ಕೂಟಗಳ ವಿರುದ್ಧ ವ್ಯಾಪಕ ಪ್ರಚಾರಾಂದೋಲನ
- ಸೆಪ್ಟೆಂಬರ್ 23 ರಂದು ಜಾಗತಿಕವಾಗಿ ಯುದ್ಧ–ವಿರೋಧಿ ಶಕ್ತಿಗಳನ್ನು ಅಣಿನೆರೆಸುವ ಅಂತರ್ರಾಷ್ಟ್ರೀಯ ಶಾಂತಿ ದಿನದ ಆಚರಣೆ
- ಸೈದ್ಧಾಂತಿಕ–ಪ್ರಾಯೋಗಿಕ ಪರಿಕಲ್ಪನೆಗಳ ಕುರಿತು ವಿಚಾರ–ವಿನಿಮಯ, ವಿಶ್ಲೇಷಣೆ, ಪ್ರಚಾರ ಮಾಡಲು ಸರಣಿ ಆನ್–ಲೈನ್ ಕಾರ್ಯಾಗಾರಗಳು, ಸೆಮಿನಾರುಗಳು
- ಫೆ.10–12 2023ರಲ್ಲಿ ಪಕ್ಷಗಳ ಸೈದ್ಧಾಂತಿಕ ಪತ್ರಿಕೆಗಳ ಸಂಪಾದಕರುಗಳ ಸಭೆ ಕ್ಯೂಬಾದಲ್ಲಿ
- ಲಂಗು ಲಗಾಮಿಲ್ಲದ ಗರಿಷ್ಠ ಲಾಭವೊಂದೇ ಗುರಿಯಾಗಿರುವ ಬಂಡವಾಳಶಾಹಿ ಉತ್ಪಾದನಾ ಮತ್ತು ಬಳಕೆಯನ್ನು ನಿರಾಕರಿಸುವ ಹಾಗೂ ಪರಿಸರ ಸಂರಕ್ಷಣೆಯ ಕ್ರಮಗಳ ಪ್ರಸಾರ
- ಪ್ರತಿ ತಿಂಗಳ ವಾರಾಂತ್ಯದಲ್ಲಿ ಕ್ಯೂಬಾದ ಜತೆ ಸೌಹಾರ್ದ ಕಾರ್ಯಾಚರಣೆಗಳು
- ನವೆಂಬರ್ 29ರ ಅಂತರ್ರಾಷ್ಟ್ರೀಯ ಪ್ಯಾಲೆಸ್ಟೈನ್ ದಿನದಂದು ವಿಮೋಚನೆಗೆ ಜಾಗತಿಕ ಸೌಹಾರ್ದ ಕಾರ್ಯಾಚರಣೆಗಳು
- ಪಶ್ಚಿಮ ಸಹಾರಾದ ವಿಮೋಚನೆಗೆ ಶಾಶ್ವತ ಪರಿಹಾರಕ್ಕೆ ಮೇ 10 ರಂದು ಕಾರ್ಯಕ್ರಮಗಳು
- ಪಶ್ಚಿಮ ಗೋಲಾರ್ಧದ ಈ ಕೆಳಗಿನ ರಾಜಕೀಯ ಹೋರಾಟದ ಮೈಲಿಗಲ್ಲುಗಳ ಸ್ಮರಣೆಗೆ ಕಾರ್ಯಕ್ರಮಗಳು
  - ◆ ಅಕ್ಟೋಬರ್ 30 (1950) ಯು.ಎಸ್ ವಸಾಹತುಶಾಹಿ ವಿರುದ್ಧ ಸಶಸ್ತ್ರ ದಂಗೆಯ ಆರಂಭ
  - ◆ 2023 ಮಧ್ಯ ಅಮೆರಿಕಾದ ದೇಶಗಳ ಸ್ವಾತಂತ್ರ್ಯದ ದ್ವಿಶತಮಾನೋತ್ಸವ ವರ್ಷ
  - ◆ 2023 ಕ್ಯೂಬಾದ ಹುತಾತ್ಮ, ಕವಿ, ರಾಷ್ಟ್ರೀಯ ನಾಯಕ ಜೋಸ್ ಮಾರ್ತಿ 170ನೆಯ ಹುಟ್ಟುಹಬ್ಬ
  - ◆ ಕ್ಯೂಬಾದ ಕ್ರಾಂತಿಕಾರಿ ಹೋರಾಟದ ಮೈಲಿಗಲ್ಲಾದ ಮೊಂಕಾಡಾ ಬ್ಯಾರಕ್ಸ್ ಮೇಲೆ ದಾಳಿಯ 70ನೇ ವಾಷಿಕೋತ್ಸವ
  - ◆ ಲ್ಯಾಟಿನ್ ಅಮೆರಿಕದ ಪ್ರಗತಿಪರ ಮುನ್ನಡೆ ತಡೆಯಲು ನೇರ ಪರೋಕ್ಷ ಮಿಲಿಟರಿ ಕಾರ್ಯಾಚರಣೆಯ ವ್ಯೂಹ ರೂಪಿಸಿದ ಯು.ಎಸ್ ಸಾಮ್ರಾಜ್ಯಶಾಹಿಯ ಕುಖ್ಯಾತ ಮನ್ರೋ ನೀತಿಗೆ (ಡಿಸೆಂಬರ್ 2, 1823) 200 ವರ್ಷ
  - ◆ ಚಿಲಿಯಲ್ಲಿ ಅಧ್ಯಕ್ಷ ಅಲೆಂದೆ ಕೊಲೆಗೈದು ಸರಕಾರ ಉರುಳಿಸಿದ ಕ್ಷಿಪ್ರಕ್ರಾಂತಿಯ 50ನೆಯ ವಾರ್ಷಿಕ
  - ◆ ಯು.ಎಸ್ ನಿಂದ ಗ್ರೆನಾಡಾದ ಅತಿಕ್ರಮಣದ 40ನೆಯ ವಾರ್ಷಿಕ
  - ◆ ಕಮ್ಯೂನಿಸ್ಟ್ ಪ್ರಣಾಳಿಕೆಯ ಪ್ರಕಟಣೆಯ 175ನೇ ವಾರ್ಷಿಕೋತ್ಸವ
  - ◆ ಕಾರ್ಲ್ ಮಾರ್ಕ್ಸ್ ನಿಧನದ 140ನೇ ವಾರ್ಷಿಕ

ಸಮಾರೋಪ ಅಧಿವೇಶನವನ್ನು ಉದ್ದೇಶಿಸಿ ಕ್ಯೂಬಾದ ಅಧ್ಯಕ್ಷ ಮಿಗುಯೆಲ್ ಬೆರ್ಮುಡೆಝ್ ಮಾತನಾಡಿದರು. ಯು.ಎಸ್. ಮತ್ತು ಅದರ ಬೆಂಬಲಿಗರು ಕ್ಯೂಬಾದ ಮೇಲೆ ಕಠಿಣಗೊಳಿಸಿರುವ ಆರ್ಥಿಕ ದಿಗ್ಬಂಧನಗಳ ನಕಾರಾತ್ಮಕ ಪರಿಣಾಮಗಳ ಕುರಿತು ವಿವರಿಸಿದರು. ಸಂಗಾತಿಗಳ ಬದ್ಧತೆ ಮತ್ತು ಅಂತರ್ರಾಷ್ಟ್ರೀಯ ಸೌಹಾರ್ದ ಬೆಂಬಲದೊಂದಿಗೆ ಮೆಟ್ಟಿ ನಿಲ್ಲುವುದಾಗಿ ಘೋಷಿಸಿದರು.

ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳ 22ನೇ ವಾರ್ಷಿಕ ಅಂತರ್ರಾಷ್ಟ್ರೀಯ ಸಭೆಯ ಹೇಳಿಕೆ

(ಆಯ್ದ ಭಾಗಗಳು)

ಕಾರ್ಮಿಕರ ಮತ್ತು ಜನತೆಯ ಹೋರಾಟಗಳನ್ನು ನಿಗ್ರಹಿಸುವ ಮತ್ತು ಸಾಮ್ರಾಜ್ಯಶಾಹಿ–ವಿರೋಧಿ ಮತ್ತು ಕ್ರಾಂತಿಕಾರಿ ಶಕ್ತಿಗಳ ಐಕ್ಯತೆ ಮತ್ತು ಸೌಹಾರ್ದತೆಯನ್ನು ಶಕ್ತಿಗುಂದಿಸುವ ಸಾಮ್ರಾಜ್ಯಶಾಹಿಯ ಪ್ರಯತ್ನಗಳನ್ನು ಎದುರಿಸಲು, ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳ 22ನೇ ವಾರ್ಷಿಕ ಅಂತರ್ರಾಷ್ಟ್ರೀಯ ಸಭೆಯಲ್ಲಿ ಭಾಗವಹಿಸುತ್ತಿರುವ ಈ ಪಕ್ಷಗಳು ಈ ಕೆಳಗಿನ ಅಂಶಗಳನ್ನು ಒಪ್ಪಿದ್ದೇವೆ:

* ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟಗಳನ್ನು ಬಲಪಡಿಸುತ್ತೇವೆ. ಬಂಡವಾಳಶಾಹಿಯನ್ನು ಸ್ಥಿರಗೊಳಿಸುವ ಈಗಿನ ಅನ್ಯಾಯಯುತ ಮತ್ತು ಅಪ್ರಜಾಸತ್ತಾತ್ಮಕ ಅಂತರ್ರಾಷ್ಟ್ರೀಯ ವ್ಯವಸ್ಥೆಯನ್ನು ಬದಲಾಯಿಸುತ್ತೇವೆ. ಶಾಂತಿ, ಸುಸ್ಥಿರ ಬೆಳವಣಿಗೆ, ಸಾಮಾಜಿಕ ನ್ಯಾಯ ಮತ್ತು ಸೌಹಾರ್ದತೆ ಮೇಲೆ ಆಧಾರಿತವಾದ ಅಂತರ್ರಾಷ್ಟ್ರೀಯ ವ್ಯವಸ್ಥೆಯನ್ನು ಸ್ಥಾಪಿಸುತ್ತಾ ಸಮಾಜವಾದಿ ಸಮಾಜದ ರಚನೆಗೆ ಶ್ರಮಿಸುತ್ತೇವೆ.
* ದೇಶಗಳ ಸ್ವಾತಂತ್ರ್ಯ, ಸಾರ್ವಭೌಮ ಸಮಾನತೆ ಮತ್ತು ಆಂತರಿಕ ವಿಷಯಗಳಲ್ಲಿ ಮಧ್ಯಪ್ರವೇಶ ಮಾಡದಿರುವ ಹಾಗೂ ಜನಸಮುದಾಯಗಳ ಸ್ವಯಂ–ನಿರ್ಧಾರದ, ಶಾಂತಿ ಹೊಂದುವ ಮತ್ತು ತಮ್ಮ ಅಭಿವೃದ್ಧಿಯ ಹಾದಿಯ ಆಯ್ಕೆಯ ನ್ಯಾಯಬದ್ಧ ಹಕ್ಕುಗಳ ನೀತಿಯನ್ನು ಮಾನ್ಯ ಮಾಡಲು ಒತ್ತಾಯಿಸುತ್ತೇವೆ
* ಸಾಮ್ರಾಜ್ಯಶಾಹಿ ಯುದ್ಧಗಳನ್ನು, ಅಂತರ್ರಾಷ್ಟ್ರೀಯ ಸಂಬಂಧಗಳಲ್ಲಿ ಬಲಪ್ರಯೋಗವನ್ನು ಬಲವಾಗಿ ತಿರಸ್ಕರಿಸುತ್ತೇವೆ ಮತ್ತು ಶಾಂತಿಗಾಗಿ ಹೋರಾಟವನ್ನು ಪ್ರೋತ್ಸಾಹಿಸುತ್ತೇವೆ. ಜನಸಮುದಾಯಗಳ ಸಾಮಾನ್ಯ ಹಿತಾಸಕ್ತಿಗಳ ಸಂರಕ್ಷಣೆಗೆ ಮತ್ತು ಬೂರ್ಜ್ವಾ ವರ್ಗಗಳನ್ನು ವಿರೋಧಿಸಲು ಅಂತರ್ರಾಷ್ಟ್ರೀಯ ಕಾರ್ಯಾಚರಣೆ ಮತ್ತು ಸೌಹಾರ್ದತೆಯನ್ನು ಬಲಪಡಿಸುತ್ತೇವೆ.
* ಶಸ್ತ್ರಾಸ್ತ್ರ ಪೈಪೋಟಿ ಮತ್ತು ಅವುಗಳಿಂದ ಸಾಮಾಜಿಕ ವೆಚ್ಚದಲ್ಲಿ ಉಂಟಾಗುವ ಕಡಿತವನ್ನು, ಅಣ್ವಸ್ತ್ರಗಳ ಅಸ್ತಿತ್ವ ಮತ್ತು ಆಧುನಿಕೀಕರಣಗಳನ್ನು, ವಿದೇಶಿ ಮಿಲಿಟರಿ ನೆಲೆಗಳನ್ನು, ನಾಟೋವನ್ನು ವಿಸ್ತರಿಸಿ ಜಾಗತಿಕ ಮಿಲಿಟರಿ ಸಂಘಟನೆಯನ್ನಾಗಿಸುವ ಯೋಜನೆಯನ್ನು ಖಂಡಿಸುತ್ತೇವೆ ಮತ್ತು ತಿರಸ್ಕರಿಸುತ್ತೇವೆ.
* ಜಗತ್ತಿನ ವಿವಿಧ ಭಾಗಗಳಲ್ಲಿ ಹಿಂಸಾಚಾರ, ಅನ್ಯರ ದ್ವೇಷ–ಭೀತಿ, ಜನಾಂಗವಾದ ಹಾಗೂ ರಾಜಕೀಯ, ಸೈದ್ಧಾಂತಿಕ, ಸಾಮಾಜಿಕ, ಬುಡಕಟ್ಟು, ಧಾರ್ಮಿಕ ಮತ್ತು ಲಿಂಗ ಆಧಾರಿತ ಅಸಹಿಷ್ಣುತೆಗಳನ್ನು ತೀವ್ರಗೊಳಿಸುವ, ಕಮ್ಯೂನಿಸ್ಟ್–ವಿರೋಧಿ, ಪ್ರತಿಗಾಮಿ, ಉಗ್ರ ರಾಷ್ಟ್ರವಾದಿ ಮತ್ತು ಫ್ಯಾಸಿಸ್ಟ್ ಶಕ್ತಿಗಳ ಪುನಃ ಉದಯ ಮತ್ತು ಬೆಳವಣಿಗೆಗಳ ವಿರುದ್ಧ ಹೋರಾಡುತ್ತೇವೆ.
* ಜನಸಮುದಾಯಗಳು ಮತ್ತು ದೇಶಗಳ ವಿರುದ್ಧ ಒತ್ತಡ ಮತ್ತು ಬ್ಲಾಕ್ ಮೈಲ್‌ಗಳ ಉಪಕರಣವಾಗಿ ಬಳಸಲಾಗುವ ಸಾಮ್ರಾಜ್ಯಶಾಹಿಯ ಅತಿಕ್ರಮಣ, ಮೂಗು ತೂರಿಸುವಿಕೆಗಳನ್ನು ಧೃಢವಾಗಿ ಎದುರಿಸುವ ಹಾಗೂ ದಿಗ್ಬಂಧನಗಳು, ಏಕಪಕ್ಷೀಯ ದಮನ ಕ್ರಮಗಳು ಮತ್ತು ದ್ವಿಮುಖ ನೀತಿಗಳನ್ನು ತಿರಸ್ಕರಿಸುವ ಜನಸಮುದಾಯಗಳು ಮತ್ತು ದೇಶಗಳ ಜತೆ ಸೌಹಾರ್ದ ಬೆಂಬಲವನ್ನು ಬಲಪಡಿಸುತ್ತೇವೆ.
* ಬಂಡವಾಳಶಾಹಿಯ ಅನ್ಯಾಯಗಳನ್ನು ನ್ಯಾಯಸಮ್ಮತಗೊಳಿಸುವ, ಸಮಾಜವಾದ ಮತ್ತು ಕಮ್ಯೂನಿಸಂನ್ನು ಅಮಾನ್ಯಗೊಳಿಸುವ ಹಾಗೂ ದೇಶಗಳ ಸಾಂಸ್ಕೃತಿಕ ಅಸ್ಮಿತೆಯನ್ನು ನಾಶಮಾಡುವ ಉದ್ದೇಶದ, ಸಾಮ್ರಾಜ್ಯಶಾಹಿಯ ಸೈದ್ಧಾಂತಿಕ, ಸಾಂಸ್ಕೃತಿಕ ಆಕ್ರಮಣಗಳನ್ನು ಪ್ರತಿರೋಧಿಸಲು ಮಾರ್ಕ್ಸ್‌ವಾದ ಮತ್ತು ಲೆನಿನ್‌ವಾದಗಳನ್ನು ರಕ್ಷಿಸಿ ಬೆಳೆಸುತ್ತೇವೆ.
* ಜನಸಮುದಾಯಗಳ ಎಲ್ಲ ನ್ಯಾಯಯುತ ಮತ್ತು ವಿಮೋಚನಾ ಉದ್ದೇಶಗಳ ಪರವಾಗಿ ಹೋರಾಟಗಳನ್ನು ಇಮ್ಮಡಿಗೊಳಿಸುತ್ತೇವೆ. ಬಂಡವಾಳಶಾಹಿಯ ವಿರುದ್ಧ ಮತ್ತು ಅವರ ಹಕ್ಕುಗಳ ರಕ್ಷಣೆಗಾಗಿ ಕಾರ್ಮಿಕರು, ರೈತರು, ಕೃಷಿ ಕೂಲಿಕಾರರು, ಬುಡಕಟ್ಟು ಜನರು, ಯುವಜನರು ಮತ್ತು ಮಹಿಳೆಯರ ಸಂಘಟನೆಗಳೊಂದಿಗೆ ಸೌಹಾರ್ದತೆಯ್ನು ಹೆಚ್ಚಿಸುತ್ತೇವೆ. ವಿವಿಧ ರೀತಿಯ ನಿರಾಶ್ರಿತರು ಮತ್ತು ಯುದ್ಧದ ಬಲಿಪಶುಗಳ ಪರವಾಗಿ ನಿಲ್ಲುತ್ತೇವೆ.
* ಪರಿಸರವನ್ನು ನಾಶ ಮಾಡುವ ಮತ್ತು ಭೂಪರಿಸರ ವ್ಯವಸ್ಥೆಯನ್ನು ಮತ್ತು ಮನುಕುಲದ ಅಸ್ತಿತ್ವಕ್ಕೇ ಅಪಾಯ ಒಡ್ಡುವ ಬರಿಯ ಗರಿಷ್ಠ ಲಾಭದ ಮೇಲೆ ಆಧಾರಿತ ಬಂಡವಾಳಶಾಹಿ ಅಭಿವೃದ್ಧಿ ಮಾದರಿಯನ್ನು ಖಂಡಿಸುತ್ತೇವೆ ಮತ್ತು ಅದರ ವಿರುದ್ಧ ಹೋರಾಡುತ್ತೇವೆ.

ತಹಶೀಲ್ದಾರರು ಮುತುವರ್ಜಿ ವಹಿಸಿ ಅಧಿಕಾರಿಗಳ ಜೊತೆಗೆ ಮಾತನಾಡಿ ಪರಿಹಾರ ಕೊಡಬೇಕು ಎಂದು ಹೇಳಿದರು. ಆಗ ಅದಕ್ಕೆ ಕೃಷಿ ಅಧಿಕಾರಿಗಳು ಸಹಮತ ವ್ಯಕ್ತಪಡಿಸಿ ಗೊಬ್ಬರದಂಗಡಿ ಮಾಲೀಕರಿಗೆ ಕೂಡಲೇ ಪರಿಹಾರ ನೀಡಬೇಕೆಂದು ಹೇಳಿದರು. ಆಗ ಗೊಬ್ಬರದಂಗಡಿ ಮಾಲೀಕರು ಮನವಿ ಮಾಡಿಕೊಂಡು ನಮಗೆ ಮೂರು ದಿನಗಳ ಕಾಲ ಕಾಲಾವಕಾಶ ನೀಡಬೇಕೆಂದು ಸಂಘದ ಮುಖಂಡರ ಹಾಗೂ ಅಧಿಕಾರಿಗಳ ಹತ್ತಿರ ಮನವಿ ಮಾಡಿಕೊಂಡರು. ಆಗ ನಮ್ಮ ಸಂಘವು ಒಂದುಕಡೆ ರೈತರನ್ನು ಸೇರಿಸಿ ಕಾಲಾವಕಾಶ ನೀಡೋಣ ಎಂದು ತೀರ್ಮಾನಿಸಿ ಅಧಿಕಾರಿಗಳಿಗೆ ತಿಳಿಸಲಾಯಿತು ಈ ಹೋರಾಟದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷರು ವಿ.ಎಸ್. ಶಿವಶಂಕರ್ ಜಿಲ್ಲಾ ಕಾರ್ಯದರ್ಶಿ ಗಾಳಿ ಬಸವರಾಜ ಹಾಗೂ ಕುರುಗೋಡು ಘಟಕದ ಅಧ್ಯಕ್ಷ ಕೆಂಚಪ್ಪ ಸದಸ್ಯ ಹುಲೆಪ್ಪ ಹಾಗೂ ಸಿಐಟಿಯು ತಾಲೂಕು ಸಮಿತಿ ಸಂಚಾಲಕರು ಎಸ್.ಪಿ. ಮಹಮದ್ ಖಾನ್ ಯು ಶಂಕ್ರಪ್ಪ ಹಮಾಲಿ ಸಂಘದ ಮುಖಂಡ ಸೋಮಪ್ಪ ಇದ್ದರು.

NEW No. MAG(3)/NPP/205/2021-2022
JANASHAKTHI KANNADA VARA PATRIKE November 28-December 4, 2022 Price: Rs. 10/- Date of Publication: 25 November 2022 RNI No. KARKAN /2006/17926 Posted on 29-11-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate -** Rs. 2



1998 ರಲ್ಲಿ ಡಾ.ಅಮೃತ ಸೋಮೇಶ್ವರ ಅವರು ಬರೆದ "ಭಗವತಿ ಆರಾಧನೆ" ಕೃತಿಯ ಇಂಗ್ಲಿಷ್ ಅನುವಾದ ಈಗ ಕೆಲವು ದಿನಗಳ ಹಿಂದೆಯಷ್ಟೆ ಲೋಕಾರ್ಪಣೆಗೊಂಡಿದೆ. ಕನ್ನಡ, ತುಳುವಿನಲ್ಲಿ ಹಲವಾರು ಸೃಜನಶೀಲ ಕೃತಿಗಳ ಜೊತೆ ತುಳು ಜಾನಪದ-ಸಂಸ್ಕೃತಿ, ಯಕ್ಷಗಾನ ಸಂಶೋಧನೆ ಇತ್ಯಾದಿ ಕ್ಷೇತ್ರಗಳಲ್ಲಿ ನೂರಕ್ಕೂ ಮೀರಿದ ಪುಸ್ತಕಗಳನ್ನು ಅಮೃತರು ಬರೆದಿದ್ದಾರೆ. ಅವರು ಹೊಸದಾಗಿ ಪುಸ್ತಕ ಪ್ರಕಟಿಸಿದ್ದಾರೆಂದರೆ, ಅದನ್ನು ಬಾಚಿ ಓದುವ ದೊಡ್ಡ ಓದುಗ ವರ್ಗವೇ ಇದೆ.

ಡಾ.ಅಮೃತ ಸೋಮೇಶ್ವರರ "ಭಗವತಿ ಆರಾಧನೆ" ಇಂಗ್ಲಿಷಿನಲ್ಲಿ

ವಾಸುದೇವ ಉಚ್ಚಿಲ

ಮಲೆಯಾಳ ಭಾಷೆ ಆಡುವ ಭಗವತಿ ದೈವಗಳ ಆರಾಧನೆಯ ಬಗ್ಗೆ ಅವರು ಹಲವಾರು ಬರಹ, ಗ್ರಂಥ ಪ್ರಕಟಿಸಿದ್ದರೂ, ಕರಾವಳಿಯ ವಿದ್ವದ್ವಲಯದಲ್ಲಿ ಅವರು ತುಳು, ಯಕ್ಷಗಾನ ವಿದ್ವಾಂಸರೆಂದೇ ಪ್ರಸಿದ್ಧರಾಗಿದ್ದಾರೆ. ಉತ್ತರ ಮಲಬಾರಿನಿಂದ ಮಂಗಳೂರಿನ ವರೆಗೆ ವಾಸಿಸುವ ಮಲೆಯಾಳ ಮನೆಮಾತಿನ ಸಮುದಾಯದ ಆಚರಣೆಗಳು, ಆರಾಧನೆಗಳ ಬಗ್ಗೆ ತುಳು ವಿದ್ವಾಂಸರು ಗಮನ ಹರಿಸಿದ್ದು ಕಡಿಮೆ. ಅಮೃತರು "ಭಗವತಿ ಆರಾಧನೆ" ಕನ್ನಡದಲ್ಲಿ ಬರೆದು 24 ವರ್ಷಗಳೇ ಆಗಿದ್ದರೂ ಕನ್ನಡ ತುಳು ವಿದ್ವಾಂಸರು ಈ ಮಹಾನ್ ಗ್ರಂಥದ ಬಗ್ಗೆ ಪರಿಶೀಲಿಸಿದ್ದು ಕಂಡು ಬರುವುದಿಲ್ಲ.

ಮಲೆಯಾಳಂ ಭಾಷೆಯ ಒಂದು ಉಪಭಾಷೆಯು ಅಮೃತರ ಮನೆ ಭಾಷೆಯಾಗಿದೆ. ಈ ಭಾಷೆಯನ್ನು ಆಡುವ ತೀಯ (ಬೆಲ್ಚಡ) ಮೋಯ (ಬೋವಿ) ವಣಿಯ (ಗಾಣಿಗ) ಶಾಲಿಯ (ನೇಕಾರ) ಇತ್ಯಾದಿ ಜಾತಿಗಳವರು ಭಗವತಿ ದೈವ (ಥೆಯ್ಯಂ) ಆರಾಧಕರಾಗಿದ್ದು, ಈ ಆರಾಧನೆಯು ಹೋಲಿಕೆಯಲ್ಲಿ ತುಳುನಾಡಿನ ಬೂತಾರಾಧನೆಯಂತಿದೆ. ಕೆಲವು ಸ್ಥಳಗಳಲ್ಲಿ ಭಗವತಿ ಆರಾಧನೆಯೊಂದಿಗೆ ಕೆಲವು ತುಳು ಬೂತಗಳ ಆರಾಧನೆಗಳೂ ನಡೆಯುತ್ತವೆ. ಇಂಥ ಆರಾಧನಾ ಸಂಸ್ಕೃತಿಯ ವಿಸ್ತೃತ ಅಧ್ಯಯನವನ್ನು "ಭಗವತಿ ಆರಾಧನೆ" ಗ್ರಂಥದಲ್ಲಿ ಅಮೃತರು ನಡೆಸಿದ್ದಾರೆ.

ಭಗವತಿ ಆರಾಧನೆಯು ಉತ್ತರ ಕೇರಳದಲ್ಲಿ ವ್ಯಾಪಕವಾಗಿದೆ. ಅತ್ಯಂತ ಪ್ರಾಚೀನವಾದ ಕೊಡುಂಗಲ್ಲೂರು ಭಗವತಿ ಕ್ಷೇತ್ರವು ಹೆಚ್ಚು ಜನಪ್ರಿಯವಾಗಿದೆ. ಕಾಸರಗೋಡು ಜಿಲ್ಲೆ, ಮಂಗಳೂರು ತಾಲೂಕುಗಳ ಭಗವತಿ ಕ್ಷೇತ್ರಗಳನ್ನು ಅಮೃತರು ವ್ಯಾಪಕವಾಗಿ ಅಧ್ಯಯನ ಮಾಡಿದ್ದಾರೆ. ಮೋಯರ್ (ಬೋವಿ) ಸಮುದಾಯಕ್ಕೆ ಸೇರಿದ 11 ಕ್ಷೇತ್ರಗಳ ಆರಾಧನೆಯನ್ನು ವಿಸ್ತಾರವಾಗಿ ವಿವರಣೆ ಮಾಡಲಾಗಿದೆ. ಸೋಮೇಶ್ವರ-ಅಡ್ಕ ಎಂಬಲ್ಲಿನ ಕ್ಷೇತ್ರದ ವಿವಿಧ ಆಚರಣೆ, ಹಬ್ಬ ಹರಿದಿನಗಳ ಬಗ್ಗೆ ವಿವರಗಳಲ್ಲಿ ಕಾಣಿಸಲಾಗಿದೆ. ಅಲ್ಲದೆ ಈ ಎರಡೂ ಜಿಲ್ಲೆಗಳ ತೀಯರು, ವಣಿಯನ್, ಶಾಲಿಯರ ಹಲವು ಭಗವತಿ ಸ್ಥಾನಗಳ ವೈಶಿಷ್ಟ್ಯಗಳನ್ನೂ ಗ್ರಂಥದಲ್ಲಿ ಕಾಣಿಸಲಾಗಿದೆ.

ಭಗವತಿಯ ಸ್ಥಳ ಪುರಾಣಗಳಲ್ಲಿ ಸಾಮಾನ್ಯವಾದ ಅಂಶವೆಂದರೆ, ಭಗವತಿಗಳು ತಮ್ಮ ಜೊತೆಗಾರರಾದ ಚಾಮುಂಡಿಗಳು, ಪುರುಷ ದೈವಗಳು ಮತ್ತು ಸಹಾಯಕ ದೈವಗಳ ಒಡಗೂಡಿ ದಾರುಕನೆಂಬ ದೈತ್ಯನನ್ನು ನಾಶಮಾಡಿ, ಬಳಿಕ ನಾವೆಗಳಲ್ಲಿ ಕಡಲಿನಲ್ಲಿ ಸಂಚಾರ ಮಾಡುತ್ತಾ, ಬೇರೆ ಬೇರೆ ಊರುಗಳಲ್ಲಿ ನೆಲೆ ನಿಲ್ಲುವ ಕಥೆ ಇದೆ. ದಕ್ಷಿಣದ ತ್ರಿಕರಿಪುರದ ಸಮೀಪದ ಕ್ವಯಂಗರ ಎಂಬಲ್ಲಿಂದ ತೊಡಗಿ ಉತ್ತರದ ಸೋಮೇಶ್ವರದ ವರೆಗಿನ 11 ಸ್ಥಳಗಳಲ್ಲಿ ಮೋಯ ಸಮುದಾಯದವರು ಆರಾಧಿಸುವ ಭಗವತಿಗಳನ್ನು ವಿವಿಧ ಹೆಸರುಗಳಲ್ಲಿ ಸ್ಥಾಪಿಸಲಾಗಿದೆ. ಮೇಲೆ ಹೇಳಿದ ಸಹಾಯಕ ದೈವಗಳಲ್ಲಿ ಗುಳಿಗ, ಬೊಬ್ಬರ್ಯ, ಪಂಜುರ್ಲಿ ಇತ್ಯಾದಿ ತುಳುವರು ಆರಾಧಿಸುವ ದೈವಗಳೂ ಇರುವ ಸಂಕರವನ್ನು ಕಾಣುತ್ತೇವೆ. ಭಗವತಿಯ ಜೊತೆ ಚಾಮುಂಡಿಯರೂ, ವೀರರನ್ನು ಪ್ರತಿನಿಧಿಸುವ ಪುರುಷ ದೈವಗಳೂ ಮಲೆಯಾಳ ಮೂಲದ್ದಾಗಿದೆ. ಉಗ್ರ ಸ್ವರೂಪದ ವಿಷ್ಣುಮೂರ್ತಿ ದೈವವು ಮಂಗಳೂರಿನ ಕುಡುಪ್ಪಾಡಿ ಎಂಬಲ್ಲಿ ಉದ್ಭವವಾಗಿ ದಕ್ಷಿಣದ ವಿವಿಧ ಸ್ಥಾನಗಳಲ್ಲಿ ನೆಲೆ ಊರಿದಂತೆ ಕಂಡು ಬರುತ್ತದೆ. ಭಗವತಿ ಮತ್ತು ಪರಿವಾರ ದೈವಗಳು ದಕ್ಷಿಣದಿಂದ ಉತ್ತರಕ್ಕೆ ಸಂಚರಿಸಿದ ಯಾತ್ರೆಗಳಿಗೂ ತುಳುನಾಡ ಬೂತಗಳ ಸಂಚಾರ ಯಾತ್ರೆಗಳಿಗೂ ಒಂದು ಸಾದೃಶ್ಯವನ್ನು ನಾವು ಕಾಣಬಹುದಾಗಿದೆ. ಭಗವತಿಗಳ ಮತ್ತು ಬೂತಗಳ ಸಂಚಾರಯಾತ್ರೆ ಎಂದರೆ, ಅವುಗಳನ್ನು ಆರಾಧಿಸುವ ಸಮುದಾಯಗಳು ವಲಸೆ ಹೋದ ದಾರಿಗಳೇ ಆಗಿವೆ ಎಂದು ಕಂಡು ಬರುತ್ತದೆ.

ಮಲೆಯಾಳ ಸಮುದಾಯದ ಒಡನಾಟವಿದ್ದವರು "ಭಗವತೀ ಆರಾಧನೆ" ಗ್ರಂಥವನ್ನು ಓದಿ ತೌಲನಿಕವಾಗಿ ವಿವೇಚಿಸಲು ಸಾಧ್ಯವಿದ್ದೀತು. ಮಲಬಾರು ಮತ್ತು ಕೇರಳದಲ್ಲಿ ಮಲಯಾಳ ಭಾಷೆಯಲ್ಲಿ "ಭಗವತೀ ಆರಾಧನೆ" ಬಗ್ಗೆ ಅಧ್ಯಯನಗಳು ನಡೆದಿದ್ದರೂ, ಕನ್ನಡ ಭಾಷೆಯ ಓದುಗರಾದ ನಮಗೆ ಅದು ತಲುಪಿರಲಾರದು. ಅದೇ ರೀತಿ ಅಮೃತ ಸೋಮೇಶ್ವರರು ಕನ್ನಡದಲ್ಲಿ ಬರೆದ "ಭಗವತೀ ಆರಾಧನೆ" ಗ್ರಂಥವೂ ಕೇರಳದ ಮಲಯಾಳಂ ಜಾನಪದ ತಜ್ಞರಿಗೆ ತಲುಪಿರಲಾರದು. ಇಂಥ ಹಿನ್ನೆಲೆಯಲ್ಲಿ "ಭಗವತಿ ಆರಾಧನೆ" ಎಂಬ ಇಂಗ್ಲಿಷ್ ಗ್ರಂಥ ಬಂದಿರುವುದು ಕೇರಳ ಕರ್ನಾಟಕದ ಎಲ್ಲ ಸಂಸ್ಕೃತಿ ಸಂಶೋಧಕರಿಗೆ ಒಂದು ಉಪಯುಕ್ತ ಅಧ್ಯಯನ ಗ್ರಂಥ ಎನ್ನುವುದರಲ್ಲಿ ಅತಿಶಯೋಕ್ತಿ ಇಲ್ಲ. ಈ ಅನುವಾದವನ್ನು ಮಾಡಿದ ದಯಾನಂದ ಉಚ್ಚಿಲ್ ಅವರ ಶ್ರಮ ಅತ್ಯಂತ ಶ್ಲಾಘನೀಯವಾದುದು. ಮಲಯಾಳ ಸಂಸ್ಕೃತಿಯ ಆಚರಣೆ, ನಡೆವಳಿ, ಪದಕೋಶಗಳನ್ನು ಕನ್ನಡ ಲಿಪಿಯಲ್ಲಿ ಓದಿ, ಅದರ ಅರ್ಥವನ್ನು ಸೂಕ್ಷ್ಮದಲ್ಲಿ ಗ್ರಹಿಸಿ, ಅದಕ್ಕೆ ಸೂಕ್ತವಾದ ಇಂಗ್ಲಿಷ್ ಪದಗಳ ಆಯ್ಕೆ ನಿಜವಾಗಿಯೂ ಅನುವಾದಕರ ಭಾಷಾಜ್ಞಾನಕ್ಕೆ ಸವಾಲು ಹಾಕುವಂಥಾದ್ದು. ಅದನ್ನು ದಯಾನಂದ ಉಚ್ಚಿಲ್ ಅವರು ಸಮರ್ಥವಾಗಿ ನಿಭಾಯಿಸಿದ್ದಾರೆ.

87 ವರ್ಷಗಳನ್ನು ಪೂರೈಸಿರುವ ಅಮೃತ ಸೋಮೇಶ್ವರರು ಈಗಲೂ ಬರೆವಣಿಗೆ ಮುಂದುವರೆಸಿದ್ದಾರೆ. 1890ರ ದಶಕದಲ್ಲಿ ರೆವರೆಂಡ್ ಮ್ಯಾನ್ನರ್ ಅವರ ಬರವಣಿಗೆಗಳಿಂದ ಮತ್ತು ಎ.ಸಿ.ಬರ್ನಲ್ ಅವರು ಸಂಗ್ರಹಿಸಿದ ತುಳು ಪಾಡ್ದನಗಳ ಪ್ರಕಟಣೆಯಿಂದ ತುಳುವ ಸಂಸ್ಕೃತಿಯ ಅಧ್ಯಯನ ಮೊದಲಾಯಿತಾದರೂ, ತುಳು ಪಾಡ್ದನ ಹಾಗೂ ಜನಪದಗಳ ವಿಸ್ತಾರವಾದ ಅಧ್ಯಯನ ಮೊದಲಾದದ್ದು ಅಮೃತ ಸೋಮೇಶ್ವರರಿಂದಲೇ-ಅದು 1960ರ ದಶಕದಲ್ಲಿ. ಬಳಿಕ ತುಳುವ ಸಂಸ್ಕೃತಿ ಅಧ್ಯಯನದ ಬಗ್ಗೆ ಎಂಟತ್ತು ಕೃತಿಗಳನ್ನು ಅವರು ರಚಿಸಿದ್ದಾರೆ. ಹಂಪಿ ವಿಶ್ವವಿದ್ಯಾನಿಲಯ ಪ್ರಕಟಿಸಿದ "ತುಳು ಪಾಡ್ದನ ಸಂಪುಟ" ಎಂಬ ಅವರ ಬೃಹತ್ ಸಂಗ್ರಹದಲ್ಲಿ ಪಾಡ್ದನಗಳ ಕನ್ನಡ ಅನುವಾದಗಳನ್ನೂ ಒದಗಿಸಿದ್ದಾರೆ. ಇದೇ ರೀತಿಯ ಸಂಶೋಧನೆಗಳನ್ನು ಅವರು ಯಕ್ಷಗಾನ ಕ್ಷೇತ್ರದಲ್ಲೂ ಮಾಡಿದ್ದಾರೆ.

ಅಮೃತ ಸೋಮೇಶ್ವರರ ಸಂಶೋಧನ ಬರಹಗಳಲ್ಲಿ, ಅವರು ನಿರ್ದಿಷ್ಟ ತೀರ್ಮಾನಗಳನ್ನು ಕೊಡುವಲ್ಲಿ, ಸಾಕ್ಷ್ಯಾಧಾರವನ್ನು ಅವಲಂಬಿಸಿರುತ್ತಾರೆ. ಸಾಕ್ಷ್ಯಾಧಾರ ಇಲ್ಲದಲ್ಲಿ ಹೇರಳ ಮಾಹಿತಿಗಳನ್ನು ಒದಗಿಸುತ್ತಾರೆ. ಇದರಿಂದ ಪೂರ್ವಗ್ರಹಗಳಿಲ್ಲದ ವೈಜ್ಞಾನಿಕ ವಿಧಾನ ಅವರ ಸಂಶೋಧನ ವಿಧಾನವೆಂದು ಪ್ರಶಂಸೆಗೆ ಪಾತ್ರವಾಗಿದೆ. ಸಮಕಾಲೀನ ಹಿರಿಯ ವಿದ್ವಾಂಸರಲ್ಲಿ ಪ್ರಗತಿಪರ ಮನೋಧರ್ಮ ಉಳ್ಳವರು ಅವರಾಗಿದ್ದಾರೆ.

ಹಾಲು ಉತ್ಪಾದಕ ರೈತರಿಗೆ ಲೀಟರ್‌ಗೆ ಕನಿಷ್ಠ ಐವತ್ತು ರೂ. ಮಾಡುವಂತೆ ಆಗ್ರಹ



ನವೆಂಬರ್ 26, 2022 ರಂದು ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿ ಕಛೇರಿ ಎದುರು ರೇಷ್ಮೆ, ತೋಟಗಾರಿಕೆ ಇಲಾಖೆಗಳನ್ನು ಕೃಷಿ ಇಲಾಖೆ ಜೊತೆ ವಿಲೀನ ಮಾಡುವ ನಿರ್ಧಾರ ರದ್ದುಪಡಿಸುವಂತೆ ಹಾಗೂ ಹಾಲು ಉತ್ಪಾದಕ ರೈತರಿಗೆ ನೀಡುವ ಖರೀದಿ ದರ ಲೀಟರ್ ಗೆ ಕನಿಷ್ಠ ಐವತ್ತು ರೂ. ಮಾಡುವಂತೆ ಆಗ್ರಹಿಸಿ ಕರ್ನಾಟಕ ಪ್ರಾಂತ ರೈತ ಸಂಘ(ಕೆಪಿಆರ್‌ಎಸ್) ಚಿಕ್ಕಬಳ್ಳಾಪುರ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಪ್ರತಿಭಟನಾ ಧರಣಿ ನಡೆಯಿತು.

ಕರ್ನಾಟಕ ಪ್ರಾಂತ ರೈತ ಸಂಘ(ಕೆಪಿಆರ್‌ಎಸ್) ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ಯಶವಂತ, ಜಿಲ್ಲಾ ಅಧ್ಯಕ್ಷರಾದ ಪಿ.ಮಂಜುನಾಥ್ ರೆಡ್ಡಿ, ಜಿಲ್ಲಾ ಕಾರ್ಯದರ್ಶಿ ಹೆಚ್.ಪಿ. ಲಕ್ಷ್ಮಿ ನಾರಾಯಣ ರವರು ಪ್ರತಿಭಟನಕಾರರನ್ನು ಉದ್ದೇಶಿಸಿ ಮಾತಾನಾಡಿದರು.

ಚಿಕ್ಕಬಳ್ಳಾಪುರ ಜಿಲ್ಲಾ ಗ್ರಂಥಾಲಯದಿಂದ ಮೆರವಣಿಗೆ ಮೂಲಕ ನೂರಾರು ಸಂಖ್ಯೆಯಲ್ಲಿ ಬಂದು ಜಿಲ್ಲಾಧಿಕಾರಿ ಕಛೇರಿ ಎದುರು ಸಮಾವೇಶಗೊಂಡ ಪ್ರತಿಭಟನಾ ಸಭೆಯಲ್ಲಿ ಬಿ.ಎನ್. ಮುನಿಕೃಷ್ಣಪ್ಪ, ರವಿಚಂದ್ರರೆಡ್ಡಿ, ಶ್ರೀರಾಮಪ್ಪ, ಎಂ.ಎಸ್. ಆನಂದ, ಹೇಮಚಂದ್ರ, ಆದಿನಾರಾಯಣಸ್ವಾಮಿ, ಪಾತಿಮಾ ಬಿ., ಭಾರತಿ, ಮಂಜುನಾಥಚಾರಿ, ಷಾ ನವಾಜ್ ಖಾನ್, ವೈ.ಎನ್. ನಾಗರಾಜ, ವೆಂಕಟರಾಜು, ರಾಜಪ್ಪ, ಆದಿನಾರಾಯಣರೆಡ್ಡಿ, ಪಿ.ಸಿ. ಮಂಜುನಾಥ, ಶ್ರೀರಾಮ ನಾಯ್ಕ, ಎಸ್. ವೆಂಕಟರಾಮರೆಡ್ಡಿ, ಆರ್. ರಾಮಪ್ಪ., ಕೆ.ವಿ.ಪ್ರಭಾಕರ್ ರೆಡ್ಡಿ, ರಾಮಚಂದ್ರ, ರಾಮರೆಡ್ಡಿ, ಮುನಿಸ್ವಾಮಿ, ಲಕ್ಷ್ಮಿನಾರಾಯಣರೆಡ್ಡಿ, ರಾಹುಲ್, ವೆಂಕಟರೆಡ್ಡಿ ಸೇರಿದಂತೆ ನೂರಾರು ಜನರು ಭಾಗವಹಿಸಿದ್ದರು.

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**